

ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ



# ತಾಲ್ಲೂಕು ಸಮಾಜ ವಿಜ್ಞಾನ ವೇದಿಕೆ

**ತಾಲ್ಲೂಕು : ಹೊಸನಗರ** **ಜಿಲ್ಲೆ : ಶಿವಮೊಗ್ಗ**



## ಎಸ್. ಎಸ್. ಎಲ್. ಸಿ. ಸಮಾಜ ವಿಜ್ಞಾನದಲ್ಲಿ ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ಕನಿಷ್ಠ 40% ಅಂಕ ಗಳಿಕೆಯ ಯತ್ನ

# "ಸ್ಫೂರ್ತಿ"

'ಸಾಧಿಸುವ ಛಲ, ಸ್ಪಷ್ಟ ಗುರಿ, ಆತ್ಮವಿಶ್ವಾಸವಿದ್ದರೆ ಯಶಸ್ಸು ಕಟ್ಟಿಟ್ಟ ಬುತ್ತಿ'

ಹೊಸನಗರ ತಾಲ್ಲೂಕು ಸಮಾಜ ವಿಜ್ಞಾನ ಶಿಕ್ಷಕರ ಸಂಘ

# ಅಧ್ಯಕ್ಷರ ನುಡಿ

ಹೊಸನಗರ ತಾಲ್ಲೂಕಿನ ಎಲ್ಲಾ ಪ್ರೌಢಶಾಲೆಯ ಸಮಾಜ ವಿಜ್ಞಾನ ವಿಷಯದಲ್ಲಿ 100% ರಷ್ಟು ಯಶಸ್ಸು ಕಾಣಲು ಹೊಸನಗರ ತಾಲ್ಲೂಕು ಮಟ್ಟದ ಸಮಾಜ ವಿಜ್ಞಾನ ಸಂಘದಿಂದ "ಸ್ಫೂರ್ತಿ" ಎಂಬ ಉತ್ತೀರ್ಣ ಕೈಪಿಡಿಯನ್ನು ಹೊರತರಲಾಗಿದ್ದು, ಎಸ್. ಎಸ್. ಎಲ್. ಸಿ. ಮಕ್ಕಳು ಸುಲಭವಾಗಿ ಅಂಕ ಗಳಿಸಲು ಸಹಕಾರಿಯಾಗಲಿದೆ. ಈ ಕೈಪಿಡಿಯನ್ನು ಹೊರತರಲು ಸಹಕರಿಸಿದ ತಾಲ್ಲೂಕಿನ ಎಲ್ಲಾ ಸಮಾಜ ವಿಜ್ಞಾನ ಶಿಕ್ಷಕರಿಗೆ, ಈ ಕೈಪಿಡಿಯನ್ನು ಅಂದವಾಗಿ ಮುದ್ರಿಸಿಕೊಟ್ಟ ಶ್ರೀ ಸುಬ್ರಹ್ಮಣ್ಯ ಕೆ. ಭಾಗವತ, ನಗರ ಇವರಿಗೂ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಶುಭ ಹಾರೈಕೆಗಳೊಂದಿಗೆ,

ಶಿವಾನಂದ ಕೆ. ವಿ.
ಅಧ್ಯಕ್ಷರು
ತಾಲ್ಲೂಕು ಸಮಾಜ ವಿಜ್ಞಾನ ಶಿಕ್ಷಕರ ಸಂಘ
ಹೊಸನಗರ

| ಪರಿವಿಡಿ | ನಿರೀಕ್ಷಿತ ಅಂಕ |
|---|---|
| ಭಾರತಕ್ಕೆ ಯುರೋಪಿಯನ್ನರ ಆಗಮನ | 02 ಅಂಕ |
| ಬ್ರಿಟಿಷ್ ಆಳ್ವಿಕೆಯ ವಿಸ್ತರಣೆ | 02 ಅಂಕ |
| ಸ್ವಾತಂತ್ರ್ಯೋತ್ತರ ಭಾರತ | 02 ಅಂಕ |
| 20ನೇ ಶತಮಾನದ ರಾಜಕೀಯ ಆಯಾಮ | 02 ಅಂಕ |
| ಭಾರತದ ವಿದೇಶಾಂಗ ನೀತಿ | 02 ಅಂಕ |
| ಅನ್ಯ ರಾಷ್ಟ್ರಗಳೊಂದಿಗೆ ಭಾರತದ ಸಂಬಂಧ | 02 ಅಂಕ |
| ಜಾಗತಿಕ ಸಮಸ್ಯೆಗಳು – ಭಾರತದ ಪಾತ್ರ | 02 ಅಂಕ |
| ಸಾಮಾಜಿಕ ಸ್ತರ ವಿನ್ಯಾಸ | 02 ಅಂಕ |
| ಸಾಮಾಜಿಕ ಚಳುವಳಿಗಳು | 02 ಅಂಕ |
| ಭಾರತದ ಮೇಲ್ಮೈ ಲಕ್ಷಣಗಳು | 02 ಅಂಕ |
| ಭಾರತದ ಮಣ್ಣುಗಳು | 02 ಅಂಕ |
| ಭಾರತದ ಭೂ ಸಂಪನ್ಮೂಲಗಳು | 02 ಅಂಕ |
| ಅಭಿವೃದ್ಧಿ | 02 ಅಂಕ |
| ಗ್ರಾಮೀಣ ಅಭಿವೃದ್ಧಿ | 02 ಅಂಕ |
| | |
| ಪರಿವಿಡಿ | ನಿರೀಕ್ಷಿತ ಅಂಕ |
| ಬ್ರಿಟಿಷ್ ಆಳ್ವಿಕೆಯ ಪರಿಣಾಮ | 03 ಅಂಕ |
| ಭಾರತದಲ್ಲಿ ಬ್ರಿಟಿಷ್ ಆಳ್ವಿಕೆಯ ಪ್ರತಿರೋಧ | 03 ಅಂಕ |
| ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣಾ ಚಳುವಳಿ | 03 ಅಂಕ |
| ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ | 03 ಅಂಕ |
| ಭಾರತದ ಸಮಸ್ಯೆಗಳು ಮತ್ತು ಪರಿಹಾರೋಪಾಯ | 03 ಅಂಕ |
| ಭಾರತದ ವಿದೇಶಾಂಗ ನೀತಿ | 03 ಅಂಕ |
| ಸಾಮಾಜಿಕ ಸ್ತರ ವಿನ್ಯಾಸ | 03 ಅಂಕ |
| ದುಡಿಮೆ | 03 ಅಂಕ |
| ಭಾರತದ ಸಾರಿಗೆ ಸಂಪರ್ಕ | 03 ಅಂಕ |
| ಕೈಗಾರಿಕೆ | 03 ಅಂಕ |
| ಭಾರತದ ನೈಸರ್ಗಿಕ ವಿಪತ್ತು | 03 ಅಂಕ |
| ಗ್ರಾಮೀಣ ಅಭಿವೃದ್ಧಿ | 03 ಅಂಕ |
| ಹಣ ಮತ್ತು ಸಾಲ | 03 ಅಂಕ |
| ಬ್ಯಾಂಕಿನ ವ್ಯವಹಾರಗಳು | 03 ಅಂಕ |
| ವ್ಯವಹಾರದ ಜಾಗತೀಕರಣ | 03 ಅಂಕ |
| ಉದ್ಯಮಗಾರಿಕೆ | 03 ಅಂಕ |
| ವ್ಯವಹಾರ ಅಧ್ಯಯನ – ಜಾಗತೀಕರಣ | 03 ಅಂಕ |

| ಪರಿವಿಡಿ | ನಿರೀಕ್ಷಿತ ಅಂಕ |
|---|---|
| ಸ್ವಾತಂತ್ರ್ಯ ಹೋರಾಟ | 04 ಅಂಕ |
| ಗಾಂಧಿಯುಗ ಮತ್ತು ರಾಷ್ಟ್ರೀಯ ಹೋರಾಟ | 04 ಅಂಕ |
| 20ನೇ ಶತಮಾನದ ರಾಜಕೀಯ ಆಯಾಮ | 04 ಅಂಕ |
| ಭಾರತದ ಸಮಸ್ಯೆಗಳು ಮತ್ತು ಪರಿಹಾರೋಪಾಯ | 04 ಅಂಕ |
| ಭಾರತದ ಅರಣ್ಯ ಸಂಪತ್ತು | 04 ಅಂಕ |

**ಭಾರತದ ಭೂಪಟ ಗುರುತು ಸ್ಥಳಗಳು** **05 ಅಂಕ**

## :: ಒಂದು ಅಂಕದ ಪ್ರಶ್ನೆಗಳು ::

### ಜಾಗತಿಕ ಸಮಸ್ಯೆಗಳು ಹಾಗೂ ಭಾರತದ ಪಾತ್ರ

1. ವಿಶ್ವಸಂಸ್ಥೆಯು ಮಾನವ ಹಕ್ಕುಗಳ ಘೋಷಣೆಯನ್ನು ಅಂಗೀಕರಿಸಿದ ವರ್ಷ 1948
2. ಯಾವ ದಿನವನ್ನು ನಾವು ಪ್ರತಿ ವರ್ಷ ಮಾನವ ಹಕ್ಕುಗಳ ದಿನವೆಂದು ಆಚರಿಸುತ್ತೇವೆ ? ಡಿಸೆಂಬರ್ 10
3. ಭಾರತವು ನಿರಂತರವಾಗಿ ಪ್ರತಿಪಾದಿಸುತ್ತಿರುವುದು ಸಾರ್ವತ್ರಿಕ ಮಾನವ ಹಕ್ಕುಗಳನ್ನು
4. ಭಾರತ ಸಂವಿಧಾನದ ಮೂರನೆಯ ಭಾಗದಲ್ಲಿ ಯಾವ ವಿಧಿಗಳ ಅಡಿಯಲ್ಲಿ ಮೂಲಭೂತ ಹಕ್ಕುಗಳನ್ನು ನಮೂದಿಸಲಾಗಿದೆ. 12 ರಿಂದ 35 ನೇ ವಿಧಿ
5. ಶಸ್ತ್ರಗಳನ್ನು ಹೊಂದಿದ ಈ ಜಗತ್ತು ಕೇವಲ ಹಣವನ್ನು ಮಾತ್ರ ಪೋಲು ಮಾಡುವುದಿಲ್ಲ ಬದಲಾಗಿ ಕಾರ್ಮಿಕರ ಬೆವರನ್ನು ವಿಜ್ಞಾನಿಗಳ ಬುದ್ಧಿವಂತಿಕೆಯನ್ನು ಹಾಗೂ ಮಕ್ಕಳ ಆಸೆಗಳನ್ನು ವ್ಯಯಗೊಳಿಸುತ್ತದೆ ಎಂದವರು ಐಸನ್ ಹೋವರ್
6. ಆಧುನಿಕ ಜಗತ್ತಿನಲ್ಲಿ ಪರಸ್ಪರ ನಿಶ್ಚಿತ ನಾಶದ ವಿರುದ್ಧ ಭಾರತವು ಸೇರಿ ಎಲ್ಲಾ ರಾಷ್ಟ್ರಗಳು ಪ್ರಯತ್ನಿಸುವ ಅವಶ್ಯಕತೆ ಇದೆ. ಪರಸ್ಪರ ನಿಶ್ಚಿತ ನಾಶ ಎಂದರೆ ಶಸ್ತ್ರಾಸ್ತ್ರಗಳ ಪೈಪೋಟಿ
7. ಭಾರತ ಒಂದು ಪ್ರಗತಿಪರ ರಾಷ್ಟ್ರವಾಗಿ ವಿಶ್ವ ಕುಟುಂಬದ ಎಲ್ಲಾ ರಾಷ್ಟ್ರಗಳ ಮಧ್ಯೆ............ ಹಾಗೂ ............ಯನ್ನು ಪ್ರತಿಪಾದಿಸುತ್ತದೆ. ಆರ್ಥಿಕ ನ್ಯಾಯ ಹಾಗೂ ಸಮಾನತೆ
8. ಪ್ರಪಂಚದ ಬಹುತೇಕ ಮಂದಿ ಸುದೀರ್ಘ ಕಾಲಾವಧಿಯಲ್ಲಿ ಮಾನವ ಹಕ್ಕುಗಳನ್ನು ಅನುಭವಿಸಿಲ್ಲ ಏಕೆ?
   ಧರ್ಮ, ಜನಾಂಗ, ಲಿಂಗ, ಜಾತಿ, ವರ್ಣ ಹಾಗೂ ರಾಷ್ಟ್ರೀಯತೆಗಳನ್ನು ಕಾರಣವಾಗಿರಿಸಿ ಮಾನವ ಹಕ್ಕುಗಳ ನಿರಾಕರಣೆ ಹಾಗೂ ಶೋಷಣೆಯನ್ನು ಕಾಣಬಹುದಾಗಿದೆ.
9. 1948 ಡಿಸೆಂಬರ್ 10 ಮಾನವನ ಇತಿಹಾಸದಲ್ಲಿ ಅತ್ಯಂತ ಐತಿಹಾಸಿಕ ದಿನವಾಗಿದೆ. ಏಕೆ?
   ಮಾನವ ಹಕ್ಕುಗಳ ಪರಿಕಲ್ಪನೆಯನ್ನು 1948 ಡಿಸೆಂಬರ್ 10 ರಂದು ವಿಶ್ವಸಂಸ್ಥೆ ಸಾಮಾನ್ಯ ಸಭೆ ಅಂಗೀಕರಿಸಿತು.
10. ನಿಶ್ಶಸ್ತ್ರೀಕರಣ ಎಂದರೇನು ?
    ನಿರ್ದಿಷ್ಟ ಅಥವಾ ಎಲ್ಲಾ ಶಸ್ತ್ರಾಸ್ತ್ರಗಳನ್ನು ಕಡಿತಗೊಳಿಸುವ ಅಥವಾ ಸಂಪೂರ್ಣವಾಗಿ ಇಲ್ಲವಾಗಿಸುವ ನೇರ ಪ್ರಕ್ರಿಯೆಯೇ ನಿಶ್ಶಸ್ತ್ರೀಕರಣ
11. ಆರ್ಥಿಕ ಅಸಮಾನತೆಯು ಯಾವುದರ ಬಳುವಳಿಯಾಗಿದೆ?
    ಆರ್ಥಿಕ ಅಸಮಾನತೆಯು ವಸಾಹತುಶಾಹಿತ್ವ ಮತ್ತು ಸಾಮ್ರಾಜ್ಯಶಾಹಿತ್ವದ ಬಳುವಳಿಯಾಗಿದೆ.
12. ತೃತೀಯ ಜಗತ್ತನ್ನು ವ್ಯಾಖ್ಯಾನಿಸಿ
    ಶೀತಲ ಸಮರದ ವೇಳೆ ಅಮೆರಿಕಾ ಅಥವಾ ರಷ್ಯಾ ಬಣವನ್ನು ಸೇರದೇ ತಟಸ್ಥವಾಗಿದ್ದ ರಾಷ್ಟ್ರಗಳ ಗುಂಪಿಗೆ ತೃತೀಯ ಜಗತ್ತು ಎನ್ನುವರು.
13. ಭಾರತವು ಹಿಂದುಳಿದ ರಾಷ್ಟ್ರಗಳ ಆತ್ಮಗೌರವವನ್ನು ಎತ್ತಿ ಹಿಡಿಯಲು ಸಹಕರಿಸಿತು ಹೇಗೆ?
    ಯಾವುದೇ ಷರತ್ತುಗಳಿಲ್ಲದೆ ಮುಂದುವರಿದ ದೇಶಗಳು ಬಡ ರಾಷ್ಟ್ರಗಳಿಗೆ ಆರ್ಥಿಕ ನೆರವು ನೀಡಬೇಕೆಂಬ ನೀತಿಯನ್ನು ಪ್ರತಿಪಾದಿಸುವ ಮೂಲಕ ಹಿಂದುಳಿದ ರಾಷ್ಟ್ರಗಳ ಆತ್ಮಗೌರವವನ್ನು ಭಾರತ ಎತ್ತಿಹಿಡಿಯಲು ಸಹಕರಿಸಿತು.

### ಜಾಗತಿಕ ಸಂಸ್ಥೆಗಳು

1. ಲೀಗ್ ಆಫ್ ನೇಷನ್ ಸಂಸ್ಥೆ ಪತನ ಹೊಂದಿತು ಏಕೆಂದರೆ
   1939 ರಲ್ಲಿ ಎರಡನೇ ಮಹಾಯುದ್ಧ ಆರಂಭವಾಯಿತು
2. ವಿಶ್ವಸಂಸ್ಥೆ ಪದವನ್ನು ಜಾರಿಗೆ ತಂದವರು – ರೂಸ್‌ವೆಲ್ಟ್

3. ವಿಶ್ವಸಂಸ್ಥೆಯು ಸ್ಥಾಪನೆಯಾದದ್ದು 1945 ಅಕ್ಟೋಬರ್ 24
4. ಜಾಗತಿಕ ಸಂಸತ್ತಿನ ರೀತಿಯಲ್ಲಿ ಕಾರ್ಯ ನಿರ್ವಹಿಸುವ ವಿಶ್ವಸಂಸ್ಥೆಯ ಅಂಗ ಸಂಸ್ಥೆ– ಸಾಮಾನ್ಯ ಸಭೆ
5. ವಿಶ್ವಸಂಸ್ಥೆಯ ಸಚಿವ ಸಂಪುಟದ ಮಾದರಿಯಲ್ಲಿ ಕಾರ್ಯನಿರ್ವಹಿಸುವ ಅಂಗ ಸಂಸ್ಥೆ – ಭದ್ರತಾ ಸಮಿತಿ
6. ಭದ್ರತಾ ಸಮಿತಿಯ ಖಾಯಂ ಸದಸ್ಯ ರಾಷ್ಟ್ರಗಳು ಕೆಳಕಂಡಂತಿವೆ
ಅಮೆರಿಕಾ, ರಷ್ಯಾ, ಬ್ರಿಟನ್, ಫ್ರಾನ್ಸ್ , ಚೀನಾ
7. ವಿಶ್ವಸಂಸ್ಥೆಯ ಭದ್ರತಾ ಸಮಿತಿಗೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆ
ಅದು ವಿಶ್ವಸಂಸ್ಥೆಯ ಸಚಿವ ಸಂಪುಟ ಇದ್ದಂತೆ
8. ಭದ್ರತಾ ಸಮಿತಿಯು ವಿಶ್ವಸಂಸ್ಥೆಯ ಕ್ಯಾಬಿನೆಟ್‌ನಂತೆ ಕಾರಣ
ಜಾಗತಿಕ ಸಮಸ್ಯೆಗಳ ಪರಿಹಾರಕ್ಕಾಗಿ ಪ್ರಮುಖ ನಿರ್ಧಾರವನ್ನು ಕೈಗೊಳ್ಳುತ್ತದೆ
9. ವಿಶೇಷ ಪ್ರಾವಿಣ್ಯತೆಯ ಅಂಗ ಸಂಸ್ಥೆಗಳಾದ ಪಿ. ಎಲ್. ಓ., ಎಫ್. ಎ. ಓ. ಮುಂತಾದವುಗಳ ಕಾರ್ಯಗಳನ್ನು ಸಮನ್ವಯ ಮಾಡುವುದು ಆರ್ಥಿಕ ಮತ್ತು ಸಾಮಾಜಿಕ ಸಮಿತಿ
10. ದತ್ತಿ ಸಮಿತಿಯು ವಾಸ್ತವಿಕವಾಗಿ ಈ ಕೆಳಗಿನ ಯಾವುದರ ಉಪಸಂಸ್ಥೆ ಅಥವಾ ಸಹಾಯಕ ಸಂಸ್ಥೆ ಎನಿಸಿ ಕಾರ್ಯವೆಸಗುತ್ತದೆ ಸಾಮಾನ್ಯ ಸಭೆ
11. ದತ್ತಿ ಸಮಿತಿ ಈಗ ನಿಷ್ಕ್ರಿಯವಾಗಿದೆ ಏಕೆಂದರೆ ಈಗ ಯಾವುದೇ ದತ್ತಿ ಉಳಿದಿಲ್ಲ
12. ವಿಶ್ವಸಂಸ್ಥೆಯ ದೈನಂದಿನ ಆಡಳಿತ ಯೋಜನೆ ಮತ್ತು ಸಂಯೋಜನೆ ಕಾರ್ಯಗಳು ಇದರ ವ್ಯಾಪ್ತಿಗೆ ಬರುತ್ತದೆ ಸಚಿವಾಲಯ
13. ಅಂತರಾಷ್ಟ್ರೀಯ ನ್ಯಾಯಾಲಯದ ನಿರ್ಣಯಗಳು ಈ ಕೆಳಗಿನ ಯಾವ ನೆಲಗಟ್ಟಿನ ಮೇಲೆ ಮಹತ್ವವನ್ನು ಹೊಂದಿದೆ ನೈತಿಕ ಹಾಗೂ ವೈಚಾರಿಕ
14. ಯೂನಿಸೆಫ್ ಸಂಸ್ಥೆಯ ಶುಭಾಶಯ ಪತ್ರಗಳ ಮಾರಾಟದ ಮೂಲಕ ಗಳಿಸುವ ಹಣವನ್ನು ಈ ಉದ್ದೇಶಕ್ಕಾಗಿ ಬಳಸುತ್ತಿದೆ. ಮಕ್ಕಳ ಯೋಗಕ್ಷೇಮಕ್ಕಾಗಿ
15. ಅಂತರಾಷ್ಟ್ರೀಯ ಹಣಕಾಸು ಸಂಸ್ಥೆಯ ಕಾರ್ಯ ನಿರ್ವಹಣೆಯ ಈ ಕೆಳಗಿನ ಯಾವ ಅಂಶಗಳಿಂದಾಗಿ ಸಾಕಷ್ಟು ಮನ್ನಣೆಯನ್ನು ಪಡೆದಿದೆ ಗುಣಮಟ್ಟ ಹಾಗೂ ಪಾರದರ್ಶಕತೆ
16. ವಿಶ್ವಕುಟುಂಬದ ಆರ್ಥಿಕ ಪ್ರಗತಿಗೆ ಪೂರಕವಾಗಿ ಕಾರ್ಯ ನಿರ್ವಹಿಸುತ್ತಿರುವ ಸಂಸ್ಥೆ
ವಿಶ್ವಸಂಸ್ಥೆಯ ವ್ಯಾಪಾರ ಮತ್ತು ವಾಣಿಜ್ಯ ಸಮಿತಿ
17. ವಿಶ್ವ ವ್ಯಾಪಾರ ಸಂಸ್ಥೆಯು ವಿಶ್ವದ ತೃತೀಯ ಆರ್ಥಿಕ ಆಧಾರ ಸ್ತಂಭವಾದರೆ ಮೊದಲೆರಡು ಸ್ತಂಭಗಳೆಂದರೆ ಪಿ. ಎಂ. ಎಫ್. ಹಾಗೂ ಪಿ. ಬಿ. ಆರ್. ಡಿ.
18. ಯೂರೋಪಿಯನ್ ಯೂನಿಯನ್ ಒಂದು ಸಂಯುಕ್ತ ರಾಜ್ಯವನ್ನು ಹೋಲುತ್ತದೆ, ಏಕೆಂದರೆ ಇದರ ಸದಸ್ಯ ರಾಷ್ಟ್ರಗಳು ತಮ್ಮ ಸಾರ್ವಭೌಮದ ಗಮನಾರ್ಹ ಅಂಶವನ್ನು ಈ ಸಂಸ್ಥೆಗೆ ನೀಡಿದೆ
19. ಭಾರತದ ಈ ಕೆಳಗಿನ ಯಾವ ಸಂಸ್ಥೆಯ ಬಗ್ಗೆ ಉದಾರ ನೀತಿ ಹೊಂದಿದ್ದರು. ಅದರ ಸದಸ್ಯತ್ವವನ್ನು ಹೊಂದದೆ ಕೇವಲ ವೀಕ್ಷಕರ ಸ್ಥಾನವನ್ನು ಹೊಂದಿದೆ ಆಸಿಯಾನ್
20. ನೂತನ ವಸಾಹತುಶಾಹಿತ್ವದ ವಿರುದ್ಧ ಧ್ವನಿ ಎತ್ತುತ್ತಿರುವ ಜಾಗತಿಕ ಸಂಸ್ಥೆ
ದಿ ಆರ್ಗನೈಸೇಶನ್ ಆಫ್ ಆಫ್ರಿಕನ್ ಯೂನಿಟಿ

II

01. ವಿಶ್ವಸಂಸ್ಥೆಯ ಸ್ಥಾಪನೆಗೆ ಕಾರಣವಾದ ನಾಯಕರು ಯಾರು ?
ಇಂಗ್ಲೆಂಡಿನ ವಿನ್‌ಸ್ಟನ್ ಚರ್ಚಿಲ್, ರಷ್ಯಾದ ಜೋಸೆಫ್ ಸ್ಟಾಲಿನ್ ಹಾಗೂ ಅಮೆರಿಕಾದ ಫ್ರಾಂಕ್ಲಿನ್ ಡಿ ರೂಸ್‌ವೆಲ್ಟ್
02. ವಿಶ್ವಸಂಸ್ಥೆಯ ಸನ್ನದಿಗೆ ಯಾವ ಸಮ್ಮೇಳನದಲ್ಲಿ ಸಹಿ ಹಾಕಲಾಯಿತು ? ಸ್ಯಾನ್‌ಫ್ರಾನ್ಸಿಸ್ಕೋ ಸಮ್ಮೇಳನ
03. ವಿಶ್ವಸಂಸ್ಥೆಯ ಪ್ರಧಾನ ಕಛೇರಿ ಎಲ್ಲಿದೆ ? ನ್ಯೂಯಾರ್ಕ್

04. ಸಾಮಾನ್ಯ ಸಭೆಯನ್ನು ಜಾಗತಿಕ ಸಂಸತ್ತು ಎಂದು ಕರೆಯುತ್ತಾರೆ ಏಕೆ ?

ವಿಶ್ವದ ಎಲ್ಲಾ ಪ್ರಮುಖ ವಿದ್ಯಮಾನಗಳ ಚರ್ಚೆಯಲ್ಲಿ ಪ್ರಧಾನ ಪಾತ್ರ ವಹಿಸುತ್ತದೆ

05. ವಿಶ್ವಸಂಸ್ಥೆಯ ಭದ್ರತಾ ಸಮಿತಿಯು ಅಂತಾರಾಷ್ಟ್ರೀಯ ನ್ಯಾಯಾಲಯದಲ್ಲಿ ಪ್ರಮುಖಪಾತ್ರ ವಹಿಸುತ್ತದೆ ಹೇಗೆ?

ವಿಶ್ವಸಂಸ್ಥೆಯ ಭದ್ರತಾ ಸಮಿತಿಯು ಅಂತಾರಾಷ್ಟ್ರೀಯ ನ್ಯಾಯಾಲಯದ ನ್ಯಾಯಾಧೀಶರನ್ನು ನೇಮಿಸುತ್ತದೆ.

06. ದತ್ತಿ ಸಮಿತಿಯ ಕಾರ್ಯಕ್ಷೇತ್ರವು ಕಡಿಮೆಯಾಗುತ್ತಿದೆ ಏಕೆ ?

ದತ್ತಿ ಸಮಿತಿಯ ಆಶ್ರಿತ ಪ್ರದೇಶಗಳ ಸಂಖ್ಯೆ ಕಡಿಮೆಯಾಗುತ್ತಿರುವುದರಿಂದ

07. ಅಂತಾರಾಷ್ಟ್ರೀಯ ನ್ಯಾಯಾಲವು ಎಲ್ಲಿದೆ ? ನೆದರ್‌ಲ್ಯಾಂಡಿನ ಹೇಗ್ ನಗರದಲ್ಲಿದೆ

08. ವಿಶ್ವಸಂಸ್ಥೆಯ ಈಗಿನ ಮಹಾಕಾರ್ಯದರ್ಶಿ ಯಾರು ? ಆಂಟೋನಿಯಾ ಗಟೆರಸ್

09. ವಿಶ್ವಸಂಸ್ಥೆಯ ಸಾಧನೆಯು ಮಿಶ್ರರೂಪದಿಂದ ಕೂಡಿದೆ ಏಕೆ ?

ಭದ್ರತಾಸಮಿತಿಯ ಖಾಯಂ ಸದಸ್ಯರ ಒಮ್ಮತದ ಕೊರತೆ ಮತ್ತು ಜಾಗತಿಕ ವಿದ್ಯಮಾನಗಳ ಸಂಕೀರ್ಣತೆ

10. ಆಹಾರ ಮತ್ತು ಕೃಷಿ ಸಂಸ್ಥೆಯನ್ನು ಏಕೆ ಸ್ಥಾಪಿಸಲಾಗಿದೆ ?

ಜಗತ್ತಿನಾದ್ಯಂತ ಬಡತನ, ಹಸಿವು, ಅಪೌಷ್ಠಿಕತೆಯ ವಿರುದ್ಧ ಹೋರಾಡಲು ಸ್ಥಾಪಿಸಲಾಗಿದೆ.

11. ಪ್ರಪಂಚದಾದ್ಯಂತ ಶಿಕ್ಷಣ ಹಾಗೂ ಜ್ಞಾನ ಪ್ರಸಾರಕ್ಕೆ ಯುನೆಸ್ಕೋ ಸಹಕಾರಯಾಗಿದೆ ಹೇಗೆ?

ಪ್ರಪಂಚದಾದ್ಯಂತ ಶಿಕ್ಷಣ ಹಾಗೂ ಜ್ಞಾನ ಪ್ರಸಾರದ ನಿಟ್ಟಿನಲ್ಲಿ ಇದು ಸರ್ಕಾರಗಳಿಗೆ ಹಾಗೂ ಸರ್ಕಾರೇತರ ಸ್ವಯಂ ಸೇವಾ ಸಂಸ್ಥೆಗಳಿಗೆ ಸಹಾಯ ನೀಡುತ್ತದೆ

12. ಯೂನಿಸೆಫ್‌ನ ಮೂಲ ಉದ್ದೇಶವೇನು ?

ಮಹಿಳೆಯರು ಮತ್ತು ಮಕ್ಕಳ ಅಭಿವೃದ್ಧಿಗೆ ಪೂರಕವಾದ ಪರಿಸರವನ್ನು ಒದಗಿಸುತ್ತದೆ

13. ನಾವು ಯೂನಿಸೆಫ್ ಶುಭಾಶಯ ಪತ್ರಗಳನ್ನು ಏಕೆ ಕೊಳ್ಳಬೇಕು ?

ಈ ಸಂಸ್ಥೆ ಶುಭಾಶಯ ಪತ್ರಗಳ ಮೂಲಕ ಗಳಿಸುವ ಹಣವನ್ನು ಮಕ್ಕಳ ಯೋಗಕ್ಷೇಮಕ್ಕೆ ಬಳಸುತ್ತದೆ

14. ನೊಬೆಲ್ ಬಹುಮಾನ ಪಡೆದ ವಿಶ್ವಸಂಸ್ಥೆಯ ಸೇವಾ ಸಂಸ್ಥೆ ಯಾವುದು ? ಯೂನಿಸೆಫ್

15. ಸಾರ್ಕ್ ಸಂಸ್ಥೆಯ ಮೂಲ ಉದ್ದೇಶವೇನು ?

ಆರ್ಥಿಕ ಸಂಬಂಧ ವೃದ್ಧಿ, ಸಾಮಾಜಿಕ ಪ್ರಗತಿ ಹಾಗೂ ಸಾಂಸ್ಕೃತಿಕ ಬೆಳವಣಿಗೆಯನ್ನು ಪರಸ್ಪರ ಸಹಕಾರದಿಂದ ಸಾಧಿಸುವುದು

16. ಸಾರ್ಕ್‌ನ ಪ್ರಗತಿಗೆ ತೊಡಕಾಗಿರುವ ಅಂಶ ಯಾವುದು ?

ಸದಸ್ಯ ರಾಷ್ಟ್ರಗಳ ಪರಸ್ಪರ ಅಪನಂಬಿಕೆ ಮತ್ತು ವಿವಾದಗಳು

17. ಸಾರ್ಕ್‌ನ ಪ್ರಗತಿಗೆ ತೊಡಕಾಗಿರುವ ಸೂತ್ರವೇನು ?

ಎಲ್ಲಾ ನಿರ್ಣಯಗಳು ಸದಸ್ಯ ರಾಷ್ಟ್ರಗಳ ಅವಿರೋಧದ ನೆಲೆಯಲ್ಲಿ ಇರಬೇಕು ಎಂಬುವುದು

18. ದಿ ಆರ್ಗನೈಸೇಶನ್ ಆಫ್ ಆಫ್ರಿಕನ್ ಯುನಿಟಿಯು ಮುಖ್ಯವಾಗಿ ಸದಸ್ಯ ರಾಷ್ಟ್ರಗಳು ಯಾವ ಹಕ್ಕನ್ನು ಪ್ರತಿಪಾದಿಸುತ್ತಿದೆ ?

ಸ್ವಯಂ ನಿರ್ಧಾರದ ಹಕ್ಕನ್ನು ಪ್ರತಿಪಾದಿಸುತ್ತಿದೆ.

## ದುಡಿಮೆ

1. ವಿಶೇಷ ಪರಿಣತಿಗೆ ಇದು ಕಾರಣವಾಯಿತು ಶ್ರಮ ವಿಭಜನೆ

2. ಚಿತ್ರ ಕಲಾಕಾರನೊಬ್ಬನು ತನ್ನ ಆತ್ಮ ಸಂತೋಷಕ್ಕಾಗಿ ಚಿತ್ರ ಬಿಡಿಸುವ ಕಾರ್ಯದಲ್ಲಿ ತೊಡಗಿರುವುದು

ಸಂಭಾವನೆ ರಹಿತ ದುಡಿಮೆ

3. ವಿದ್ಯಾರ್ಥಿಗಳು ಕಾಲೇಜಿನಲ್ಲಿ ರಾಷ್ಟ್ರೀಯ ಸೇವಾ ಯೋಜನೆಯಡಿಯಲ್ಲಿ ಕೈಗೊಳ್ಳುವ ಶ್ರಮ ಆಧಾರಿತ ಚಟುವಟಿಕೆಗಳು ಈ ದುಡಿಮೆಗೆ ಉದಾಹರಣೆಯಾಗಿದೆ

ಸಂಭಾವನೆ ರಹಿತ ದುಡಿಮೆ

4. ದುಡಿಮೆಗೆ ಹಣದ ಬದಲಾಗಿ ವಸ್ತುಗಳನ್ನು ಮತ್ತು ಆಹಾರ ಪದಾರ್ಥಗಳನ್ನು ದುಡಿಮೆಗಾರರಿಗೆ ಸಂಭಾವನೆ ರೂಪದಲ್ಲಿ ನೀಡುವ ಪದ್ಧತಿ
   ಸಾಟಿ ವಿನಿಮಯ ಪದ್ಧತಿ
5. ಮಹಿಳೆಯರ ಮೇಲಿನ ದೈಹಿಕ ಮತ್ತು ಮಾನಸಿಕ ದೌರ್ಜನ್ಯಗಳು ಹೆಚ್ಚಾಗಿ ಕಂಡುಬರುವ ವಲಯ
   ಅಸಂಘಟಿತ ಕಾರ್ಮಿಕ ವಲಯ
6. ವಲಸೆ ಹೆಚ್ಚಾಗಿ ಕಂಡುಬರುವ ದುಡಿಮೆಯ ವಲಯ
   ಅಸಂಘಟಿತ ಕಾರ್ಮಿಕ ವಲಯ
7. ಭಾರತದಲ್ಲಿ 90% ರಷ್ಟು ಕಾರ್ಮಿಕರು ದುಡಿಯುತ್ತಿರುವ ವಲಯ
   ಅಸಂಘಟಿತ ಕಾರ್ಮಿಕ ವಲಯ
8. ಬಾಲ ಕಾರ್ಮಿಕ ಪದ್ಧತಿಯ ಪೋಷಿಸುವ ದುಡಿಮೆಯ ವಲಯ
   ಅಸಂಘಟಿತ ಕಾರ್ಮಿಕ ವಲಯ

## ಸಾಮಾಜಿಕ ಚಳುವಳಿ

1. 1973 ರಲ್ಲಿ ಪ್ರಾರಂಭವಾದ ಜಾರ್ಖಂಡ್ ಮುಕ್ತಿ ಮೋರ್ಚಾ ಒಂದು
   ಪರಿಸರ ಚಳುವಳಿ
2. 1974 ರಲ್ಲಿ ಚಿಪ್ಕೋ ಚಳುವಳಿ ನಡೆದದ್ದು
   ಉತ್ತರ ಪ್ರದೇಶ ರಾಜ್ಯದ ತೆಹ್ರಿ – ಘರ್ವಾಲ್ ಜಿಲ್ಲೆಯ ರೆನ್ನಿ ಗ್ರಾಮ
3. 1983 ರಲ್ಲಿ ಅಪ್ಪಿಕೋ ಚಳುವಳಿ ನಡೆದದ್ದು
   ಕರ್ನಾಟಕ ರಾಜ್ಯದ ಉತ್ತರ ಕನ್ನಡ ಜಿಲ್ಲೆಯ ಸಲ್ಕಾನಿ ಗ್ರಾಮ
4. ಮೇಧಾ ಪಾಟ್ಕರ್ ನೇತೃತ್ವದಲ್ಲಿ ನಡೆದ ಪರಿಸರ ಸಂರಕ್ಷಣಾ ಚಳುವಳಿ
   ನರ್ಮದಾ ಬಚಾವೋ ಆಂದೋಲನ
5. ಅಣೆಕಟ್ಟು ನಿರ್ಮಾಣದ ವಿರುದ್ಧ ದೀರ್ಘಕಾಲದಿಂದ ನಡೆಯುತ್ತಿರುವ ಬಹುದೊಡ್ಡ ಪರಿಸರ ಚಳುವಳಿ
   ನರ್ಮದಾ ಬಚಾವೋ ಆಂದೋಲನ
6. ಕೇರಳದ ಪಾಲ್ಘಾಟ್ ತಾಲೂಕಿನಲ್ಲಿ ನಡೆದ ಪರಿಸರ ಚಳುವಳಿ
   ಮೌನ ಕಣಿವೆ ಚಳುವಳಿ
7. ಕೈಗಾ ಅಣುಸ್ಥಾವರ ವಿರೋಧಿ ಚಳುವಳಿಯ ನಾಯಕತ್ವ ವಹಿಸಿದವರು
   ಶಿವರಾಮ ಕಾರಂತರು
8. ಕುಸುಮಾ ಸೊರಬ ಈ ಚಳುವಳಿಯಲ್ಲಿ ತಮ್ಮ ಜೀವ ಕಳೆದುಕೊಂಡರು
   ಮದ್ಯಪಾನ ನಿಷೇಧ ಚಳುವಳಿ
9. 1925 ರಲ್ಲಿ ಪೆರಿಯಾರ್ ರಾಮಸ್ವಾಮಿರವರು ಆರಂಭಿಸಿದ ಆತ್ಮಗೌರವ ಚಳುವಳಿಯು ಈ ಚಳುವಳಿಯ ಭಾಗವಾಗಿದೆ.
   ಅಸ್ಪೃಶ್ಯತೆ ಆಚರಣೆ ವಿರೋಧಿ ಚಳುವಳಿ
10. ಡಾ.ಬಿ. ಆರ್. ಅಂಬೇಡ್ಕರ್‌ರವರು ಮೂಕ ನಾಯಕ ಎಂಬ ಪತ್ರಿಕೆಯನ್ನು ಆರಂಭಿಸಲು ಕಾರಣ
    ದಲಿತರ ಹಿತಾಸಕ್ತಿಗಳನ್ನು ಬೆಂಬಲಿಸಲು

## ಸಾಮಾಜಿಕ ಸಮಸ್ಯೆಗಳು

1. ಬಾಲ ಕಾರ್ಮಿಕ ಪದ್ಧತಿ ನಿಷೇಧ ಮತ್ತು ನಿಯಂತ್ರಣ ಕಾಯ್ದೆಯು ಜಾರಿಗೆ ಬಂದ ವರ್ಷ
   1986

2. ಬಾಲ ಕಾರ್ಮಿಕ, ಹದಿಹರೆಯದವರ ದುಡಿಮೆ ಪದ್ಧತಿ ನಿಷೇಧ ಮತ್ತು ನಿಯಂತ್ರಣ ಕಾಯ್ದೆ ಕೆಳಗಿನ ಯಾವ ವಯೋಮಾನದವರನ್ನು ಹದಿಹರೆಯದವರು ಎಂದು ಗುರುತಿಸಿದೆ
   **15 ರಿಂದ 18 ವರ್ಷದೊಳಗಿನ ಮಕ್ಕಳು**
3. ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣ ಕಾಯ್ದೆ ಜಾರಿಗೆ ಬಂದದ್ದು
   **2012 ಜೂನ್ 19**
4. ಪೋಕ್ಸೋ ಕಾಯ್ದೆ 2012 ರಲ್ಲಿ ಜಾರಿಗೆ ತಂದಿರುವ ಉದ್ದೇಶ
   **ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ನಿಯಂತ್ರಣ**
5. 1994 ರಲ್ಲಿ ಜಾರಿಗೆ ತಂದ ಪ್ರಸವಪೂರ್ವ ಲಿಂಗ ಪತ್ತೆ ಪರೀಕ್ಷೆ ನಿಷೇಧ ಕಾಯ್ದೆಯ ಉದ್ದೇಶ
   **ಹೆಣ್ಣು ಭ್ರೂಣ ಹತ್ಯೆ ತಡೆಯುವುದು**
6. ಮಕ್ಕಳ ಹಕ್ಕುಗಳ ಒಡಂಬಡಿಕೆಗೆ ಭಾರತ ಸಹಿ ಹಾಕಿದ ವರ್ಷ
   **1992 ಡಿಸೆಂಬರ್ 11**
7. ಮಕ್ಕಳ ಮೇಲೆ ನಡೆಯುವ ದೌರ್ಜನ್ಯ ತಡೆಯಲು ಇರುವ ಮಕ್ಕಳ ಸಹಾಯವಾಣಿ
   **1098**
8. ಕಾಣದ ಹಸಿವು ಎಂದರೆ **ಪೋಷಕಾಂಶಗಳ ಅಭಾವ**
9. ಬಾಲ್ಯ ವಿವಾಹ ನಿಷೇಧ ಕಾಯ್ದೆಯನ್ನು ಜಾರಿಗೆ ತಂದ ವರ್ಷ **2006**
10. ಹೆಣ್ಣು ಭ್ರೂಣ ಹತ್ಯೆಯನ್ನು ಹತ್ತಿಕ್ಕಲು ಇರುವ ಮುಖ್ಯ ಮಾರ್ಗವೆಂದರೆ
    **ಮಹಿಳೆಯರಿಗೆ ಸಮಾನ ಅವಕಾಶಗಳನ್ನು ನೀಡುವುದು**
11. ಅಕಾಲಿಕ ಮರಣಕ್ಕೆ ಪ್ರಮುಖ ಕಾರಣ – **ಕನಿಷ್ಠ ಪೋಷಕಾಂಶಗಳ ಕೊರತೆ**
12. ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ಆಹಾರಭದ್ರತೆ ನೀಡುವ ಸರ್ಕಾರದ ಯೋಜನೆ
    **ಸಾರ್ವಜನಿಕ ಪಡಿತರ ವ್ಯವಸ್ಥೆ**
13. ಬಾಲ್ಯ ವಿವಾಹ ನಿಷೇಧಾಧಿಕಾರಿಗಳು
    **ಸರ್ಕಾರಿ ಶಾಲೆಯ ಮುಖ್ಯ ಶಿಕ್ಷಕರು, ಗ್ರಾಮಲೆಕ್ಕಿಗ,ಪಂಚಾಯತ್‌ಅಭಿವೃದ್ಧಿ ಅಧಿಕಾರಿ, ಆರೋಗ್ಯ ನಿರೀಕ್ಷಕರು**
14. ಅಂಗನವಾಡಿ ಕೇಂದ್ರದಲ್ಲಿ ಬಾಲಿಕಾ ಸಂಘವನ್ನು ಸ್ಥಾಪಿಸಿರುವ ಉದ್ದೇಶ
    **ಬಾಲಕಿಯರ ಸಬಲೀಕರಣ**

## ಗ್ರಾಹಕರ ಶಿಕ್ಷಣ ಮತ್ತು ರಕ್ಷಣೆ

1. 1965 ರಲ್ಲಿ ಮುಂಬೈಯಲ್ಲಿ ಪ್ರಾರಂಭವಾದ ದೇಶದ ಮೊದಲ ಗ್ರಾಹಕ ಸಂರಕ್ಷಣಾ ಸಂಸ್ಥೆ
   **ಅವೇರ್ (AWARE)**
2. ಟೆಲಿಶಾಪಿಂಗ್ ಎಂದರೆ -----
   **ತಂತ್ರಜ್ಞಾನದ ನೆರವಿನಿಂದ ಮನೆಯಲ್ಲೇ ಕುಳಿತು ವಸ್ತುಗಳನ್ನು ಖರೀದಿಸುವುದು**
3. ಮಾರುಕಟ್ಟೆಯ ರಾಜ ಎಂದು ಕರೆಯಲ್ಪಡುವವರು **ಗ್ರಾಹಕ**
4. ಭಾರತದಲ್ಲಿ ಗ್ರಾಹಕ ಸಂರಕ್ಷಣಾ ಕಾಯ್ದೆ ಜಾರಿಗೆ ಬಂದ ವರ್ಷ **1986**
5. ವಿಶ್ವ ಗ್ರಾಹಕರ ದಿನವನ್ನು ಪ್ರತಿ ವರ್ಷ ಆಚರಿಸುವುದು **ಮಾರ್ಚ್ 15**
6. 20 ಲಕ್ಷ ರೂಪಾಯಿಗಳಿಗಿಂತ ಹೆಚ್ಚಾಗಿರದ ಗ್ರಾಹಕರ ದೂರುಗಳನ್ನು ಇತ್ಯರ್ಥ ಮಾಡುವ ವೇದಿಕೆ
   **ಜಿಲ್ಲಾ ವೇದಿಕೆ**
7. 20 ಲಕ್ಷ ರೂಪಾಯಿಗಳಿಗಿಂತ ಹೆಚ್ಚಾಗಿದ್ದು ಒಂದು ಕೋಟಿ ರೂಪಾಯಿವರೆಗಿನ ದೂರುಗಳನ್ನು ಇತ್ಯರ್ಥ ಮಾಡುವ ಆಯೋಗ ----
   **ರಾಜ್ಯ ಆಯೋಗ**

8. ಒಂದು ಕೋಟಿ ರೂಪಾಯಿಗಿಂತಹೆಚ್ಚು ಮೌಲ್ಯದ ಗ್ರಾಹಕ ದೂರುಗಳನ್ನುಇತ್ಯರ್ಥ ಮಾಡುವ ಆಯೋಗ
ರಾಷ್ಟ್ರೀಯ ಆಯೋಗ

## ಭಾರತದ ವಾಯುಗುಣ

1. ಚಳಿಗಾಲದಲ್ಲಿ ಭಾರತದಲ್ಲಿ ಕಡಿಮೆ ಉಷ್ಣಾಂಶ ಕಡಿಮೆ ಆರ್ದ್ರತೆಗೆ ಕಾರಣ
ಭಾರತದ ಮೇಲೆ ಸೂರ್ಯನ ಓರೆ ಕಿರಣಗಳು ಬೀಳುತ್ತವೆ
2. ಬೇಸಿಗೆ ಅಂತ್ಯಾವಧಿಯಿಂದ ಭಾರತದ ಮಧ್ಯಭಾಗದಲ್ಲಿ ಕಡಿಮೆ ಒತ್ತಡ ಪ್ರದೇಶ ನಿರ್ಮಾಣವಾಗಲು ಕಾರಣ
ಬೇಸಿಗೆ ಅಂತ್ಯಾವಧಿಯಿಂದ ಉಷ್ಣಾಂಶವು ಹೆಚ್ಚಾಗುವುದರಿಂದ
3. ತೇವಾಂಶಭರಿತ ಮಾರುತಗಳು ನೈಋತ್ಯದಿಂದ ಭಾರತದೆಡೆಗೆ ಬೀಸಲು ಕಾರಣ
ಭಾರತದ ಮಧ್ಯಭಾಗದಲ್ಲಿ ಕಡಿಮೆ ಒತ್ತಡ ಮತ್ತು ಹಿಂದೂ ಮಹಾಸಾಗರದಲ್ಲಿ ಅಧಿಕ ಒತ್ತಡ
4. ಈಶಾನ್ಯ ರಾಜ್ಯಗಳು ಅಧಿಕ ಮಳೆ ಪಡೆಯಲು ಕಾರಣ
ಬಂಗಾಳ ಕೊಲ್ಲಿ ಶಾಖೆಯು ಮೇಘಾಲಯ ಮತ್ತು ಅಸ್ಸಾಂನ ಬೆಟ್ಟಗಳಿಂದ ತಡೆಯಲ್ಪಡುವುದರಿಂದ
5. ಅಕ್ಟೋಬರ್ ತಿಂಗಳಿನಿಂದ ನೈಋತ್ಯ ಮಾನ್ಸೂನ್ ಮಾರುತಗಳು ಹಿಂತಿರುಗುತ್ತವೆ ಕಾರಣ
ಕಡಿಮೆ ಉಷ್ಣಾಂಶ ಮತ್ತು ಅಧಿಕ ಒತ್ತಡ
6. ಉಷ್ಣ ವಲಯದ ಆವರ್ತಮಾರುತಗಳು (ಸೈಕ್ಲೋನ್) ಬಂಗಾಳ ಕೊಲ್ಲಿಯಲ್ಲಿ ಕಂಡುಬರುವ ಋತುಕಾಲ
ಮಾನ್ಸೂನ್ ಮಾರುತಗಳ ನಿರ್ಗಮನ ಕಾಲ ಅಥವಾ ಈಶಾನ್ಯ ಮಾನ್ಸೂನ್ ಮಾರುತಗಳ ಕಾಲ
7. ಭಾರತದಲ್ಲಿ ಅತ್ಯಂತ ಕಡಿಮೆ ಉಷ್ಣಾಂಶ ದಾಖಲಾಗುವ ಸ್ಥಳ — ಡ್ರಾಸ್
8. ಭಾರತದಲ್ಲಿ ಅತಿ ಹೆಚ್ಚು ಉಷ್ಣಾಂಶ ದಾಖಲಾಗುವ ಸ್ಥಳ — ರೂಯ್ಲಿ
9. ಭಾರತದಲ್ಲಿ ಅತ್ಯಧಿಕ ಮಳೆ ಬೀಳುವ ಸ್ಥಳ — ಮಾಸಿನ್ ರಾಮ್
10. ಏಪ್ರಿಲ್ –ಮೇ ತಿಂಗಳುಗಳಲ್ಲಿ ಬೀಳುವ ಮಳೆಯನ್ನು ಕೇರಳದಲ್ಲಿ ಮಾವಿನ ಹೂಯ್ಲು ಎನ್ನಲು ಕಾರಣ
ಮಾವಿನ ಬೆಳೆಗೆ ನೆರವಾಗುವುದರಿಂದ
11. ಏಪ್ರಿಲ್–ಮೇ ತಿಂಗಳುಗಳಲ್ಲಿ ಬೀಳುವ ಮಳೆಯನ್ನು ಕರ್ನಾಟಕದಲ್ಲಿ ಕಾಫಿಯ ಹೂಮಳೆ ಎನ್ನಲು ಕಾರಣ
ಕಾಫಿ ಬೆಳೆಗೆ ನೆರವಾಗುವುದರಿಂದ

## ಭಾರತದ ಜನಸಂಖ್ಯೆ

1. 1901 ರಿಂದ 1921 ರವರೆಗೆ ಭಾರತದ ಜನಸಂಖ್ಯಾ ಬೆಳವಣಿಗೆಯು ನಿಧಾನಗತಿಯಲ್ಲಿತ್ತು ಕಾರಣ
ಅಧಿಕ ಮರಣ ದರ
2. 1951 ರಿಂದ 1991 ರ ಅವಧಿಯಲ್ಲಿ ಜನಸಂಖ್ಯಾ ಬೆಳವಣಿಗೆ ದರವು ತ್ವರಿತವಾಗಿತ್ತು ಕಾರಣ
ಜನನ ದರದ ಹೆಚ್ಚಳ ಮತ್ತು ಮರಣ ದರದ ಇಳಿತ
3. ಅಧಿಕ ಜನಸಂಖ್ಯೆವುಳ್ಳ ರಾಜ್ಯ — ಉತ್ತರಪ್ರದೇಶ
4. ಕಡಿಮೆ ಜನಸಂಖ್ಯೆವುಳ್ಳ ರಾಜ್ಯ — ಸಿಕ್ಕಿಂ
5. ಅಧಿಕ ಜನಸಂಖ್ಯೆವುಳ್ಳ ಕೇಂದ್ರಾಡಳಿತ ಪ್ರದೇಶ — ದೆಹಲಿ
6. ಕಡಿಮೆ ಜನಸಂಖ್ಯೆವುಳ್ಳ ಕೇಂದ್ರಾಡಳಿತ ಪ್ರದೇಶ — ಲಕ್ಷದ್ವೀಪ
7. ಅಧಿಕ ಜನಸಾಂದ್ರತೆಯುಳ್ಳ ರಾಜ್ಯ — ಬಿಹಾರ (1102)
8. ಕಡಿಮೆ ಜನಸಾಂದ್ರತೆಯುಳ್ಳ ರಾಜ್ಯ — ಅರುಣಾಚಲ ಪ್ರದೇಶ (17)
9. ಅಧಿಕ ಜನಸಾಂದ್ರತೆಯುಳ್ಳ ಕೇಂದ್ರಾಡಳಿತ ಪ್ರದೇಶ — ದೆಹಲಿ
10. ಕಡಿಮೆ ಜನಸಾಂದ್ರತೆಯುಳ್ಳ ಕೇಂದ್ರಾಡಳಿತ ಪ್ರದೇಶ — ಅಂಡಮಾನ್ ಮತ್ತು ನಿಕೋಬಾರ್‌ದ್ವೀಪ

11. 2011 ರ ಜನಗಣತಿಯಂತೆ ಭಾರತದ ಸರಾಸರಿ ಜನಸಾಂದ್ರತೆ 382
12. ಹಿಮಾಲಯ ಮತ್ತು ಥಾರ್ ಮರುಭೂಮಿಗಳಲ್ಲಿ ವಿರಳ ಜನಸಂಖ್ಯೆಗೆ ಕಾರಣ
    ಅತಿ ಶೀತ ಮತ್ತು ಒಣ ಹವೆಯುಳ್ಳ ವಾಯುಗುಣ
13. ನವದೆಹಲಿ, ಬೆಂಗಳೂರು, ಮುಂಬೈ, ಚೆನ್ನೈ, ಕೋಲ್ಕತ್ತಾ, ಹೈದರಾಬಾದ್ ಮೊದಲಾದ ನಗರಗಳಲ್ಲಿ ಅಧಿಕ ಜನಸಂಖ್ಯೆಗೆ ಕಾರಣ ಕೈಗಾರಿಕೆ ಮತ್ತು ವಾಣಿಜ್ಯೋದ್ಯಮಗಳ ಅಭಿವೃದ್ಧಿ
14. ಈಶಾನ್ಯ ರಾಜ್ಯಗಳಲ್ಲಿ ಜನಸಂಖ್ಯೆ ವಿರಳವಾಗಿದೆ ಕಾರಣ -- ಅವು ಗುಡ್ಡಗಾಡು ಪ್ರದೇಶಗಳು

## ಸ್ವಾತಂತ್ರ್ಯೋತ್ತರ ಭಾರತ

1. ಯಾವ ತಿದ್ದುಪಡಿ ತಂದು ಜಾತ್ಯಾತೀತ ಮತ್ತು ಸಮಾಜವಾದಿ ಎಂಬ ಎರಡು ಅಂಶಗಳನ್ನು ಸೇರಿಸಲಾಯಿತು ?
   42ನೇ ತಿದ್ದುಪಡಿ
2. ಉಕ್ಕಿನ ಮನುಷ್ಯ ಎಂದು ಯಾರನ್ನು ಕರೆದರು ? ಸರ್ದಾರ್ ವಲ್ಲಭಭಾಯಿ ಪಟೇಲ್
3. ಜಮ್ಮು ಕಾಶ್ಮೀರದ ರಾಜನಾಗಿದ್ದವನು ಹರಿಸಿಂಗ್
4. ವಿಶಾಲಾಂಧ್ರ ರಾಜ್ಯ ರಚಿಸಬೇಕೆಂದು 58 ದಿನಗಳ ಉಪವಾಸ ಸತ್ಯಾಗ್ರಹ ನಡೆಸಿ ಅಸುನೀಗಿದವನಾರು ?
   ಪೊಟ್ಟಿ ಶ್ರೀರಾಮಲು
5. ರಾಜ್ಯ ಪುನರ್‌ವಿಂಗಡಣಾ ಆಯೋಗದ ಅಧ್ಯಕ್ಷರು ಯಾರು ? ಫಜಲ್ ಅಲಿ – ಅಧ್ಯಕ್ಷರು
6. ಭಾರತದ ಒಕ್ಕೂಟ ಸೇರಲು ನಿರಾಕರಿಸಿದ ಸಂಸ್ಥಾನಗಳು ಯಾವುವು ?
   1) ಹೈದರಾಬಾದ್ 2) ಜಮ್ಮು-ಕಾಶ್ಮೀರ 3) ಜುನಾಗಡ್

## ಸಾರ್ವಜನಿಕ ಹಣಕಾಸು ಮತ್ತು ಆಯವ್ಯಯ

1. ಭಾರತದಲ್ಲಿ ಆಯವ್ಯಯ ಮಂಡಿಸುವವರಾರು ?
   ಹಣಕಾಸು ಸಚಿವರು
2. ಆಯವ್ಯಯ ಎಂದರೇನು ?
   ಸರ್ಕಾರದ ಒಂದು ವರ್ಷದ ವರಮಾನ ಮತ್ತು ವೆಚ್ಚಗಳನ್ನು ಕುರಿತು ತಯಾರಿಸಿದ ಅಂದಾಜು ಪಟ್ಟಿ
3. ತೆರಿಗೆ ಎಂದರೇನು ?
   ಪ್ರಜೆಗಳು ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ಸರ್ಕಾರಕ್ಕೆ ಕೊಡಬೇಕಾದ ಕಡ್ಡಾಯ ವಂತಿಗೆ
4. ಕಂದಾಯ ವರಮಾನ ಎಂದರೇನು ?
   ಸರ್ಕಾರವು ವಿವಿಧ ತೆರಿಗೆಗಳು ಮತ್ತು ತೆರಿಗೆಯೇತರ ಮೂಲಗಳಿಂದ ಸಂಗ್ರಹಿಸುವ ವರಮಾನ
5. ಪ್ರತ್ಯಕ್ಷ ತೆರಿಗೆ ಎಂದರೇನು ?
   ಸರ್ಕಾರವು ಯಾರ ಮೇಲೆ ತೆರಿಗೆ ವಿಧಿಸುತ್ತದೆಯೋ ಅವರೇ ಆ ತೆರಿಗೆ ಪಾವತಿಸಬೇಕು
6. ಪರೋಕ್ಷ ತೆರಿಗೆ ಎಂದರೇನು ?
   ಸರ್ಕಾರವು ವಿಧಿಸುವ ತೆರಿಗೆಯನ್ನು ಇತರರ ಮೇಲೆ ವರ್ಗಾಯಿಸಲು ಸಾಧ್ಯವಾಗುವ ತೆರಿಗೆ
7. G.S.T. ಜಾರಿಗೆ ಬಂದದ್ದು ಯಾವಾಗ ? ಜುಲೈ 1, 2017
8. ಉಳಿತಾಯ ಆಯವ್ಯಯ ಎಂದರೇನು ?
   ಸರ್ಕಾರದ ವರಮಾನವು ಅದರ ವೆಚ್ಚಕ್ಕಿಂತ ಹೆಚ್ಚಾಗಿದ್ದರೆ ಅದೇ ಉಳಿತಾಯ ಆಯವ್ಯಯ
9. ಕೊರತೆ ಆಯವ್ಯಯ ಎಂದರೇನು ?
   ವರಮಾನಕ್ಕಿಂತ ವೆಚ್ಚವು ಹೆಚ್ಚಾಗಿದ್ದರೆ ಅದೇ ಕೊರತೆ ಆಯವ್ಯಯ
10. ಸಮತೋಲನ ಆಯವ್ಯಯ ಎಂದರೇನು ? ವರಮಾನ ಮತ್ತು ವೆಚ್ಚಗಳೆರಡೂ ಸಮನಾಗಿರುವುದು.

## :: 02 ಅಂಕದ ಪ್ರಶ್ನೆಗಳು ::

### ಭಾರತಕ್ಕೆ ಯೂರೋಪಿಯನ್ನರ ಆಗಮನ

**1. ಕಾನ್‌ಸ್ಟಾಂಟಿನೋಪಲ್ ನಗರವು ಯೂರೋಪಿನ ವ್ಯಾಪಾರದ ಹೆಬ್ಬಾಗಿಲೆಂದು ಪರಿಗಣಿಸಲ್ಪಟ್ಟಿದೆ ಸಮರ್ಥಿಸಿರಿ**

ಏಷ್ಯಾದ ಸರಕುಗಳನ್ನು ಅರಬ್ ವರ್ತಕರು ಪೂರ್ವ ರೋಮನ್ ಸಾಮ್ರಾಜ್ಯದ ರಾಜಧಾನಿಯಾದ ಕಾನ್‌ಸ್ಟಾಂಟಿನೋಪಲ್ ನಗರಕ್ಕೆ ತಲುಪಿಸುತ್ತಿದ್ದರು. ಅಲ್ಲಿಂದ ಇಟಲಿಯ ವರ್ತಕರು ಅವುಗಳನ್ನು ಕೊಂಡು ಯುರೋಪಿನ ದೇಶದೊಳಗೆ ಮಾರುತ್ತಿದ್ದರು ಆ ಕಾರಣಕ್ಕಾಗಿ.

**2. ಭಾರತಕ್ಕೆ ಹೊಸ ಜಲಮಾರ್ಗ ಕಂಡುಹಿಡಿಯಲು ಕಾರಣವಾದ ಅಂಶಗಳನ್ನು ಚರ್ಚಿಸಿರಿ**

ಇಟಲಿಯ ವರ್ತಕರ ಏಕಸ್ವಾಮ್ಯವನ್ನು ಮುರಿಯಲು ಸ್ಪೇನ್, ಪೋರ್ಚುಗಲ್ ಮೊದಲಾದ ಯುರೋಪಿನ ದೇಶಗಳ ರಾಜರು ಹೊಸ ಸಮುದ್ರ ಮಾರ್ಗಗಳನ್ನು ಹುಡುಕಲು ಸಾಹಸಿ ನಾವಿಕರನ್ನು ಪ್ರೋತ್ಸಾಹಿಸಿದರು. ಹೊಸ ಆವಿಷ್ಕಾರಗಳಾದ ದಿಕ್ಸೂಚಿ, ನಕ್ಷತ್ರ ಉನ್ನತಿ ಮಾಪನ, ಸಿಡಿಮದ್ದು ಮೊದಲಾದುವು ನೆರವಿಗೆ ಬಂದವು

**3. ಪ್ಲಾಸಿ ಕದನಕ್ಕೆ ಕಾರಣಗಳನ್ನು ತಿಳಿಸಿ**

* ದಸ್ತಕ್‌ಗಳ ದುರುಪಯೋಗ
* ಅನುಮತಿ ಇಲ್ಲದೆ ಕೋಟೆಯ ದುರಸ್ತಿ
* ಕಪ್ಪು ಕೋಣೆಯ ದುರಂತ

**4. ಪ್ಲಾಸಿ ಕದನದ ಪರಿಣಾಮಗಳನ್ನು ತಿಳಿಸಿ**

* ಭಾರತೀಯರಲ್ಲಿದ್ದ ಅನೈಕ್ಯತೆ, ಅಸಂಘಟನೆ ಮತ್ತು ಈ ಕಾಲದಲ್ಲಿ ಇದ್ದ ವ್ಯಾಪಾರಿ ವರ್ಗದವರ ಲೋಭತನ ಪ್ರದರ್ಶಿಸಿತು
* ಮೀರ್ ಜಾಫರ್ ಬಂಗಾಳದ ನವಾಬನಾದನು
* ಕಂಪನಿಯು ಬಂಗಾಳ ಪ್ರಾಂತ್ಯದಲ್ಲಿ ವ್ಯಾಪಾರ ನಡೆಸಲು ಅನಿರ್ಬಂಧಿತ ಹಕ್ಕನ್ನು ಪಡೆಯಿತು
* ಮೀರ್ ಜಾಫರನು ಕಂಪನಿಗೆ 17 ಕೋಟಿ 70 ಲಕ್ಷ ರೂಪಾಯಿಗಳನ್ನು ನೀಡಿದನು

**6. ಬಕ್ಸಾರ್ ಕದನದ ಪರಿಣಾಮಗಳಾವುವು ?**

* ಈಸ್ಟ್ ಇಂಡಿಯಾ ಕಂಪನಿಗೆ ಬಂಗಾಳದ ಮೇಲಿನ ದಿವಾನಿ ಹಕ್ಕನ್ನು ಎರಡನೇ ಷಾ ಅಲಂ ನೀಡಿದನು.
* ಷಾ ಅಲಂ ವಾರ್ಷಿಕ 26 ಲಕ್ಷ ರೂಪಾಯಿ ಪಡೆದು ಬಂಗಾಳದ ಮೇಲಿನ ತನ್ನ ಹಕ್ಕನ್ನು ಬಿಟ್ಟುಕೊಡಬೇಕಾಯಿತು
* ಯುದ್ಧ ನಷ್ಟ ಪರಿಹಾರವಾಗಿ 50 ಲಕ್ಷ ರೂಪಾಯಿಗಳನ್ನು ಕೊಡಬೇಕಾಯಿತು
* ಮೀರ್ ಜಾಫರ್ ಮರಣ ಹೊಂದಿದ್ದರಿಂದ ಅವನ ಮಗನಿಗೆ ವಿಶ್ರಾಂತಿ ವೇತನ ನೀಡಿ ಬಂಗಾಳದ ಪೂರ್ಣ ಆಡಳಿತವನ್ನು ಕಂಪನಿಯು ನಿರ್ವಹಿಸತೊಡಗಿತು

**7. ಕರ್ನಾಟಿಕ್ ಯುದ್ಧಗಳು ಬ್ರಿಟಿಷರು ಭಾರತದಲ್ಲಿ ಭದ್ರವಾಗಿ ನೆಲೆಯಾಗಲು ಕಾರಣವಾದವು. ಸಮರ್ಥಿಸಿರಿ.**

* ಬ್ರಿಟಿಷರು ಮತ್ತು ಫ್ರೆಂಚರ ನಡುವೆ ನಡೆಯಿತು
* ಬ್ರಿಟಿಷರು ಫ್ರೆಂಚರನ್ನು ಸೋಲಿಸಿದರು
* ಅರ್ಕಾಟ್ ಮತ್ತು ಹೈದರಾಬಾದ್ ಪ್ರಾಂತ್ಯಗಳಲ್ಲಿ ಬ್ರಿಟಿಷರ ಪ್ರಾಬಲ್ಯ ಹೆಚ್ಚಾಯಿತು
* ಬ್ರಿಟಿಷರ ಪ್ರಬಲ ಸ್ಪರ್ಧಿಗಳಾದ ಫ್ರೆಂಚರನ್ನು ಸೋಲಿಸಿದ್ದರಿಂದ ಅವರ ಆಡಳಿತಕ್ಕೆ ಭದ್ರ ಬುನಾದಿಯನ್ನು ಹಾಕಿದರು.

## ಬ್ರಿಟಿಷ್ ಆಳ್ವಿಕೆಯ ವಿಸ್ತರಣೆ

1. ಲಾರ್ಡ್ ವೆಲ್ಲೆಸ್ಲಿಯು ತನ್ನ ಗುರಿಯಲ್ಲಿ ಸಾಧಿಸಲು ಅನುಸರಿಸಿದ ವಿಧಗಳಾವುವು ?
   * ಸಹಾಯಕ ಸೈನ್ಯ ಪದ್ಧತಿ * ಹೊಸ ರಾಜ್ಯಗಳ ಮೇಲೆ ಯುದ್ಧಗಳು
   * ಈಗಾಗಲೇ ಕಂಪನಿಯ ಅಧೀನಕ್ಕೆ ಒಳಪಟ್ಟಿರುವ ರಾಜ್ಯಗಳನ್ನು ನೇರ ನಿಯಂತ್ರಣಕ್ಕೆ ಒಳಪಡಿಸಿಕೊಳ್ಳುವುದು
2. ದತ್ತು ಮಕ್ಕಳಿಗೆ ಹಕ್ಕಿಲ್ಲವೆಂಬ ನೀತಿಗೆ ಒಳಪಟ್ಟ ರಾಜ್ಯಗಳಾವುವು ?
   1) ಸತಾರ 2) ಜೈಪುರ್ 3) ಸಂಬಲ್‌ಪುರ್ 4) ಝಾನ್ಸಿ 5) ನಾಗಪುರ
3. ಮೂರನೇ ಆಂಗ್ಲೋ–ಮರಾಠ ಯುದ್ಧಕ್ಕೆ ಕಾರಣವಾದ ಅಂಶಗಳನ್ನು ತಿಳಿಸಿ
   * 1817 ರಲ್ಲಿ ಪೇಶ್ವೆಯು ಪೂನಾದಲ್ಲಿ ಬ್ರಿಟಿಷ್ ರೆಸಿಡೆನ್ಸಿಯ ಮೇಲೆ ದಾಳಿ ನಡೆಸಿದ್ದನು
   * ನಾಗಪುರದ ಅಪ್ಪಾಸಾಹೇಬ ಮತ್ತು ಹೋಳ್ಕರ್ ಕೂಡ ಬ್ರಿಟಿಷರ ವಿರುದ್ಧ ದಂಗೆ ಎದ್ದು ಸೋತರು
   * ಪೇಶ್ವೆ 2ನೇ ಬಾಜಿರಾಯನು ಬ್ರಿಟಿಷರ ವಿರುದ್ಧ 1818 ರಲ್ಲಿ ಸೋತು ಶರಣಾದನು
   * ಬ್ರಿಟಿಷರು ಪೇಶ್ವೆ ಪದವಿಯನ್ನು ರದ್ದುಗೊಳಿಸಿ ಬಾಜಿರಾಯನಿಗೆ ವಿಶ್ರಾಂತಿ ವೇತನ ನೀಡಿದರು.
4. ಬ್ರಿಟಿಷರ ಅಧಿಕಾರ ವಿಸ್ತರಣೆಗೆ ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿಯು ಹೇಗೆ ಸಹಕಾರಿಯಾಯಿತು?
   * ಡಾಲ್ ಹೌಸಿಯು ತನ್ನ ವಿಸ್ತರಣಾ ನೀತಿಯನ್ನು ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿಯ ಮೂಲಕ ಸಾಧಿಸಿದನು.
   * ಈ ನೀತಿಯ ಪ್ರಕಾರ ಯಾವನೇ ಒಬ್ಬ ಭಾರತೀಯ ರಾಜನು ಮಕ್ಕಳಿಲ್ಲದೇ ಮೃತನಾದರೆ ಅವನು ದತ್ತು ತೆಗೆದುಕೊಂಡಿದ್ದ ಪುತ್ರನಿಗೆ ಉತ್ತರಾಧಿಕಾರದ ಹಕ್ಕಿಲ್ಲ. ಅಂತಹ ರಾಜ್ಯಗಳನ್ನು ಬ್ರಿಟಿಷ್ ಸಾಮ್ರಾಜ್ಯದಲ್ಲಿ ವಿಲೀನಗೊಳಿಸಲಾಯಿತು.

## ಸ್ವಾತಂತ್ರ್ಯೋತ್ತರ ಭಾರತ

1. ಪಾಂಡಿಚೆರಿಯನ್ನು ಫ್ರೆಂಚರಿಂದ ವಿಮುಕ್ತಗೊಳಿಸಿದ ರೀತಿಯನ್ನು ತಿಳಿಸಿ
   * ಫ್ರೆಂಚರು ಪಾಂಡಿಚೆರಿ, ಕಾರೈಕಲ್,ಮಾಹೆ ಮತ್ತು ಚಂದ್ರನಗರಗಳ ಮೇಲೆ ಹಿಡಿತವನ್ನು ಸಾಧಿಸಿದರು
   * ಇವು ಭಾರತಕ್ಕೆ ಸೇರಬೇಕೆಂದೂ ಕಾಂಗ್ರೆಸ್, ಕಮ್ಯೂನಿಷ್ಟ್‌ರು ಹೋರಾಟವನ್ನು ಮಾಡಿದರು
   * ಅದರ ಫಲವಾಗಿ 1954 ರಲ್ಲಿ ಈ ಪ್ರದೇಶವು ಬಾರತಕ್ಕೆ ಸೇರ್ಪಡೆಗೊಂಡವು
   * 1963 ರಲ್ಲಿ ಪಾಂಡಿಚೆರಿಯು ಕೇಂದ್ರಾಡಳಿತ ಪ್ರದೇಶವಾಯಿತು
2. ಭಾಷಾವಾರು ಪ್ರಾಂತ್ಯಗಳ ವಿಂಗಡಣ ಕ್ರಮವನ್ನು ಕುರಿತು ಬರೆಯಿರಿ
   * ಬ್ರಿಟಿಷರು ಮತ್ತು ದೇಶೀಯ ಸಂಸ್ಥಾನಗಳೆರಡು ಜನರಾಡುವ ಭಾಷೆಯಲ್ಲಿ ಆಡಳಿತ ನಡೆಸುತ್ತಿರಲಿಲ್ಲ.
   * ಆದ್ದರಿಂದ ವಿಶಾಲಾಂಧ್ರ ರಾಜ್ಯ ರಚಿಸಬೇಕೆಂದು 1952 ರಲ್ಲಿ ಪೊಟ್ಟಿ ಶ್ರೀರಾಮುಲು 58 ದಿನಗಳ ಕಾಲ ಉಪವಾಸ ನಡೆಸಿದರು.
   * ಈ ಕಾರಣದಿಂದ 1953 ರಲ್ಲಿ ಆಂಧ್ರಪ್ರದೇಶ ರಚನೆಯಾಯಿತು.
   * 1953 ರಲ್ಲಿ ಸರ್ಕಾರವು ರಾಜ್ಯ ಪುನರ್ವಿಂಗಡಣಾ ಆಯೋಗವನ್ನು ರಚಿಸಿತು.
3. ನಿರಾಶ್ರಿತರ ಸಮಸ್ಯೆಯನ್ನು ದೇಶವು ಹೇಗೆ ಬಗೆಹರಿಸಿತು ?
   * ಬಾಂಗ್ಲಾ ವಿಮೋಚನಾ ಯುದ್ಧದ ಪರಿಣಾಮವಾಗಿ ಸುಮಾರು 10 ಲಕ್ಷ ನಿರಾಶ್ರಿತರು ಭಾರತಕ್ಕೆ ಬಂದರು.
   * ಭಾರತ ಸರ್ಕಾರ ಮತ್ತು ಪಶ್ಚಿಮ ಬಂಗಾಳ, ಅಸ್ಸಾಂ ರಾಜ್ಯ ಸರ್ಕಾರಗಳು ನಿರಾಶ್ರಿತರಿಗೆ ಭವಿಷ್ಯದ ಬದುಕನ್ನು ಕಟ್ಟಿಕೊಳ್ಳಲು ಸಹಾಯ ಮಾಡಿದವು.
   * ಭಾಂಗ್ಲಾದಿಂದ ಬಂದ ಬಹುತೇಕ ನಿರಾಶ್ರಿತರಿಗೆ ಬಂಗಾಳಿ ಭಾಷೆ ಮಾತ್ರ ಪರಿಚಯವಿದ್ದುದರಿಂದ ಬಂಗಾಳದಲ್ಲಿ ನೆಲೆಯೂರಲೂ ಅವಕಾಶ ನೀಡಿದರು.

* ನಿರಾಶ್ರಿತರಿಗೆ ಮಾನವೀಯ ನೆಲೆಯಲ್ಲಿ ಪರಿಹಾರ ನೀಡಿದರು.

4. **ದೇಶೀಯ ಸಂಸ್ಥಾನಗಳ ವಿಲೀನೀಕರಣದ ಕಾರ್ಯಭಾರವನ್ನು ಯಶಸ್ವಿಯಾಗಿ ನಿರ್ವಹಿಸಿದ ಬಗೆ ತಿಳಿಸಿ.**
* ಬ್ರಿಟಿಷರು ಭಾರತ ಬಿಟ್ಟು ಹೋಗುವಾಗ 562 ಸಂಸ್ಥಾನಗಳಿದ್ದವು
* ಈ ಸಂಸ್ಥಾನಗಳ ಮುಂದೆ ಮೂರು ಅವಕಾಶಗಳನ್ನು ತೆರೆದಿಟ್ಟಿತು.
* 1947 ರಲ್ಲಿ ಭಾರತ ಸರ್ಕಾರ ಎಲ್ಲಾ ದೇಶೀಯ ಸಂಸ್ಥಾನಗಳನ್ನು ಭಾರತ ಒಕ್ಕೂಟಕ್ಕೆ ಸೇರಿಸಿಕೊಳ್ಳಲು ಆಹ್ವಾನ ನೀಡಿತು.
* ವಿಲೀನೀಕರಣಕೊಂಡವರಿಗೆ ರಾಜ್ಯಾದಾಯವನ್ನು ಆಧರಿಸಿ ರಾಜಧನವನ್ನು ನಿಗದಿಪಡಿಸಿತು.

5. **ಭಾರತವು ಸ್ವಾತಂತ್ರ್ಯ ಗಳಿಸಿದ ಸಮಯದಲ್ಲಿ ಎದುರಿಸಿದ ಸಮಸ್ಯೆಗಳಾವುವು ?**
* ದೇಶ ವಿಭಜನೆ
* ದೇಶೀ ಸಂಸ್ಥಾನಗಳ ವಿಲೀನೀಕರಣ
* ಭಾರತ ಅರ್ಥವ್ಯವಸ್ಥೆಯ ಸಮಸ್ಯೆ
* ಭಾರತವು ಜಾತಿ ಮತ್ತು ಲಿಂಗ ಸಂಬಂಧಿ ಸ್ವರೂಪದ ಅಸಮಾನತೆಗಳ ಸಮಸ್ಯೆ

6. **ಗೋವಾವನ್ನು ಪೋರ್ಚುಗೀಸರಿಂದ ಹೇಗೆ ಮುಕ್ತಗೊಳಿಸಲಾಯಿತು ?**
* ಪೋರ್ಚುಗೀಸರು ಆಫ್ರಿಕಾ ಮತ್ತು ಯೂರೋಪಿನಿಂದ ಹೆಚ್ಚಿನ ಸೈನ್ಯವನ್ನು ತರಿಸಿಕೊಂಡು ಚಳುವಳಿಯನ್ನು ದಮನ ಮಾಡಿ ಅಧಿಕಾರವನ್ನು ಬಲಪಡಿಸಿಕೊಳ್ಳಲು ಯತ್ನಿಸಿದರು.
* 1955 ರಲ್ಲಿ ಭಾರತದ ವಿವಿಧ ಭಾಗಗಳಿಂದ ಸತ್ಯಾಗ್ರಹಿಗಳು ಬಂದು ಗೋವಾದಿಂದ ತೊಲಗಬೇಕೆಂದು ಹೋರಾಟ ನಡೆಸಿದರು.
* 1961 ರಲ್ಲಿ ಗೋವಾವನ್ನು ವಶಪಡಿಸಿಕೊಂಡಿತು
* 1987ರವರೆಗೂ ಕೇಂದ್ರಾಡಳಿತ ಪ್ರದೇಶವಾಗಿದ್ದ ಗೋವಾ ನಂತರ ರಾಜ್ಯವಾಯಿತು.

## 20 ನೇ ಶತಮಾನದ ರಾಜಕೀಯ ಆಯಾಮಗಳು

1. **ಪ್ರಥಮ ಮಹಾಯುದ್ಧಕ್ಕೆ ತಕ್ಷಣದ ಕಾರಣವನ್ನು ತಿಳಿಸಿ**

ಕಾರಣವೇನೆಂದರೆ, ಜುಲೈ 28 ರಂದು ಆಸ್ಟ್ರಿಯಾದ ರಾಜಕುಮಾರ ಆರ್ಕ್‌ಡ್ಯೂಕ್ ಫ್ರಾನ್ಸಿಸ್ ಫರ್ಡಿನೆಂಡ್‌ನ ಹತ್ಯೆಯಾಯಿತು. ಈ ಘಟನೆಯು ಆಸ್ಟ್ರಿಯಾ ಮತ್ತು ಸರ್ಬಿಯಾ ದೇಶಗಳ ನಡುವೆ ತಕ್ಷಣವೇ ಬಿಕ್ಕಟ್ಟು ಸೃಷ್ಟಿಸಿತು.

3. **ನಾಜಿ ಸಿದ್ಧಾಂತವು ಜರ್ಮನಿಯನ್ನು ಹಾಳು ಮಾಡಿತು. ಸಮರ್ಥಿಸಿ.**
* ಜರ್ಮನ್ ಆರ್ಯ ಜನಾಂಗವೇ ಶ್ರೇಷ್ಠವೆಂಬ ಜನಾಂಗವನ್ನು ಮುಂದಿಟ್ಟರು
* ಇದನ್ನು ಆಳಲು ಜರ್ಮನರು ಮಾತ್ರ ಯೋಗ್ಯರು
* ಜರ್ಮನ್ನರ ಎಲ್ಲಾ ಸಮಸ್ಯೆಗಳಿಗೆ ಯಹೂದಿಗಳೇ ಕಾರಣ
* ಇವರು ಬದುಕಲು ಯೋಗ್ಯರಲ್ಲ
* ಜನಾಂಗೀಯ ದ್ವೇಷವನ್ನು ಪ್ರಸಾರ ಮಾಡಲು ಗೋಬೆಲ್ಸ್ ಎಂಬ ಮಂತ್ರಿಯನ್ನು ನೇಮಕ ಮಾಡಿದರು.

4. **2 ನೇ ಮಹಾಯುದ್ಧಕ್ಕೆ ಕಾರಣಗಳಾವುವು ?**
* ಸರ್ವಾಧಿಕಾರಿಗಳ ಉಗಮ
* ಉಗ್ರ ರಾಷ್ಟ್ರೀಯತೆ
* ಮಹಾ ಆರ್ಥಿಕ ಕುಸಿತ
* ಶತೃ ಮತ್ತು ಮಿತ್ರ ಬಣಗಳ ರಚನೆ
* ಪೋಲ್ಯಾಂಡ್‌ನ್ನು ಹಿಟ್ಲರ್ ವಶಪಡಿಸಿಕೊಂಡಿದ್ದು.

5. **ಚೀನಾ ಕ್ರಾಂತಿಯ ನಂತರ ಹೇಗೆ ಶಕ್ತಿಯುತ ರಾಷ್ಟ್ರವಾಗಿ ಬೆಳೆಯಿತು ?**
* ಸಾಮೂಹಿಕ ಕೃಷಿ ಪದ್ಧತಿ ಜಾರಿ
* ಶಿಕ್ಷಣ, ಆರೋಗ್ಯ ಸೌಲಭ್ಯ ನೀಡಿದರು
* ಕೈಗಾರಿಕಾ ಬೆಳವಣಿಗೆಗೆ ಮಹತ್ವ
* ಮುನ್ನಡೆಯ ಮಹಾಜಿಗಿತ

6. ಶೀತಲ ಸಮರದ ನಂತರ ಮಾಡಿಕೊಂಡಿರುವ ಜಾಗತಿಕ ಒಪ್ಪಂದಗಳಾವುವು ?

ಜಾಗತಿಕ ಮೈತ್ರಿಕೂಟ ಒಪ್ಪಂದಗಳಾವುವು ?

* ನ್ಯಾಟೋ * ಸೆಂಟೋ
* ಸಿಯಾಟೋ * ವಾರ್ಸಾ ಒಪ್ಪಂದ

7. ಶೀತಲ ಸಮರವು ಸೃಷ್ಟಿಸಿದ ಪ್ರಮುಖ ಬಿಕ್ಕಟ್ಟುಗಳಾವುವು ?

* ಸೂಯೆಜ್ ಕಾಲುವೆ ಬಿಕ್ಕಟ್ಟು * ಕೊರಿಯನ್ ಯುದ್ಧ
* ವಿಯೆಟ್ನಾಂ ಯುದ್ಧ * ಬರ್ಲಿನ್ ಬಿಕ್ಕಟ್ಟು
* ಕ್ಯೂಬನ್ ಕ್ಷಿಪಣಿ ಬಿಕ್ಕಟ್ಟು

## ಭಾರತದ ವಿದೇಶಾಂಗ ನೀತಿ

1. ಭಾರತದ ವಿದೇಶಾಂಗ ನೀತಿಯನ್ನು ನೆಹರೂರವರ ವಿದೇಶಾಂಗ ನೀತಿ ಎಂದು ವರ್ಣಿಸಲಾಗಿದೆ ಏಕೆ ?

* ವಿದೇಶಾಂಗ ಮಂತ್ರಿಯಾಗಿದ್ದರು
* ರೇಡಿಯೋ ಭಾಷಣ ವಿದೇಶಾಂಗ ನೀತಿಯ ರೂಪರೇಷೆಗಳು
* ಪಂಚಶೀಲ ತತ್ವಗಳು * ಅಲಿಪ್ತ ನೀತಿ

2. ಪ್ರತಿಯೊಂದು ರಾಷ್ಟ್ರಕ್ಕೂ ತನ್ನದೇ ಆದ ವಿದೇಶಾಂಗ ನೀತಿ ಅತ್ಯಗತ್ಯ ಏಕೆ ?

* ಏಕಾಂಗಿಯಾಗಿರಲು ಸಾಧ್ಯವಿಲ್ಲ * ಅಭಿವೃದ್ಧಿಗೆ ಬೇರೆ ದೇಶದ ಸಹಕಾರ ಅಗತ್ಯ
* ತನ್ನ ರಾಷ್ಟ್ರದ ರಕ್ಷಣೆಗೆ * ವಸುದೈವ ಕುಟುಂಬ

3. ಭಾರತದ ವಿದೇಶಾಂಗ ನೀತಿಯ ಪ್ರಮುಖ ಉದ್ದೇಶಗಳೇನು ?

* ರಾಷ್ಟ್ರದ ಭದ್ರತೆ * ರಾಷ್ಟ್ರದ ಆರ್ಥಿಕ ಸಂವರ್ಧನೆ
* ವಿಶ್ವಶಾಂತಿ ಮತ್ತು ಸಹಬಾಳ್ವೆಯನ್ನು ಸಾಧಿಸುವುದು
* ಸಾಂಸ್ಕೃತಿಕ ಮೌಲ್ಯ ವಿಸ್ತರಣೆ* ವಿರೋಧಿ ರಾಷ್ಟ್ರಗಳನ್ನು ನಿರ್ಬಂಧಿಸುವುದು

4. ಭಾರತದ ವಿದೇಶಾಂಗ ನೀತಿಯ ನಿರೂಪಣೆಯಲ್ಲಿ ಅಡಕವಾದ ಅಂಶಗಳಾವುವು ?

* ರಾಷ್ಟ್ರೀಯ ಹಿತಾಸಕ್ತಿಗಳು * ರಾಜಕೀಯ ಪರಿಸ್ಥಿತಿ
* ಭೌಗೋಳಿಕ ಅಂಶಗಳು * ಅರ್ಥ ವ್ಯವಸ್ಥೆ
* ರಕ್ಷಣಾ ಸಾಮರ್ಥ್ಯ

5. ಭಾರತವು ಒಂದು ಪ್ರಭಾವಶಾಲಿ ರಾಷ್ಟ್ರವಾಗಿ ವಿಶ್ವಮಾನ್ಯ ಪಡೆದಿದೆ ಹೇಗೆ ?

* ತನ್ನದೇ ವಿದೇಶಾಂಗ ನೀತಿ ಹೊಂದಿದೆ
* ವಿಫುಲ ಮಾನವ ಮತ್ತು ನೈಸರ್ಗಿಕ ಸಂಪನ್ಮೂಲ
* ಭೌದ್ಧಿಕ ಮತ್ತು ಔದ್ಯೋಗಿಕ ಸಾಮರ್ಥ್ಯ ಹೊಂದಿದೆ
* ಬಲಾಢ್ಯ ಮಿಲಿಟರಿ ಪಡೆ

6. ಭಾರತದ ವಿದೇಶಾಂಗ ನೀತಿಯ ಲಕ್ಷಣಗಳಾವುವು ?

* ಪಂಚಶೀಲ ತತ್ವಗಳು * ಅಲಿಪ್ತ ನೀತಿ
* ವಸಾಹತುಷಾಹಿತ್ವಕ್ಕೆ ವಿರೋಧ * ವರ್ಣಭೇದ ನೀತಿಗೆ ವಿರೋಧ
* ನಿಶ್ಯಸ್ತ್ರೀಕರಣ

7. ಅಂತರಾಷ್ಟ್ರೀಯ ಸಂಬಂಧವೃದ್ಧಿಗಾಗಿ ಭಾರತ ಅಳವಡಿಸಿಕೊಂಡ ಪಂಚಶೀಲ ತತ್ವಗಳಾವುವು?

* ಪರಸ್ಪರ ಪ್ರಾದೇಶಿಕ ಮತ್ತು ಸಾರ್ವಭೌಮತೆಗೆ ಗೌರವ
* ಆಕ್ರಮಣ ಮಾಡದೇ ಇರುವುದು

* ಪರಸ್ಪರ ಹಸ್ತಕ್ಷೇಪ ಮಾಡದಿರುವುದು
* ಪರಸ್ಪರ ಸಹಕಾರ ಮತ್ತು ಸಮಾನತೆ
* ಶಾಂತಿಯುತ ಸಹಬಾಳ್ವೆ

8. ದಕ್ಷಿಣ ಆಫ್ರಿಕಾದಲ್ಲಿ ಅನುಸರಿಸಿದ ವರ್ಣಭೇದ ನೀತಿಯ ಬಗ್ಗೆ ಬರೆಯಿರಿ
* ಕರಿಯರ ಮೇಲೆ ಅತ್ಯಂತ ಕ್ರೂರ ಮತ್ತು ದೌರ್ಜನ್ಯ ನಡವಳಿಕೆ
* ಮಾನವ ಹಕ್ಕುಗಳ ಉಲ್ಲಂಘನೆ
* ನೆಲ್ಸನ್ ಮಂಡೇಲಾ ಹೋರಾಟ ಗುರಿಸಾಧನೆ

9. ಪ್ರಚಲಿತ ಜಗತ್ತಿಗೆ ನಿಶ್ಯಸ್ತ್ರೀಕರಣ ಅತೀ ಅಗತ್ಯ ಎಂದು ಭಾರತ ಏಕೆ ಪ್ರತಿಪಾದಿಸುತ್ತಿದೆ?
* ಶಸ್ತ್ರಾಸ್ತ್ರ ಪೈಪೋಟಿಯಿಂದ ಮೂರನೇ ಮಹಾಯುದ್ಧ ಆತಂಕ
* ಅಣ್ವಸ್ತ್ರ ಕದನದ ಭಯ
* ಭಾರತ ಶಾಂತಿಪ್ರಿಯ ರಾಷ್ಟ್ರ
* ವಿಶ್ವ ಶಾಂತಿ ಮತ್ತು ಸಹಬಾಳ್ವೆಗೆ ಒತ್ತು

10. ಭಾರತವು ವಿಶ್ವದ ಯಾವುದೇ ಶಕ್ತಿಶಾಲಿ ಬಣಗಳಿಗೆ ಸೇರದೇ ತಟಸ್ಥವಾಗಿರಲು ಬಯಸುತ್ತದೆ – ಈ ಹೇಳಿಕೆಯನ್ನು ಸಮರ್ಥಿಸಿ
* ಅಮೆರಿಕಾ ಮತ್ತು ರಷ್ಯಾ ಎರಡು ಬಣ
* ಯಾವ ಬಣಕ್ಕೂ ಸೇರದೇ ತಟಸ್ಥ ನೀತಿ
* ಅಮೆರಿಕಾದಿಂದ ಆರ್ಥಿಕ ನೆರವು ಮತ್ತು ರಷ್ಯಾದಿಂದ ಭದ್ರತಾ ನೆರವು ಪಡೆಯಲು

## ಅನ್ಯ ರಾಷ್ಟ್ರಗಳೊಂದಿಗೆ ಭಾರತದ ಸಂಬಂಧ

1. ಅನ್ಯ ರಾಷ್ಟ್ರಗಳೊಂದಿಗೆ ಭಾರತವು ಉತ್ತಮ ಬಾಂಧವ್ಯ ಹೊಂದುವುದು ಅನಿವಾರ್ಯವಾಗಿದೆ ಏಕೆ ?
* ಎಲ್ಲಾ ರಾಷ್ಟ್ರಗಳೊಂದಿಗೆ ಉತ್ತಮ ಬಾಂಧವ್ಯ
* ನೆರೆ ರಾಷ್ಟ್ರಗಳೊಂದಿಗೆ ಭಾರತವು ಉತ್ತಮ ಬಾಂಧವ್ಯ
* ಗಡಿಭದ್ರತೆ, ವಿದೇಶ ವ್ಯಾಪಾರ, ಆರ್ಥಿಕ ಲಾಭ, ರಾಷ್ಟ್ರ ಗೌರವ

2. ಭಾರತ ಮತ್ತು ಚೀನಾ ದೇಶಗಳ ನಡುವಿನ ಸಂಬಂಧವು ಪ್ರಾಚೀನ ಕಾಲದಿಂದಲೂ ಇತ್ತು ಎಂಬುದನ್ನು ಸಮರ್ಥಿಸಿರಿ
* ಸಿಂಧೂ ನಾಗರಿಕತೆ ಕಾಲದಿಂದಲೂ
* ಬೌದ್ಧ ಧರ್ಮ ಪ್ರಚಾರ
* ಚೀನಾದ ರಾಜವಂಶಗಳೊಂದಿಗೆ ಸಂಬಂಧ
* ವ್ಯಾಪಾರ ಸಂಬಂಧ

3. ಇತ್ತೀಚಿನ ದಿನಗಳಲ್ಲಿ ಚೀನಾದೊಂದಿಗೆ ನಮ್ಮ ಬಾಂಧವ್ಯ ಹದಗೆಡಲು ಕಾರಣವೇನು ?
* ಟಿಬೇಟ್ ವಶ
* 1962 ರಲ್ಲಿ ಚೀನಾ ದಾಳಿ
* ಗಡಿ ಸಮಸ್ಯೆ
* ಅರುಣಾಚಲ ಪ್ರದೇಶ ಚೀನಾ ತನ್ನದೆಂಬ ವಾದ
* ಅಣ್ವಸ್ತ್ರ ತಯಾರಿ

4. ವಿವಾದದ ಹೊರತಾಗಿಯೂ ಚೀನಾದೊಂದಿಗೆ ಉತ್ತಮ ಬಾಂಧವ್ಯ ಹೊಂದಿದೆ ಎಂದು ಹೇಗೆ ಹೇಳುವಿರಿ ?
* ಪಂಚಶೀಲ ತತ್ವಗಳು
* ದ್ವಿಪಕ್ಷೀಯ ಒಪ್ಪಂದಗಳು
* ವ್ಯಾಪಾರ ಮತ್ತು ವಾಣಿಜ್ಯ ಸಂಬಂಧಗಳು
* 2015ರಲ್ಲಿ ಬ್ರಿಕ್ಸ್ ರಾಷ್ಟ್ರಗಳ ಸ್ಥಾಪನೆ

5. ಪಾಕಿಸ್ತಾನದೊಂದಿಗೆ ತನ್ನ ಸಂಬಂಧವನ್ನು ಉತ್ತಮಪಡಿಸಲು ಭಾರತ ಕೈಗೊಂಡ ಕ್ರಮಗಳೇನು?
* ವಿದೇಶಾಂಗ ವ್ಯವಹಾರ
* ತಾಷ್ಕೆಂಟ್ ಸಿಮ್ಲಾ ಒಪ್ಪಂದ
* ಲಾಹೋರ್ ಬಸ್ ಯಾತ್ರೆ
* ಆಗ್ರಾ ಶೃಂಗಸಭೆ

6. ಭಾರತ ಮತ್ತು ಪಾಕಿಸ್ತಾನ ಮಧ್ಯೆ ಉದ್ವಿಗ್ನತೆಗೆ ಕಾರಣವಾದ ವಿಷಯಗಳಾವುವು ?
* ಜಮ್ಮು ಮತ್ತು ಕಾಶ್ಮೀರ ಸಮಸ್ಯೆ
* ಭಯೋತ್ಪಾದನೆ

* ನೀರಿನ ಹಂಚಿಕೆ * ಮೂರು ಬಾರಿ ಯುದ್ಧ * 2001ರ ಸಂಸತ್ ದಾಳಿ
* 2016 ರ ಪಠಾಣ್‌ಕೋಟ್ ದಾಳಿ * 2019 ರ ಪುಲ್ವಾಮಾ ದಾಳಿ

7. ಭಾರತ ಮತ್ತು ಪಾಕಿಸ್ತಾನ ದೇಶಗಳ ಮಧ್ಯೆ ಭಿನ್ನಾಭಿಪ್ರಾಯಗಳಿದ್ದಾಗ್ಯೂ ಎರಡು ದೇಶಗಳ ನಡುವೆ ಇರುವ ಸಾಮ್ಯತೆಗಳೇನು ?
* ಭೌಗೋಳಿಕ ಸಾಮ್ಯತೆ * ಸಾಂಸ್ಕೃತಿಕ ಅರ್ಥಿಕ ವಿನಿಮಯ
* ವ್ಯಾಪಾರ ವಾಣಿಜ್ಯ * ಪ್ರಾಕೃತಿಕ ವಿಕೋಪ ಸಂದರ್ಭದಲ್ಲಿ ಪರಸ್ಪರ ಸಹಕಾರ

8. ಭಾರತ ಮತ್ತು ರಷ್ಯಾಗಳ ನಡುವಿನ ಸಂಬಂಧವನ್ನು ಬರೆಯಿರಿ
* 1966 ರ ತಾಷ್ಕೆಂಟ್ ಒಪ್ಪಂದಕ್ಕೆ ಸಹಕಾರ\
* ಭಿಲಾಯಿ ಮತ್ತು ಬೋಕಾರೊ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಗೆ ನೆರವು
* 1971 ರಲ್ಲಿ 20 ವರ್ಷಗಳ ಶಾಂತಿ ಒಪ್ಪಂದ
* ಚೀನಾ ಆಕ್ರಮಣ ಖಂಡನೆ
* ಗೋವಾ ವಿಮೋಚನೆಗೆ ಸಹಕಾರ
* ಭದ್ರತಾ ಮಂಡಳಿಯ ಖಾಯಂ ಸ್ಥಾನಕ್ಕೆ ಬೆಂಬಲ

9. ಭಾರತ ಮತ್ತು ಅಮೆರಿಕಾ ನಡುವಿನ ಸಂಬಂಧವನ್ನು ಬರೆಯಿರಿ
* 1962 ರ ಚೀನಾದಾಳಿಯಲ್ಲಿ ಸಹಕಾರ
* ಜಾಗತಿಕ ಶಾಂತಿ ನೆಲೆಯಲ್ಲಿ ವಿಶ್ವಸಂಸ್ಥೆಯಲ್ಲಿ ಸಹಕಾರ
* ಭಯೋತ್ಪಾದನೆ ಹತ್ತಿಕ್ಕಲು ನೆರವು
* ವಿದೇಶ ವ್ಯಾಪಾರ, ವಿಜ್ಞಾನ ಮತ್ತು ತಾಂತ್ರಿಕತೆಯಲ್ಲಿ ನೆರವು

## ಜಾಗತಿಕ ಸಮಸ್ಯೆಗಳು ಭಾರತದ ಪಾತ್ರ

1. ಮಾನವ ಹಕ್ಕುಗಳ ಪ್ರತಿಪಾದನೆಗಾಗಿ ಭಾರತ ನಡೆಸುತ್ತಿರುವ ಹೋರಾಟವನ್ನು ವಿವರಿಸಿ
* ಸಂವಿಧಾನದಲ್ಲಿ ಮೂಲಭೂತ ಹಕ್ಕುಗಳ ಅಳವಡಿಕೆ
* ಜಾಗತಿಕ ವೇದಿಕೆಯಲ್ಲಿ ಮಾನವ ಹಕ್ಕುಗಳ ಸಂರಕ್ಷಣೆಗೆ ಯತ್ನ
* ಗುಲಾಮಗಿರಿ ನಿಷೇಧ, ಮಾನವ ಮಾರಾಟ, ಮಹಿಳಾ ಶೋಷಣೆ ನಿಷೇಧ
* ಮಾನವ ಹಕ್ಕುಗಳ ರಾಷ್ಟ್ರೀಯ ಮತ್ತು ರಾಜ್ಯ ಆಯೋಗ ರಚನೆ

2. ಮಾನವ ಹಕ್ಕುಗಳಿಗೆ ಸಂಬಂಧಿಸಿದಂತೆ ವಿಶ್ವಸಂಸ್ಥೆಯ ಪಾತ್ರ
* ಮಾನವ ಹಕ್ಕುಗಳ ಸಂರಕ್ಷಣೆ, ಸದಸ್ಯ ರಾಷ್ಟ್ರಗಳ ಹೊಣೆಗಾರಿಕೆ
* ಮಾನವ ಹಕ್ಕುಗಳ 30 ಕಲಮು ಮಾರ್ಗಸೂಚಿ
* 1966 ಮಾನವ ಹಕ್ಕುಗಳ ರಕ್ಷಣೆಗೆ ಸದಸ್ಯ ರಾಷ್ಟ್ರಗಳ ಸಭೆ
* ಅಂತರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ

3. ಭಾರತವೂ ಸೇರಿದಂತೆ ಎಲ್ಲಾ ರಾಷ್ಟ್ರಗಳು ಪರಸ್ಪರ ನಿಶ್ಶಿತನಾಶದ ವಿರುದ್ಧ ಹೋರಾಡಬೇಕು, ಏಕೆ ?
* ಅಣ್ವಸ್ತ್ರ ಯುಗದಲ್ಲಿ ಯುದ್ಧವನ್ನು ನಾವು ಕೊನೆಗಾಣಿಸಬೇಕು ಇಲ್ಲವಾದರೆ ಯುದ್ಧ ನಮ್ಮನ್ನು ಕೊನೆಗಾಣಿಸುತ್ತದೆ
* ಶಸ್ತ್ರಾಸ್ತ್ರ ಜಮಾವಣೆ ನಿಷೇಧ – ಪೈಪೋಟಿಯಿಂದ ಜನಾಂಗೀಯ ನಾಶ

4. ಆರ್ಥಿಕ ಅಸಮಾನತೆಯ ನಿವಾರಣೆಗಾಗಿ ಭಾರತವು ಕೈಗೊಂಡಿರುವ ಸುಧಾರಣಾ ಕ್ರಮಗಳು
* ಬಡ ರಾಷ್ಟ್ರಗಳಿಗೆ ಪ್ರಬಲ ರಾಷ್ಟ್ರಗಳ ನೆರವು
* ಹಿಂದುಳಿದ ರಾಷ್ಟ್ರಗಳ ಆತ್ಮಗೌರವವನ್ನು ಎತ್ತಿ ಹಿಡಿಯುವುದು * ಬಂಡವಾಳದ ಹರಿವು

5. ತೃತೀಯ ಜಗತ್ತಿನ ರಾಷ್ಟ್ರಗಳು ಹಿಂದುಳಿಯಲು ಕಾರಣಗಳೇನು ?
 * ವಸಾಹತುಶಾಹಿಯಿಂದ ಶೋಷಣೆಗೆ ಒಳಗಾಗಿವೆ
 * ಆಹಾರ, ಬಂಡವಾಳ, ತಾಂತ್ರಿಕತೆ, ಆರೋಗ್ಯ ಸಲಕರಣೆಗಳಲ್ಲಿ ಕೊರತೆ
 * ಅನಗತ್ಯ ವೆಚ್ಚ, ಮುಕ್ತ ವ್ಯಾಪಾರ, ಅಸಮರ್ಪಕ ಪೈಪೋಟಿ, ಜಾಗತೀಕರಣ ಮುಂತಾದ ವಿದ್ಯಮಾನಗಳು ಬಡರಾಷ್ಟ್ರಗಳ ಮೇಲೆ ದುಷ್ಪರಿಣಾಮ ಬೀರುತ್ತವೆ.

## ಸಾಮಾಜಿಕ ಸ್ತರ ವಿನ್ಯಾಸ

1. ಸಾಮಾಜಿಕ ಸ್ತರ ವಿನ್ಯಾಸದ ಲಕ್ಷಣಗಳೇನು ?
 * ಸಾಮಾಜಿಕವಾದದ್ದು
 * ಪುರಾತನವಾದದ್ದು
 * ಸರ್ವವ್ಯಾಪಕವಾದದ್ದು
 * ವಿವಿಧ ರೂಪಗಳಲ್ಲಿದೆ

2. ಸಾಮಾಜಿಕ ಸ್ತರ ವಿನ್ಯಾಸದ ಪ್ರಮುಖ ರೂಪಗಳಾವುವು ?
 * ಆದಿವಾಸಿ ಸಮಾಜ
 * ವರ್ಣ ವ್ಯವಸ್ಥೆ
 * ಗುಲಾಮಗಿರಿ
 * ಜಾತಿ ವ್ಯವಸ್ಥೆ
 * ಎಸ್ಟೇಟ್ಸ್ ಪದ್ಧತಿ

3. ಅಸ್ಪೃಷ್ಯತೆಯ ಸಮಸ್ಯೆಗಳಾವುವು ?
 * ಸಾಮಾಜಿಕ ವ್ಯವಸ್ಥೆಯಲ್ಲಿ ಅತ್ಯಂತ ಕೆಳಮಟ್ಟದ ಸ್ಥಾನ
 * ಶೈಕ್ಷಣಿಕ ಅವಕಾಶಗಳಿಂದ ಹೊರಗಿಡಲಾಗಿತ್ತು
 * ಆಸ್ತಿಯ ಒಡೆತನದ ಹಕ್ಕಿನ ನಿರಾಕರಣೆ
 * ರಾಜಕೀಯ ಭಾಗವಹಿಸುವಿಕೆ ನಿರಾಕರಣೆ

4. ಅಸ್ಪೃಷ್ಯತೆ ನಿವಾರಿಸಲು ಇರುವ ಕಾನೂನು ಕ್ರಮಗಳಾವುವು ? ಅಥವಾ ಅಸ್ಪೃಷ್ಯತೆಯನ್ನು ನಿವಾರಿಸಲು ಸಂವಿಧಾನವು ಕೈಗೊಂಡಿರುವ ಕ್ರಮಗಳಾವುವು ?
 * 17 ನೇ ವಿಧಿ – ಅಸ್ಪೃಷ್ಯತಾ ಆಚರಣೆ ನಿಷೇಧಿಸಿದೆ
 * 1955 – ಅಸ್ಪೃಷ್ಯತಾ ಅಪರಾಧ ಕಾಯ್ದೆ ಜಾರಿ
 * 1976 – ನಾಗರಿಕ ಹಕ್ಕುಗಳ ಸಂರಕ್ಷಣಾ ಕಾಯ್ದೆ ಜಾರಿ
 * ಸಾರ್ವತ್ರಿಕ ಮತದನಾದ ಮತ್ತು ಸಮಾನತೆ ಹಕ್ಕು – ಎಲ್ಲಾ ನಾಗರಿಕರಿಗೂ ನೀಡಿದೆ
 * 1989 ರ ಕಾಯ್ದೆ – ಅಸ್ಪೃಷ್ಯತೆ ನಿರ್ಮೂಲನೆ ಕುರಿತಾದ ವಿಶೇಷ ಜವಾಬ್ದಾರಿಗಳನ್ನು ರಾಜ್ಯ ಸರ್ಕಾರಗಳಿಗೆ ವಹಿಸಿದೆ.

5. ಸಾಮಾಜಿಕ ಸ್ತರವಿನ್ಯಾಸ ಎಂದರೇನು ? ಯಾವ ಯಾವ ಲಕ್ಷಣಗಳ ಆಧಾರಗಳಲ್ಲಿ ಜನರನ್ನು ವರ್ಗೀಕರಿಸಲಾಗುತ್ತದೆ ?

ಜನರನ್ನು ವಿಭಿನ್ನ ಸ್ತರಗಳಾಗಿ ವರ್ಗೀಕರಿಸುವ ವ್ಯವಸ್ಥೆಯೇ--- ಲಿಂಗ, ಜಾತಿ, ವೃತ್ತಿ, ವರ್ಗ, ಜನಾಂಗ ಇತ್ಯಾದಿ

6. ಶಿಕ್ಷಣಕ್ಕಾಗಿ ಇರುವ ಸಂವಿಧಾನದ ವಿವಿಧ ವಿಧಿಗಳಾವುವು ? ತಿಳಿಸಿ
 * 21 ಎ–6 ರಿಂದ 14 ವರ್ಷದೊಳಗಿನ ಎಲ್ಲ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ
 * 45 –6 ವರ್ಷದೊಳಗಿನ ಎಲ್ಲ ಮಕ್ಕಳ ಶೈಶವಾವಸ್ಥೆಯ ರಕ್ಷಣೆ, ಶೈಕ್ಷಣಿಕ ಅವಕಾಶ
 * 30 – ಅಲ್ಪಸಂಖ್ಯಾತರು ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸಲು ವಿಶೇಷ ಅವಕಾಶ
 * 46 – ಹಿಂದುಳಿದ ಜನರ ಅದರಲ್ಲಿಯೂ ಎಸ್.ಸಿ/ಎಸ್.ಟಿ. ಗಳ ಶೈಕ್ಷಣಿಕ ಆಸಕ್ತಿಗಳಿಗೆ ಬೆಂಬಲ ನೀಡಿ ಅಭಿವೃದ್ಧಿ ಪಡಿಸುವುದು

## ಸಾಮಾಜಿಕ ಚಳುವಳಿಗಳು

1. ಜನಮಂದೆ ಎಂದರೇನು ? ಉದಾಹರಣೆ ಕೊಡಿ

ಯಾವುದೇ ಪೂರ್ವ ಯೋಜನೆಯಿಲ್ಲದೇ ಅನಿಶ್ಚಿತವಾಗಿ ಒಂದು ಆಸಕ್ತಿ ಸುತ್ತ ನೆರೆದಿರುವ ಜನರಾಶಿಯೇ ಜನಮಂದೆ

ಉದಾ : ರಸ್ತೆ ಅಪಘಾತ ವೀಕ್ಷಿಸಲು ಸೇರಿರುವ ಗುಂಪು

ಚಲನಚಿತ್ರ ಮಂದಿರದಲ್ಲಿ ಟಿಕೆಟ್ ಪಡೆಯಲು ಮುತ್ತಿಗೆ ಹಾಕಿದ ಜನಸ್ತೋಮ

2. ದೊಂಬಿಯ ಸ್ವರೂಪವನ್ನು ತಿಳಿಸಿ

* ನಿಶ್ಚಿತ ಗುರಿ ಇಲ್ಲ
* ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಕಂಡುಬರುತ್ತವೆ
* ದೀರ್ಘ ಕಾಲ ನಡೆಯಲಾರವು
* ಸಮಾಜಘಾತುಕ ಚಟುವಟಿಕೆಗಳು ಹೆಚ್ಚುತ್ತವೆ

3. ಪರಿಸರ ಚಳುವಳಿಗಳನ್ನು ಹೆಸರಿಸಿ

* ಚಿಪ್ಕೋ
* ಅಪ್ಪಿಕೋ
* ನರ್ಮದಾ ಬಚಾವೋ
* ಮೌನ ಕಣಿವೆ ಆಂದೋಲನ

4. ಮದ್ಯಪಾನ ನಿಷೇಧ ಚಳುವಳಿಯನ್ನು ವಿವರಿಸಿ

* ಪರಿಸರ ಚಳುವಳಿಯ ಭಾಗವಾಗಿ ಕರಾವಳಿ ಮತ್ತು ಮಲೆನಾಡು ಪ್ರದೇಶದಲ್ಲಿ ಪ್ರಾರಂಭ
* ಕುಸುಮಾ ಸೊರಬ ಅವರ ಜೊತೆ ಹಲವರು ತಮ್ಮ ಜೀವ ಕಳೆದುಕೊಂಡಿದ್ದಾರೆ
* ಹಾಸನ, ಕೋಲಾರ, ಮಂಡ್ಯ ಮುಂತಾದ ಜಿಲ್ಲೆಗಳ ಮಹಿಳೆಯರಿಂದ ಚಳುವಳಿ
* ಮದ್ಯಪಾನದಿಂದ ಗ್ರಾಮೀಣ ಬಡ ಮಹಿಳೆಯರ ಬದುಕಿಗೆ ಇದು ಅನೇಕ ಗಂಡಾಂತರ ಉಂಟುಮಾಡುತ್ತಿತ್ತು.
* ಕೂಲಿಕಾರರು ತಮ್ಮ ಅತ್ಯಲ್ಪ ದುಡಿಮೆಯನ್ನು ಕುಡಿತಕ್ಕೆ ಹಾಕುವ ಮೂಲಕ ಚಟಕ್ಕಾಗಿ ಚಿಕ್ಕ ಮಕ್ಕಳನ್ನು ದುಡಿಮೆಗೆ ಕಳಿಸುತ್ತಿದ್ದಾರೆ. ಆದ್ದರಿಂದ ಈ ಚಳುವಳಿ ಪ್ರಾರಂಭ

1. ಬಾಲ ಕಾರ್ಮಿಕತೆಗೆ ಕಾರಣಗಳಾವುವು ?

* ಮಕ್ಕಳ ಹಕ್ಕುಗಳನ್ನು ಗೌರವಿಸಲು ಅಗತ್ಯವಾದ ಸಾಮಾಜಿಕ ವಾತಾವರಣವಿಲ್ಲದಿರುವುದು
* ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕುಗಳ ಪರಿಣಾಮಕಾರಿಯಾಗಿ ಅನುಷ್ಠಾನವಾಗದಿರುವುದು
* ಕುಟುಂಬದ ಆರ್ಥಿಕ ಸ್ಥಿತಿ
* ಭೂಸುಧಾರಣಾ ಕಾಯ್ದೆಯ ಅನುಷ್ಠಾನದ ಕೊರತೆಗಳು

2. ಮಕ್ಕಳ ದುಡಿಮೆಯ ದುಷ್ಪರಿಣಾಮಗಳಾವುವು ?

* ಮಕ್ಕಳ ದೈಹಿಕ ಮತ್ತು ಮಾನಸಿಕ ಬೆಳವಣಿಗೆಯ ಮೇಲೆ ಗಂಭೀರ ಪರಿಣಾಮ ಬೀರುವುದು
* ಶಿಕ್ಷಣದಿಂದ ವಂಚಿತರಾಗುವುದು
* ಕುಟುಂಬಗಳ ಚಲನೆ, ಆರ್ಥಿಕ ಚಲನೆ ಕುಸಿಯುವಂತೆ ಮಾಡುತ್ತದೆ
* ಹೆಣ್ಣು ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ಇತ್ಯಾದಿ

## ಭಾರತದ ಮೇಲ್ಮೈ ಲಕ್ಷಣಗಳು

1. ಭಾರತದ ಪ್ರಾಕೃತಿಕ ವಿಭಾಗಗಳಾವುವು ?

* ಉತ್ತರದ ಪರ್ವತಗಳು
* ಉತ್ತರದ ಮಹಾ ಮೈದಾನ
* ಪರ್ಯಾಯ ಪ್ರಸ್ಥಭೂಮಿ
* ಕರಾವಳಿ ಮೈದಾನ ಮತ್ತು ದ್ವೀಪಗಳು

2. ಉತ್ತರ ಮೈದಾನಗಳ ಪ್ರಾಮುಖ್ಯತೆಯನ್ನು ತಿಳಿಸಿ

* ಮೆಕ್ಕಲು ಮಣ್ಣಿನಿಂದ ಕೂಡಿದ್ದು ಕೃಷಿಗೆ ಯೋಗ್ಯ
* ಸಮತಟ್ಟಾದ ಭೂಭಾಗದಿಂದಾಗಿ ಸಾರಿಗೆ ಸಂಪರ್ಕಕ್ಕೆ ಅನುಕೂಲ

- * ಅನೇಕ ಕೈಗಾರಿಕೆಗಳು ಈ ಭಾಗದಲ್ಲಿವೆ
- * ಪವಿತ್ರ ಯಾತ್ರಾಸ್ಥಳದಿಂದ ಪ್ರವಾಸೋದ್ಯಮದ ಬೆಳವಣಿಗೆ

3. ಉತ್ತರದ ಪರ್ವತಗಳು ಪ್ರಾಮುಖ್ಯತೆಯನ್ನು ಹೊಂದಿವೆ ಎಂದು ಹೇಗೆ ಹೇಳುವಿರಿ ?
- * ಸೈಬೀರಿಯಾದಿಂದ ಬೀಸುವ ಶೀತ ಮಾರುತಗಳನ್ನು ತಡೆಯುತ್ತದೆ
- * ಅನೇಕ ಖನಿಜ ಸಂಪನ್ಮೂಲಗಳ ಆಗರವಾಗಿದೆ
- * ಅನೇಕ ನದಿಗಳ ಜನ್ಮಸ್ಥಾನವಾಗಿದೆ
- * ಪ್ರವಾಸೋದ್ಯಮ ಕೇಂದ್ರವಾಗಿ ಪ್ರಸಿದ್ಧಿ ಪಡೆದಿದೆ

4. ಪರ್ಯಾಯ ಪ್ರಸ್ಥಭೂಮಿಯು ಆರ್ಥಿಕ ಪ್ರಾಮುಖ್ಯತೆಯನ್ನು ಹೊಂದಿದೆ ಸಮರ್ಥಿಸಿ
- * ಅಪಾರ ಖನಿಜ ಸಂಪನ್ಮೂಲಗಳಿವೆ
- * ಜಲಪಾತಗಳಿಂದಾಗಿ ಜಲವಿದ್ಯುತ್ ಉತ್ಪಾದನೆಗೆ ಸಹಕಾರಿ
- * ದಕ್ಷಿಣ ಭಾರತದ ಅನೇಕ ನದಿಗಳ ಉಗಮ ಸ್ಥಾನ
- * ಕಪ್ಪು ಮಣ್ಣಿನಿಂದ ಕೂಡಿದ್ದು ಕೃಷಿಗೆ ಸಹಕಾರಿ

5. ಸಿವಾಲಿಕ್ ಬೆಟ್ಟಗಳನ್ನು ಕುರಿತು ಸಂಕ್ಷಿಪ್ತವಾಗಿ ವಿವರಿಸಿ
- * ಹಿಮಾಲಯದ ಪಾದ ಬೆಟ್ಟಗಳಾಗಿವೆ
- * ಕಡಿಮೆ ಎತ್ತರವನ್ನು ಹೊಂದಿವೆ
- * ಜಮ್ಮು ಕಾಶ್ಮೀರದಿಂದ ಅರುಣಾಚಲ ಪ್ರದೇಶದವರೆಗೆ ಹಬ್ಬಿವೆ
- * ಇಲ್ಲಿ ಕಿರಿದಾದ ಮತ್ತು ಸಮತಟ್ಟಾದ ಡೂನ್‌ಗಳಿವೆ

6. ಪಶ್ಚಿಮ ಘಟ್ಟಗಳು ಪೂರ್ವ ಘಟ್ಟಗಳಿಗಿಂತ ಭಿನ್ನವಾಗಿವೆ ಎಂದು ಹೇಗೆ ಹೇಳುವಿರಿ ?

| ಪಶ್ಚಿಮ ಘಟ್ಟಗಳು | ಪೂರ್ವ ಘಟ್ಟಗಳು |
|---|---|
| • ಎತ್ತರವಾಗಿವೆ | * ಎತ್ತರವಾಗಿಲ್ಲ |
| • ನಿರಂತರವಾಗಿವೆ | * ನಿರಂತರವಾಗಿಲ್ಲ |
| • ಅನೇಕ ಗಿರಿಧಾಮಗಳಿವೆ | * ಯಾವುದೇ ಗಿರಿಧಾಮಗಳಿಲ್ಲ |
| • ಅನೇಕ ನದಿಗಳ ಉಗಮ ಸ್ಥಾನ | * ನದಿಗಳ ಮುಖಜಭೂಮಿಯನ್ನು ಹೊಂದಿವೆ |

## ಭಾರತದ ಮಣ್ಣುಗಳು

1. ಭಾರತದ ಪ್ರಮುಖ ಮಣ್ಣಿನ ಪ್ರಕಾರಗಳಾವುವು ?
- * ಮೆಕ್ಕಲು ಮಣ್ಣು * ಕಪ್ಪು ಮಣ್ಣು * ಕೆಂಪು ಮಣ್ಣು
- * ಲ್ಯಾಟರೈಟ್ ಮಣ್ಣು * ಮರುಭೂಮಿ ಮಣ್ಣು * ಪರ್ವತ ಮಣ್ಣು

2. ಕೆಂಪು ಮಣ್ಣಿನ ಗುಣ ಲಕ್ಷಣಗಳಾವುವು ?
- * ಕೆಂಪು ಬಣ್ಣವನ್ನು ಹೊಂದಿರುವುದು * ತೇವಾಂಶ ಸಂಗ್ರಹಣಾ ಸಾಮರ್ಥ್ಯ ಕಡಿಮೆ
- * ಗ್ರಾನೈಟ್, ನೀಸ್ ಮತ್ತು ಸ್ಫಟಿಕ ಶಿಲೆಗಳಿಂದ ಉತ್ಪತ್ತಿ
- * ಮರಳಿನ ಅಂಶ ಹೆಚ್ಚು, ಜೇಡಿಯ ಪ್ರಮಾಣ ಕಡಿಮೆ

3. ಭಾರತದಲ್ಲಿ ಕಪ್ಪು ಮಣ್ಣಿನ ಹಂಚಿಕೆಯನ್ನು ತಿಳಿಸಿ
- * ಭಾರತದ ಪರ್ಯಾಯ ಪ್ರಸ್ಥಭೂಮಿಯಲ್ಲಿ ಹೆಚ್ಚು
- * ಮಹಾರಾಷ್ಟ್ರ, ಮಧ್ಯಪ್ರದೇಶ, ತೆಲಂಗಾಣ, ಕರ್ನಾಟಕ, ಗುಜರಾತ್, ತಮಿಳುನಾಡು
- * ಸುಮಾರು 5.45 ಲಕ್ಷ ಚ. ಕಿ. ಮೀ. ಪ್ರದೇಶದಲ್ಲಿ ಹಂಚಿಕೆ

4. **ಮಣ್ಣನ್ನು ಸವೆತಕ್ಕೊಳಪಡಿಸಿ ಮಣ್ಣಿನ ಫಲವತ್ತತೆ ನಾಶ ಮಾಡುತ್ತಿರುವ ಅಂಶಗಳಾವುವು?**

* ಅರಣ್ಯನಾಶ
* ಅವೈಜ್ಞಾನಿಕ ಬೇಸಾಯ
* ಸಾಕು ಪ್ರಾಣಿಗಳನ್ನು ಮೇಯಿಸುವುದು
* ವರ್ಗಾವಣೆ ಬೇಸಾಯ
* ಇಟ್ಟಿಗೆ, ಟೈಲ್ಸ್ ಮತ್ತು ಮಡಿಕೆಗಳ ನಿರ್ಮಾಣ

5. **ಮೆಕ್ಕಲು ಮಣ್ಣಿನ ಗುಣಲಕ್ಷಣಗಳಾವುವು ?**

* ನದಿಗಳ ಸಂಚಯನದಿಂದ ಈ ಮಣ್ಣು ಉತ್ಪತ್ತಿ
* ಫಲವತ್ತಾದ ಮಣ್ಣು
* ಸಿಂಧೂ ಗಂಗಾ ಬಯಲು ಪ್ರದೇಶದಲ್ಲಿ ವಿಸ್ತಾರವಾಗಿ ಹಬ್ಬಿದೆ
* ತೀರ ಪ್ರದೇಶದಲ್ಲಿಯೂ ಈ ಮಣ್ಣು ಕಂಡುಬರುತ್ತದೆ

6. **ಕೆಂಪು ಮಣ್ಣು ಮತ್ತು ಕಪ್ಪು ಮಣ್ಣುಗಳ ನಡುವಿನ ವ್ಯತ್ಯಾಸವೇನು ?**

| ಕೆಂಪು ಮಣ್ಣು | ಕಪ್ಪು ಮಣ್ಣು |
|---|---|
| • ಸ್ಫಟಿಕ ಶಿಲೆಗಳ ಶಿಥಿಲೀಕರಣದಿಂದ ಉತ್ಪತ್ತಿ | * ಅಗ್ನಿಶಿಲೆಗಳ ಶಿಥಿಲೀಕರಣದಿಂದ ಉತ್ಪತ್ತಿ |
| • ಕಬ್ಬಿಣದ ಅಂಶ ಕಬ್ಬಿಣದ ಆಕ್ಸೈಡ್ ಆಗಿ ಪರಿವರ್ತನೆ ಹೊಂದುತ್ತದೆ | * ಜೇಡಿ ಮಣ್ಣಿನ ಕಣಗಳು ಹೆಚ್ಚಾಗಿರುತ್ತದೆ |

7. **ಮಣ್ಣಿನ ಸವೆತದಿಂದಾಗುವ ಪರಿಣಾಮಗಳೇನು ?**

* ನದಿಗಳ ಹೂಳು ತುಂಬಿ ಪ್ರವಾಹ ಉಂಟಾಗುತ್ತವೆ
* ನದಿಗಳ ಹೂಳಿನಿಂದ ನದಿ ಹರಿಯುವ ಪಾತ್ರ ಬದಲಾಗುತ್ತದೆ
* ಜಲಾಶಯಗಳಲ್ಲಿ ನೀರಿನ ಸಂಗ್ರಹಣಾ ಸಾಮರ್ಥ್ಯ ಕಡಿಮೆಯಾಗುತ್ತದೆ
* ಭೂಮಿಯಲ್ಲಿ ನೀರು ಇಂಗುವಿಕೆ ಕಡಿಮೆಯಾಗುತ್ತದೆ

8. **ಮಣ್ಣಿನ ಸಂರಕ್ಷಣಾ ವಿಧಾನಗಳಿಂದ ಮಣ್ಣಿನ ಸವೆತವನ್ನು ನಿಯಂತ್ರಿಸಬಹುದು. ಸಮರ್ಥಿಸಿ**

* ಕೊರಕಲು ನಿಯಂತ್ರಣ ಮತ್ತು ಮೆಟ್ಟಿಲು ಪಂಕ್ತಿ ಬೇಸಾಯ
* ಚೆಕ್ ಡ್ಯಾಮ್‌ಗಳ ನಿರ್ಮಾಣ
* ಅರಣ್ಯ ರಕ್ಷಣೆ
* ಬದುಗಳ ನಿರ್ಮಾಣ

## ಭಾರತದ ಭೂ ಸಂಪನ್ಮೂಲಗಳು

1. **ಭಾರತದಲ್ಲಿ ಭೂಬಳಕೆಯ ಮೇಲೆ ಪ್ರಭಾವ ಬೀರುವ ಅಂಶಗಳಾವುವು ?**

* ಭೂ ಮೇಲ್ಮೈ ಲಕ್ಷಣ
* ವಾಯುಗುಣ
* ಮಣ್ಣು
* ಜನಸಾಂದ್ರತೆ
* ಸಾಮಾಜಿಕ, ಆರ್ಥಿಕ ಮತ್ತು ತಾಂತ್ರಿಕ ಅಂಶಗಳು

2. **ದೇಶದ ಅರ್ಥಿಕಾಭಿವೃದ್ಧಿಯು ಕೃಷಿಯ ಪ್ರಗತಿಯನ್ನು ಆಧರಿಸಿದೆ. ಸಮರ್ಥಿಸಿ**

* ಮಾನವನ ಅತ್ಯಂತ ಪ್ರಮುಖ ಮತ್ತು ಪ್ರಾಚೀನ ವೃತ್ತಿ
* ಭಾರತವು ಕೃಷಿ ಪ್ರಧಾನವಾದ ದೇಶ
* ಶೇ. 65 ರಷ್ಟು ಜನಸಂಖ್ಯೆ ಕೃಷಿಯನ್ನೇ ಅವಲಂಬಿಸಿದ್ದಾರೆ
* ಜನ ಮತ್ತು ಜಾನುವಾರುಗಳಿಗೆ ಆಹಾರ ಮತ್ತು ಮೇವು ಒದಗಿಸುತ್ತದೆ
* ರಾಷ್ಟ್ರೀಯ ಆದಾಯದ ಮೂಲ ಆಕರ

3. **ಸಾಂದ್ರ ಬೇಸಾಯದ ಲಕ್ಷಣಗಳೇನು ?**

* ಚಿಕ್ಕ ಭೂ ಹಿಡುವಳಿಯಲ್ಲಿ ಅಧಿಕ ಬಂಡವಾಳ ಮತ್ತು ಕಾರ್ಮಿಕರನ್ನು ತೊಡಗಿಸುವುದು

* ವರ್ಷವಿಡೀ ಸಾಗುವಳಿ ಭೂಮಿ ಬಳಕೆ
* ಚಿಕ್ಕ ಭೂಹಿಡುವಳಿಯಲ್ಲಿ ಹೆಚ್ಚು ಉತ್ಪಾದನೆ
* ವರ್ಷದಲ್ಲಿ 2/3 ಬೆಳೆಗಳ ಸಾಗುವಳಿ

**4. ವಾಣಿಜ್ಯ ಬೇಸಾಯವು ಬೇಸಾಯಗಾರನಿಗೆ ಅಧಿಕ ಲಾಭವನ್ನು ತಂದುಕೊಡುತ್ತದೆ. ಸಮರ್ಥಿಸಿ.**

* ವ್ಯಾಪಾರದ ಉದ್ದೇಶಕ್ಕಾಗಿ ಬೆಳೆ ಬೆಳೆಯುವುದು
* ಹಣ ಗಳಿಕೆಗಾಗಿ ಬೆಳೆಗಳನ್ನು ದೊಡ್ಡ ಪ್ರಮಾಣದಲ್ಲಿ ಸಾಗುವಳಿ ಮಾಡುವುದು
* ಕಾರ್ಮಿಕರ ಬಳಕೆ ಕಡಿಮೆ
* ಯಂತ್ರಗಳು ಮತ್ತು ವೈಜ್ಞಾನಿಕ ಸಾಗುವಳಿ ಕ್ರಮಗಳನ್ನು ಅನುಸರಿಸಲಾಗುವುದು

**5. ಜ್ಯಾಡ್ ಬೆಳೆ ಋತು ಎಂದರೇನು ? ಬೆಳೆಯುವ ಬೆಳೆಗಳಾವುವು ?**

* ಮುಂಗಾರು ಮತ್ತು ಹಿಂಗಾರು ಬೆಳೆ ಋತುಗಳ ನಡುವಣ ಅವಧಿಯಲ್ಲಿ ಬೆಳೆಯುವ ಬೆಳೆಗಳ ಋತುವನ್ನೇ ಜ್ಯಾಡ್ ಬೆಳೆ ಋತು ಎನ್ನುವರು
* ಬೆಳೆಯುವ ಬೆಳೆಗಳು : ಕಲ್ಲಂಗಡಿ, ಸೌತೆಕಾಯಿ, ಎಣ್ಣೆಕಾಳು, ತರಕಾರಿಗಳು

**6. ಭಾರತದಲ್ಲಿ ಯಾವುದೇ ಪ್ರದೇಶದ ಬೆಳೆಯಿಡುವ ಮಾದರಿಯು ಕಾಲದಿಂದ ಕಾಲಕ್ಕೆ ಬದಲಾಗುತ್ತದೆ. ಈ ಹೇಳಿಕೆಯನ್ನು ಸಮರ್ಥಿಸಲು ಕಾರಣವಾದ ಅಂಶಗಳಾವುವು ?**

* ಮೇಲ್ಮೈ ಲಕ್ಷಣ * ಮಣ್ಣು * ವಾಯುಗುಣ * ಭೂ ಹಿಡುವಳಿಯ ಗಾತ್ರ
* ನೀರಿನ ಪೂರೈಕೆ * ರೈತರ ಆರ್ಥಿಕ ಪರಿಸ್ಥಿತಿ * ತಂತ್ರಜ್ಞಾನ

**7. ಆಹಾರದ ಬೆಳೆಗಳೆಂದರೇನು ? ಅವು ಯಾವುವು ?**

* ಜನರಿಗೆ ಅಗತ್ಯವಾದ ಆಹಾರ ಪೂರೈಕೆಗಾಗಿ ಬೆಳೆಯುವ ಬೆಳೆಗಳನ್ನು ಆಹಾರದ ಬೆಳೆಗಳೆನ್ನುವರು. ಉದಾ: ಭತ್ತ, ಗೋಧಿ, ಜೋಳ, ದ್ವಿದಳ ಧಾನ್ಯಗಳು

**8. ನೆಡುತೋಪು ಬೇಸಾಯ ಎಂದರೇನು ? ಉದಾಹರಣೆ ಕೊಡಿ**

ಮಾರಾಟಕ್ಕಾಗಿ ವಿಶಾಲವಾದ ತೋಟಗಳಲ್ಲಿ ಯಾವುದಾದರೂ ಒಂದು ಬೆಳೆಯ ಸಾಗುವಳಿಗೆ ನೆಡುತೋಪು ಬೇಸಾಯ ಎನ್ನುವರು. ಉದಾ : ಚಹಾ, ಕಾಫಿ, ರಬ್ಬರ್, ತೆಂಗು

**9. ಮುಂಗಾರು ಮತ್ತು ಹಿಂಗಾರು ಬೆಳೆ ಋತುಗಳ ನಡುವಣ ವ್ಯತ್ಯಾಸ ತಿಳಿಸಿ**

| ಮುಂಗಾರು | ಹಿಂಗಾರು |
|---|---|
| * ಮಳೆಗಾಲದಲ್ಲಿ ಬೆಳೆ ಬೆಳೆಯುವುದು | * ಈಶಾನ್ಯ ಮಾನ್ಸೂನ್ ಆರಂಭದಲ್ಲಿ ಬೆಳೆ ಬೆಳೆಯುವುದು |
| * ಸೆಪ್ಟಂಬರ್, ಅಕ್ಟೋಬರ್‌ನಲ್ಲಿ ಬೆಳೆ ಕಟಾವು | * ಫೆಬ್ರವರಿ ಮಾರ್ಚ್‌ನಲ್ಲಿ ಬೆಳೆ ಕಟಾವು |
| * ಭತ್ತ, ರಾಗಿ, ಜೋಳ, ಹತ್ತಿ | * ಗೋಧಿ, ಬಾರ್ಲಿ, ಕಡಲೆ |

**10. ಕಬ್ಬು ಬೇಸಾಯಕ್ಕೆ ಬೇಕಾಗುವ ಪರಿಸ್ಥಿತಿಗಳಾವುವು ?**

* ವಾರ್ಷಿಕ ಬೆಳೆ ನೀರಾವರಿ ಅಗತ್ಯ * 21 ರಿಂದ 26 ಡಿಗ್ರಿ ಸೆಂಟಿಗ್ರೇಡ್ ಉಷ್ಣಾಂಶ
* 100 – 150 ಸೆಂ. ಮೀ. ವಾರ್ಷಿಕ ಮಳೆ * ಮೆಕ್ಕಲು ಮತ್ತು ಜೇಡಿ ಮಿಶ್ರಿತ ಮರಳು ಮಣ್ಣು

**11. ಹತ್ತಿ ಬೆಳೆಗೆ ಬೇಕಾಗುವ ಭೌಗೋಳಿಕ ಅಂಶಗಳಾವುವು ?**

* ಉಷ್ಣ ಮತ್ತು ಉಪಉಷ್ಣವಲಯದ ಬೆಳೆ * 21 ರಿಂದ 24 ಡಿಗ್ರಿ ಸೆಂಟಿಗ್ರೇಡ್ ಉಷ್ಣಾಂಶ
* 50 – 100 ಸೆಂ. ಮೀ. ವಾರ್ಷಿಕ ಮಳೆ * ಕಪ್ಪು ಮಣ್ಣು

**12. ಪಾನೀಯ ಬೆಳೆಗಳೆಂದರೇನು ? ಉದಾಹರಣೆ ಕೊಡಿ**

* ಆಹ್ಲಾದಕರ ಪಾನೀಯಗಳ ತಯಾರಿಕೆಗೆ ಉಪಯುಕ್ತವಾಗಿರುವ ಬೆಳೆಗಳಿಗೆ ಪಾನೀಯ ಬೆಳೆಗಳೆನ್ನುವರು. ಉದಾಹರಣೆಗೆ : ಕಾಫಿ ಮತ್ತು ಚಹಾ

13. ಭಾರತದಲ್ಲಿ ಪುಷ್ಪಕೃಷಿ ಮಾಡಲು ಬೇಕಾದ ಅನುಕೂಲಕರ ಅಂಶಗಳಿವೆ ಹೇಗೆ ? ಪುಷ್ಟೀಕರಿಸಿರಿ
 * ಪುಷ್ಪ ಕೃಷಿಗೆ ಬೇಕಾದ ಉತ್ತಮ ವಾಯುಗುಣ ಪರಿಸ್ಥಿತಿ
 * ಕೆಲವು ಸಾಂಪ್ರದಾಯಿಕ ಹೂವುಗಳ ಉತ್ಪಾದನೆಗೆ ಪ್ರಸಿದ್ಧಿ
 * ಮಲ್ಲಿಗೆ, ಚೆಂಡು ಮಲ್ಲಿಗೆ. ಸೇವಂತಿಗೆ, ಕನಕಾಂಬರ

## ಅಭಿವೃದ್ಧಿ

1. ಅಭಿವೃದ್ಧಿ ಎಂದರೇನು ? ವಿವರಿಸಿ

ಪ್ರೊ. ಮಯರ್ ಮತ್ತು ಬಾಲ್ಡ್‌ವಿನ್‌ರವರ ಪ್ರಕಾರ ಒಂದು ರಾಷ್ಟ್ರದ ನೈಜ ರಾಷ್ಟ್ರೀಯ ವರಮಾನವು ದೀರ್ಘಾವಧಿಯವರೆಗೆ ಹೆಚ್ಚಳವಾಗುವ ಪ್ರಕ್ರಿಯೆಯೇ ಆರ್ಥಿಕ ಅಭಿವೃದ್ಧಿ.

ಉದಾ: ಗ್ರಾಮೀಣ ಅಭಿವೃದ್ಧಿ, ಸಾಮಾಜಿಕ ಅಭಿವೃದ್ಧಿ, ಶೈಕ್ಷಣಿಕ ಅಭಿವೃದ್ಧಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇತ್ಯಾದಿ ಇವುಗಳ ಸಮಗ್ರ ಅಭಿವೃದ್ಧಿಯಾಗಿದೆ.

2. ಪ್ರೊ. ಮೆಯರ್ ಮತ್ತು ಬಾಲ್ಡ್‌ವಿನ್‌ರವರ ಪ್ರಕಾರ ಆರ್ಥಿಕ ಅಭಿವೃದ್ಧಿಯನ್ನು ಸೂಚಿಸುವ ಮೂರು ಅಂಶಗಳಾವುವು ?
 * ಒಂದು ಪ್ರಕ್ರಿಯೆ * ನೈಜ ರಾಷ್ಟ್ರೀಯ ವರಮಾನದ ಹೆಚ್ಚಳ * ದೀರ್ಘಾವಧಿ ಹೆಚ್ಚಳ

3. ಅನಾಭಿವೃದ್ಧಿಯ ಲಕ್ಷಣಗಳಾವುವು ?
 * ಅಭಿವೃದ್ಧಿ ಹೊಂದದೆ ಇರುವ ನಿಶ್ಚಲ ಸ್ಥಿತಿ
 * ಒಟ್ಟಾರೆ ಉತ್ಪಾದನೆ ಕಡಿಮೆ ಇರುವುದು
 * ಜನಸಂಖ್ಯೆ ಅಪಾರವಾಗಿರುವುದು
 * ತಲಾ ವರಮಾನವು ಬಹಳ ಕಡಿಮೆ ಇರುತ್ತದೆ

4. ಮಾನವನ ಕನಿಷ್ಠ ಅವಶ್ಯಕತೆಗಳು ಯಾವುವು ?
 * ಆಹಾರ ಮತ್ತು ವಸತಿ * ಬಟ್ಟೆ ಮತ್ತು ಶಿಕ್ಷಣ
 * ಆರೋಗ್ಯ ಮತ್ತು ಸಾಮಾಜಿಕ ಭದ್ರತೆ * ಶುದ್ಧ ಕುಡಿಯುವ ನೀರು ಮತ್ತು ಗಾಳಿ

5. ವಿಶ್ವಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮ ವಿಭಾಗದ ಚಿಂತನೆಯಂತೆ 'ಮಾನವ ಅಭಿವೃದ್ಧಿ ಸೂಚ್ಯಂಕದ' ಮಾನದಂಡಗಳಾವುವು ?
 * ಶಿಕ್ಷಣದ ಗುಣಮಟ್ಟ * ವ್ಯಕ್ತಿಗಳ ಸರಾಸರಿ ಜೀವಿತಾವಧಿ * ತಲಾ ವರಮಾನ

6. ಲಿಂಗ ಸಮಾನತೆಯನ್ನು ಹೇಗೆ ಸಾಧಿಸಬಹುದು ?
 * ರಾಜಕೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಸ್ಥಾನಗಳನ್ನು ಮೀಸಲಿಡುವುದು
 * ಸ್ವಸಹಾಯ ಸಮೂಹ ಸಂಸ್ಥೆಗಳನ್ನು ಸ್ಥಾಪಿಸಲು ಉತ್ತೇಜನ
 * ಸಮಾನ ವೇತನ * ಚುನಾಯಿತ ಸಂಸ್ಥೆಗಳಲ್ಲಿ ಮೀಸಲಾತಿ

7. ಮಹಿಳಾ ಸ್ವಸಹಾಯ ಸಂಘಗಳು ಮಹಿಳಾ ಸಬಲೀಕರಣಕ್ಕೆ ಪೂರಕವಾಗಿವೆ. ಸಮರ್ಥಿಸಿ
 * ಸ್ವಸಹಾಯ ಸಮೂಹವು 20 ಸಮಾನ ಮನಸ್ಕ ಮಹಿಳೆಯರ ಒಂದು ಸಂಘ
 * ಮಹಿಳೆಯರು ತಮ್ಮಲ್ಲಿನ ಅಲ್ಪ ಪ್ರಮಾಣದ ಸಂಪನ್ಮೂಲಗಳನ್ನು ಕ್ರೋಢೀಕರಿಸಬಹುದು
 * ಬಾಹ್ಯ ಸಹಾಯ ಪಡೆದು ವ್ಯವಹಾರ ಆರಂಭಿಸಬಹುದು
 * ಲೆಕ್ಕ ನಿರ್ವಹಣೆ ಮತ್ತು ಬ್ಯಾಂಕಿನ ಜೊತೆ ವ್ಯವಹರಿಸಿ ವರಮಾನ ಮತ್ತು ಉದ್ಯೋಗ ಸೃಷ್ಟಿಸಿಕೊಳ್ಳಬಹುದು

## ಗ್ರಾಮೀಣ ಅಭಿವೃದ್ಧಿ

1. ಭಾರತದಲ್ಲಿ ಗ್ರಾಮೀಣ ಆರ್ಥಿಕ ಪರಿಸ್ಥಿತಿ ಹೇಗಿದೆ ?

* ತೀವ್ರ ಬಡತನ
* ಕೃಷಿಯ ಮೇಲೆ ಅಧಿಕ ಅವಲಂಬನೆ
* ಶಿಕ್ಷಣದ ಕೊರತೆ
* ಆರೋಗ್ಯ ಮತ್ತು ನೈರ್ಮಲ್ಯದ ಸಮಸ್ಯೆ
* ಮೂಲಭೂತ ಸೌಲಭ್ಯದ ಕೊರತೆ

**2. ಗ್ರಾಮೀಣ ಅಭಿವೃದ್ಧಿಗಾಗಿ ಇರುವ ಅವಶ್ಯಕ ಕ್ರಮಗಳನ್ನು ಹೆಸರಿಸಿ**

* ಮಾನವ ಸಂಪನ್ಮೂಲ ಅಭಿವೃದ್ಧಿ
* ಭೂ ಸುಧಾರಣೆ
* ಸ್ಥಳೀಯ ಉತ್ಪಾದಕ ಸಂಪನ್ಮೂಲಗಳ ಅಭಿವೃದ್ಧಿ
* ವಿದ್ಯುತ್ ಶಕ್ತಿ, ನೀರಾವರಿ, ಹಣಕಾಸು, ಮಾರುಕಟ್ಟೆ, ಸಾರಿಗೆ ಸೌಕರ್ಯಗಳ ಅಭಿವೃದ್ಧಿ

**3. ಭಾರತದಲ್ಲಿ ಜಾರಿಯಲ್ಲಿರುವ ಪಂಚಾಯತ್ ರಾಜ್ ವ್ಯವಸ್ಥೆಯ ಪ್ರಮುಖ ಲಕ್ಷಣಗಳಾವುವು?**

* ಮೂರು ಹಂತದ ಪಂಚಾಯಿತಿ ವ್ಯವಸ್ಥೆ
* ನೇರ ಮತ್ತು ನಿಯಮಿತ ಚುನಾವಣೆಗಳು
* ಹಿಂದುಳಿದ (ಎಸ್.ಸಿ./ಎಸ್.ಟಿ) ವರ್ಗ ಮತ್ತು ಮಹಿಳೆಯರಿಗೆ ಮೀಸಲಾತಿ
* ಹಣಕಾಸು ಆಡಳಿತಾತ್ಮಕ, ಮುಂಗಡ ಪತ್ರ ಮಂಡಿಸುವ ಮತ್ತು ಲೆಕ್ಕ ಪರಿಶೋಧಿಸುವ ಜವಾಬ್ದಾರಿ

**4. ವಿಕೇಂದ್ರೀಕರಣದ ಲಕ್ಷಣಗಳಾವುವು ?**

* ಗ್ರಾಮಸ್ಥರಿಗೇ ಗ್ರಾಮದ ಆಡಳಿತಾಧಿಕಾರ ನೀಡುವುದು
* ಗ್ರಾಮಸ್ಥರಿಗೇ ಗ್ರಾಮದ ಅಭಿವೃದ್ಧಿ ಜವಾಬ್ದಾರಿ ವಹಿಸುವುದು
* ಅಭಿವೃದ್ಧಿಯ ನಿರ್ಧಾರ ಕೈಗೊಳ್ಳುವಲ್ಲಿ ಜನರ ಪಾಲುದಾರಿಕೆ
* ತಳಮಟ್ಟದಿಂದ ಯೋಜನೆ ರೂಪಿಸುವಿಕೆ

**5. ಗ್ರಾಮೀಣ ಅಭಿವೃದ್ಧಿಯ ಮಹತ್ವವೇನು ?**

* ಕೃಷಿ ಮತ್ತು ಕೃಷಿಯೇತರ ವಲಯಗಳ ಅಭಿವೃದ್ಧಿ
* ಔದ್ಯಮಿಕ ಸರಕು ಸೇವೆಗಳಿಗೆ ಬೇಡಿಕೆ ಹೆಚ್ಚಾಗುತ್ತದೆ
* ಆರ್ಥಿಕ ಉದ್ಯೋಗದ ಸೃಷ್ಟಿ
* ಅಧಿಕ ಶಿಕ್ಷಣ ಮತ್ತು ಕೌಶಲಗಳಿಂದಾಗಿ ಹೆಚ್ಚಿನ ಉತ್ಪಾದನೆ ಸಾಧಿಸಬಹುದು

**6. ಭಾರತ ಸರ್ಕಾರವು 1993 ರಲ್ಲಿ ಸಂವಿಧಾನದ 73 ನೇ ತಿದ್ದುಪಡಿ ಅನ್ವಯ ಜಾರಿಗೆ ಬಂದ ಮೂರು ಹಂತದ ಸ್ಥಳೀಯ ಸಂಸ್ಥೆಗಳನ್ನು ಹೆಸರಿಸಿ**

* ಗ್ರಾಮ ಪಂಚಾಯಿತಿ
* ತಾಲ್ಲೂಕು ಪಂಚಾಯಿತಿ
* ಜಿಲ್ಲಾ ಪಂಚಾಯಿತಿ

**7. ಗ್ರಾಮೀಣ ವಸತಿ ರಹಿತರಿಗೆ ವಸತಿ ಕಲ್ಪಿಸಲು ಸರ್ಕಾರ ಜಾರಿಗೆ ತಂದ ವಸತಿ ಯೋಜನೆಗಳಾವುವು?**

* ಪ್ರಧಾನ ಮಂತ್ರಿ ಆವಾಸ್ ಯೋಜನೆ
* ಅಂಬೇಡ್ಕರ್ – ವಾಲ್ಮೀಕಿ ವಸತಿ ಯೋಜನೆ
* ಆಶ್ರಯ ಯೋಜನೆ

**8. ಗ್ರಾಮೀಣ ಉತ್ಪಾದಕ ಚಟುವಟಿಕೆಗಳಾವುವು ನಿರೂಪಿಸಿ.**

* ಕೃಷಿ ಮತ್ತು ಪಶುಪಾಲನೆ
* ಕೋಳಿ ಸಾಕಾಣಿಕೆ ಮತ್ತು ಮೀನುಗಾರಿಕೆ
* ಸಾಮಾಜಿಕ ಅರಣ್ಯ ಅಭಿವೃದ್ಧಿ
* ಗ್ರಾಮೀಣ ಗುಡಿ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸುವುದು

**9. ಗ್ರಾಮೀಣ ಪ್ರದೇಶದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯ ಸಾಮಾಜಿಕ ಕಲ್ಯಾಣ ಸೇವೆಗಳನ್ನು ಪಟ್ಟಿ ಮಾಡಿ.**

* ಪಡಿತರ ವ್ಯವಸ್ಥೆ ಬಲಪಡಿಸುವುದು
* ವಯೋವೃದ್ಧರಿಗೆ ಸರ್ಕಾರಿ ಸೌಕರ್ಯ ನೀಡುವುದು
* ಅಂಗವಿಕಲರಿಗೆ ಹಾಗೂ ವಿಧವೆಯರಿಗೆ ಸೌಲಭ್ಯ ಒದಗಿಸುವುದು
* ಮಾನಸಿಕ ಅಸ್ವಸ್ಥರು ಮುಂತಾದವರನ್ನು ಗುರುತಿಸಿ ಸರ್ಕಾರಿ ಸೌಲಭ್ಯ ಒದಗಿಸುವುದು

**10. ಗ್ರಾಮೀಣ ಜನರನ್ನು ಬಾಧಿಸುವ ಸಮಸ್ಯೆಗಳಾವುವು ?**

* ಕುಡಿತ ಮತ್ತು ಜೂಜು
* ಬಾಲ್ಯ ವಿವಾಹ
* ವರದಕ್ಷಿಣೆ
* ಮೂಢನಂಬಿಕೆ

# :: 3 ಅಂಕದ ಪ್ರಶ್ನೆಗಳು ::

## ಬ್ರಿಟಿಷ್ ಆಳ್ವಿಕೆಯ ಪರಿಣಾಮಗಳು

1. ಬ್ರಿಟಿಷ್ ಆಡಳಿತದ ಅವಧಿಯಲ್ಲಿ ನ್ಯಾಯಾಂಗ ವ್ಯವಸ್ಥೆಯಲ್ಲಾದ ಬದಲಾವಣೆಗಳು ಯಾವುವು?
   * ಕೇಂದ್ರೀಕೃತ ನ್ಯಾಯಾಂಗ ಪದ್ಧತಿ
   * ಜಿಲ್ಲೆಯು ಎರಡು ಬಗೆಯ ನ್ಯಾಯಾಲಯ ಹೊಂದಿತ್ತು
   * ದಿವಾನಿ ಅದಾಲತ್ ನಾಗರಿಕ ನ್ಯಾಯಾಲಯ
   * ಫೌಜುದಾರಿ ಅದಾಲತ್ ಅಪರಾಧ ನ್ಯಾಯಾಲಯ
   * ನಾಗರಿಕ ನ್ಯಾಯದಾನದ ಸಂದರ್ಭದಲ್ಲಿ ಹಿಂದೂಗಳಿಗೆ ಶಾಸ್ತ್ರಗ್ರಂಥಗಳ ಪ್ರಕಾರ, ಮುಸ್ಲಿಂರಿಗೆ ಷರಿಯತ್ ಕಾನೂನು ಪ್ರಕಾರ ನ್ಯಾಯದಾನ
   * ಅಪರಾಧ ನ್ಯಾಯಾಲಯಗಳು ಕಾಜಿಗಳ ಅಧೀನ ಮತ್ತು ಯೂರೋಪಿಯನ್ನರ ಮೇಲ್ವಿಚಾರಣೆಯಲ್ಲಿ ನಡೆಯುತ್ತಿದ್ದವು.
2. ಬ್ರಿಟಿಷ್ ಶಿಕ್ಷಣದ ಪರಿಣಾಮಗಳಾವುವು ?
   * ರಾಷ್ಟ್ರೀಯವಾದಿ ದೃಷ್ಟಿಕೋನ
   * ಸ್ಥಳೀಯ ಭಾಷೆಗಳ ಅಭಿವೃದ್ಧಿ
   * ಪತ್ರಿಕೆಗಳ ಬೆಳವಣಿಗೆ ಮತ್ತು ಬ್ರಿಟಿಷರ ಆಡಳಿತ ವಿಮರ್ಶೆ
   * ಧಾರ್ಮಿಕ ಮತ್ತು ಸಾಮಾಜಿಕ ಸುಧಾರಣೆ
   * ವಿದೇಶೀ ದಾರ್ಶನಿಕರ ಚಿಂತನೆಗಳ ಪ್ರಭಾವ
   * ಸ್ವಾತಂತ್ರ್ಯ ಚಳುವಳಿಗೆ ಸ್ಫೂರ್ತಿ
3. ಮಹಲ್ವಾರಿ ಪದ್ಧತಿಯು ರೈತವಾರಿ ಪದ್ಧತಿಗಿಂತ ಹೇಗೆ ಭಿನ್ನವಾಗಿದೆ ?

ಮಹಲ್ವಾರಿ ಪದ್ಧತಿ

* ಆರ್. ಎಂ. ಬರ್ಕ್ ಮತ್ತು ಜೇಮ್ಸ್ ಥಾಮ್ಸನ್ ಜಾರಿಗೆ ತಂದರು
* ದೊಡ್ಡ ಮತ್ತು ಸಣ್ಣ ಪ್ರಮಾಣದ ರೈತರು ಭಾಗಿ
* ಜಮೀನ್ದಾರರು ಭೂಮಾಲೀಕತ್ವ ಕಳೆದುಕೊಂಡರು
* ಉತ್ಪಾದನೆಗಿಂತ ಹೆಚ್ಚಿನ ವಾರ್ಷಿಕ ಪಾವತಿ

ರೈತವಾರಿ ಪದ್ಧತಿ

* ಅಲೆಕ್ಸಾಂಡರ್ ರೀಡ್ ಜಾರಿಗೆ ತಂದರು
* ಸರ್ಕಾರ ಮತ್ತು ರೈತರ ನಡುವೆ ನೇರ ಸಂಪರ್ಕ
* ರೈತರು ನಿರ್ಗತಿಕರಾದರು
* ಉತ್ಪನ್ನದ ಶೇ. 50 ಪಾವತಿ

4. 1935 ರ ಕಾಯ್ದೆಯ ಪ್ರಮುಖಾಂಶಗಳು ಯಾವುವು ?
   * ಅಖಿಲ ಭಾರತ ಒಕ್ಕೂಟ ರಚನೆ
   * ಕೇಂದ್ರದಲ್ಲಿ ದ್ವಿ ಸರ್ಕಾರ
   * ರಿಸರ್ವ ಬ್ಯಾಂಕ್ ಸ್ಥಾಪನೆ
   * ಪ್ರಾಂತ್ಯಗಳಲ್ಲಿ ದ್ವಿಸರ್ಕಾರ ರದ್ದು
   * ಪ್ರಾಂತ್ಯಗಳಿಗೆ ಸ್ವಾಯತ್ತತೆ
   * ಫೆಡರಲ್ ಕೋರ್ಟ್ ಸ್ಥಾಪನೆ
5. ರೆಗ್ಯುಲೇಟಿಂಗ್ ಕಾಯ್ದೆಯು ಬ್ರಿಟಿಷ್ ಆಡಳಿತ ವ್ಯವಸ್ಥೆಯನ್ನು ಇಂಗ್ಲೆಂಡಿನ ಸರ್ಕಾರದ ಅಧೀನಕ್ಕೆ ತರುವ ಬಹುದೊಡ್ಡ ನಿರ್ಣಯ – ಸಮರ್ಥಿಸಿ
   * ಬಂಗಾಳದ ಪ್ರೆಸಿಡೆನ್ಸಿಯು ಮದರಾಸು ಮತ್ತು ಮುಂಬೈ ಪ್ರೆಸಿಡೆನ್ಸಿಯ ಮೇಲೆ ಅಧಿಕಾರ ಪಡೆಯಿತು.
   * ಬಂಗಾಳದ ಗವರ್ನರ್ ಮೂರು ಪ್ರೆಸಿಡೆನ್ಸಿಗಳಿಗೆ ಗವರ್ನರ್ ಜನರಲ್ ಆದನು
   * ಗವರ್ನರ್ ಮೂರು ಪ್ರೆಸಿಡೆನ್ಸಿಗಳ ಮೇಲ್ವಿಚಾರಣೆ ಅಧಿಕಾರ ದೊರೆಯಿತು

* ಬಾಂಬೆ ಮತ್ತು ಮದರಾಸು ಸರ್ಕಾರಗಳು ಬಂಗಾಳ ಸರ್ಕಾರ ಮತ್ತು ಇಂಗ್ಲೆಂಡಿನ ನಿರ್ದೇಶಕ ಮಂಡಳಿಯ ನಿಯಂತ್ರಣದಲ್ಲಿತ್ತು.
* ಭಾರತದಲ್ಲಿ ಸುಪ್ರೀಂ ಕೋರ್ಟ್ ಸ್ಥಾಪನೆಯಾಯಿತು

**6. ಬ್ರಿಟಿಷರು ಪೋಲೀಸ್ ವ್ಯವಸ್ಥೆಯಲ್ಲಿ ತಂದ ಬದಲಾವಣೆಗಳು ಭಾರತದ ಆಡಳಿತದ ಸುವ್ಯವಸ್ಥೆಗೆ ಕಾರಣವಾದವು ಹೇಗೆ ?**

* ಲಾರ್ಡ್ ಕಾರ್ನ್‌ವಾಲೀಸ್ ಸೂಪರಿಂಟೆಂಡೆಂಟ್ ಆಫ್ ಪೊಲೀಸ್ ಹುದ್ದೆ ಸೃಷ್ಟಿಸಿದ
* 1739 ರಲ್ಲಿ ಪ್ರತಿ ಜಿಲ್ಲೆಯನ್ನು ಠಾಣೆಯಾಗಿ ವಿಭಜಿಸಿದ
* ಹಳ್ಳಿಗಳು ಚೌಕಿದಾರರ ಅಧೀನಕ್ಕೆ ಬರುವಂತೆ ಮಾಡಿದ
* ಕಳ್ಳತನ, ದರೋಡೆಯ ನಿಯಂತ್ರಣಕ್ಕೆ ಕೊತ್ವಾಲರ ನೇಮಕ
* 1781 ರಲ್ಲಿ ಬ್ರಿಟಿಷ್ ಮ್ಯಾಜಿಸ್ಟ್ರೇಟ್ ನೇಮಕ
* 1861 ರಲ್ಲಿ ಪೊಲೀಸ್ ಕಾಯ್ದೆಯ ಜಾರಿ
* 1902 ರಲ್ಲಿ ಪೊಲೀಸ್ ಕಮಿಷನ್ ಕಾಯ್ದೆ ಜಾರಿ
* ಪೊಲೀಸ್ ನೇಮಕಕ್ಕೆ ವಿದ್ಯಾರ್ಹತೆ ನಿಗದಿ

## ಭಾರತದಲ್ಲಿ ಬ್ರಿಟಿಷ್ ಆಳ್ವಿಕೆಯ ಪ್ರತಿರೋಧಗಳು

**1. ಸಶಸ್ತ್ರ ಬಂಡಾಯಗಳಲ್ಲಿ ಕಿತ್ತೂರು ರಾಣಿ ಚೆನ್ನಮ್ಮಳ ಹೋರಾಟ ಪ್ರಮುಖವಾಗಿದೆ, ವಿಶ್ಲೇಷಿಸಿ**

* ಶಿವಲಿಂಗ ರುದ್ರ ಸರ್ಜನ ನಂತರ ಶಿವಲಿಂಗಪ್ಪ ಎಂಬ ಹುಡುಗನನ್ನು ದತ್ತು ಪಡೆದು ಚೆನ್ನಮ್ಮ ಆಡಳಿತ ನಡೆಸಿದಳು.
* ಧಾರವಾಡದ ಪೊಲಿಟಿಕಲ್ ಏಜೆಂಟ್ ಆಗಿದ್ದ ಥ್ಯಾಕರೆಯು ದತ್ತು ಮಕ್ಕಳಿಗೆ ಹಕ್ಕು ನೀಡುವುದನ್ನು ನಿರಾಕರಿಸಿ ಗವರ್ನರಿಗೆ ವರದಿ ಮಾಡಿದರು
* ಕಿತ್ತೂರಿನ ಖಜಾನೆ ಕೋಟೆಗಳನ್ನು ವಶಪಡಿಸಿಕೊಂಡನು
* ಕಿತ್ತೂರಿನ ಸೈನ್ಯ ಬ್ರಿಟಿಷರ ಮೇಲೆ ದಾಳಿ ಮಾಡಿ ಥ್ಯಾಕರೆಯನ್ನು ಕೊಂದಿತು.
* ಲೆಫ್ಟಿನೆಂಟ್ ಕರ್ನಲ್ ಡಿ ನೇತೃತ್ವದಲ್ಲಿ ಬ್ರಿಟಿಷರು ಕಿತ್ತೂರನ್ನು ಮುತ್ತಿದರು.
* ಚೆನ್ನಮ್ಮ ವೀರಾವೇಶದಿಂದ ಹೋರಾಡಿ, ಕೊನೆಯಲ್ಲಿ ಸೆರೆಹಿಡಿಯಲಾಯಿತು.
* ಚೆನ್ನಮ್ಮ ಬೈಲಹೊಂಗಲ ಸೆರೆಮನೆಯಲ್ಲಿ ವೀರ ಮರಣ ಹೊಂದಿ ನಾಡಿಗೆ ಆದರ್ಶಪ್ರಾಯಳಾದಳು.

**2. ಬ್ರಿಟಿಷ್ ಪೊಲಿಟಿಕಲ್ ಏಜೆಂಟ್ ಮೆಡೋಸ್ ಟೇಲರ್ ಒಬ್ಬ ಸುಧಾರಣಾವಾದಿ ಸಮರ್ಥಿಸಿ.**

* ಸುರಪುರ ಸಂಸ್ಥಾನವನ್ನು ಅಭಿವೃದ್ಧಿಪಡಿಸಿದನು.
* ಪೆದ್ದನಾಯಕನನ್ನು ದೀವಾನನ್ನಾಗಿ ನೇಮಿಸಿದ
* ಭೂ ಸಮೀಕ್ಷೆ ಮಾಡಿಸಿದನು
* ಆದಾಯವನ್ನು ಹೆಚ್ಚಿಸಲು ಕ್ರಮಕೈಗೊಂಡನು
* ವೆಂಕಟಪ್ಪ ನಾಯಕನಿಗೆ ಶಿಕ್ಷಣ ಕೊಡಿಸುವ ವ್ಯವಸ್ಥೆ ಮಾಡಿದನು.
* ಇದರಿಂದ 1853 ರಿಂದ ವೆಂಕಟಪ್ಪ ನಾಯಕ ಸಮರ್ಥ ಅಧಿಕಾರ ನಡೆಸಿದನು.

**3. ಅಮರಸುಳ್ಯ ಬಂಡಾಯವನ್ನು ಕುರಿತು ಬರೆಯಿರಿ**

* 1835 ರಿಂದ 37 ರಲ್ಲಿ ಕರಾವಳಿ ಮ್ತು ಕೊಡಗು ಪ್ರಾಂತ್ಯದಲ್ಲಿ ಕಂಡುಬಂದಿತು
* 1834ರಲ್ಲಿ ಚಿಕ್ಕವೀರರಾಜೇಂದ್ರನನ್ನು ಬ್ರಿಟಿಷರು ಪದಚ್ಯುತಗೊಳಿಸಿದ್ದು ಬ್ರಿಟಿಷರನ್ನು ಅಸಮಾಧಾನಗೊಳಿಸಿತು.
* ಸ್ವಾಮಿ ಅಪರಂಪರ, ಕಲ್ಯಾಣ ಸ್ವಾಮಿ ಮತ್ತು ಪುಟ್ಟ ಬಸಪ್ಪ ಬಂಡಾಯ ಸಂಘಟಿಸಿದರು.

* ಈ ಮೂವರು ಕೊಡಗಿನ ಪದಚ್ಯುತ ರಾಜನ ವಂಶದವರೆಂದು ಹೇಳಿಕೊಂಡರು
* ಅಪರಾಂಪರ ಬಂಡಾಯದ ಮುಖಂಡನಾದನು
* 1835 ರಲ್ಲಿ ಇವನನ್ನು ಸಿಎರೆ ಹಿಡಿಯಲಾಯಿತು
* 1837 ರಲ್ಲಿ ಕಲ್ಯಾಣ ಸ್ವಾಮಿ ಬಂಧಿಸಲ್ಪಟ್ಟನು

**4. ಶ್ರೀರಂಗಪಟ್ಟಣ ಒಪ್ಪಂದವು ಟಿಪ್ಪುವಿಗೆ ಅನಿವಾರ್ಯವಾಗಿತ್ತು ಹೇಗೆ ?**
**ಅಥವಾ 3ನೇ ಆಂಗ್ಲೋ ಮೈಸೂರು ಯುದ್ಧದ ಪರಿಣಾಮಗಳನ್ನು ವಿವರಿಸಿ**

* ಶ್ರೀರಂಗಪಟ್ಟಣ ಒಪ್ಪಂದಕ್ಕೆ ಟಿಪ್ಪು ಸಹಿ ಹಾಕಿದನು
* ಟಿಪ್ಪು ತನ್ನ ಅರ್ಧರಾಜ್ಯವನ್ನು ಬ್ರಿಟಿಷರಿಗೆ ಬಿಟ್ಟುಕೊಟ್ಟನು
* 3 ಕೋಟಿ ರೂಪಾಯಿಗಳನ್ನು ಯುದ್ಧದ ನಷ್ಟಭರ್ತಿಯಾಗಿ ಬ್ರಿಟಿಷರಿಗೆ ನೀಡಿದನು
* ತನ್ನ ಇಬ್ಬರು ಗಂಡು ಮಕ್ಕಳನ್ನು ಒತ್ತೆಯಾಳಾಗಿ ಇರಿಸಿದನು
* ಯುದ್ಧ ಸಂದರ್ಭದಲ್ಲಿ ಸೆರೆಹಿಡಿಯಲಾದ ಸೈನಿಕರನ್ನು ಬಿಡುಗಡೆಗೊಳಿಸಿದನು
* ಬ್ರಿಟಿಷರ ನೇತೃತ್ವದಲ್ಲಿ ಸೈನ್ಯ ಶ್ರೀರಂಗಪಟ್ಟಣದಿಂದ ಹಿಂತೆಗೆಯಿತು.

## ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣಾ ಚಳುವಳಿ

**1. ಬ್ರಹ್ಮಸಮಾಜವು ಮೂಢನಂಬಿಕೆಗಳಿಂದ ಹಿಂದೂ ಸಮಾಜವನ್ನು ಶುದ್ಧೀಕರಿಸುವ ಕಾಳಜಿ ಹೊಂದಿತ್ತು. ಹೇಗೆ ?**

* ಏಕದೇವತಾ ಆರಾಧನೆ ಮತ್ತು ಪ್ರತಿಪಾದನೆ
* ಅರ್ಥಹೀನ ಆಚರಣೆಗಳ ವಿರೋಧ
* ಬಹುಪತ್ನಿತ್ವ ಮತ್ತು ವಿಧವಾ ಪದ್ಧತಿ ವಿರೋಧ
* ಬಾಲ್ಯವಿವಾಹಕ್ಕೆ ವಿರೋಧ
* ಪಶ್ಚಿಮ ನಾಗರಿಕತೆಯಲ್ಲಿನ ಒಳ್ಳೆಯದನ್ನು ಸ್ವೀಕಾರ
* ಇಂಗ್ಲೀಷ್ ಶಿಕ್ಷಣಕ್ಕೆ ಒತ್ತು

**2. ಯುವ ಬಂಗಾಳ ಚಳುವಳಿಯು ಹೊಸತಲೆಮಾರಿನಲ್ಲಿ ವೈಜ್ಞಾನಿಕ ಚಿಂತನೆಯನ್ನು ಹುಟ್ಟುಹಾಕಿತು ಹೇಗೆ?**

* ಪ್ರಕೃತಿ, ಮಾನವೀಯತೆ, ದೇವರ ಕುರಿತ ಚರ್ಚೆ
* ಮೌಢ್ಯಗಳಿಗೆ ಪರಿಹಾರ, ವೈಜ್ಞಾನಿಕ ದೃಷ್ಟಿಕೋನದಲ್ಲಿದೆ ಎಂದು ಹೆನ್ರಿ ವಿವಿಯನ್ ಪ್ರತಿಪಾದಿಸಿದರು.
* ಮಹಿಳಾ ಹಕ್ಕು ಪ್ರತಿಪಾದನೆ
* ಜಾತಿ ವ್ಯವಸ್ಥೆ ಖಂಡನೆ
* ವಿದ್ಯಾರ್ಥಿಗಳು ಬೆಂಬಲ ನೀಡಿದರು
* ಹೊಸ ಶಿಕ್ಷಣ ವ್ಯವಸ್ಥೆ ಜಾರಿ ತರಲು ಶ್ರಮಿಸಿದರು
* ಪ್ರಶ್ನಿಸುವ ಮನೋಭಾವ ವಿದ್ಯಾರ್ಥಿಗಳು ಬೆಳೆಸಿಕೊಳ್ಳಬೇಕು ಎಂದು ಪ್ರತಿಪಾದಿಸಿದರು.

**3. ವಿವೇಕಾನಂದರು ಯುವಶಕ್ತಿಯ ಪ್ರೇರಕರಾದರು, ವಿವರಿಸಿ**

* ಅವರ ಗುರುಗಳಾದ ರಾಮಕೃಷ್ಣರ ಚಿಂತನೆಗಳನ್ನು ಜನರಿಗೆ ತಲುಪಿಸಲು ರಾಮಕೃಷ್ಣ ಮಿಷನ್ ಸೃಷ್ಟಿಸಿದರು.
* ಪಾಶ್ಚಿಮಾತ್ಯ ಚಿಂತನಾಧಾರೆಗಳನ್ನು ಅಭ್ಯಸಿಸಿದರು
* ಭಾರತದ ಧಾರ್ಮಿಕತೆಯ ದೃಷ್ಟಿಕೋನವನ್ನು ಅಭ್ಯಸಿಸಿದರು
* ಜಾತಿ ವ್ಯವಸ್ಥೆ ಬಡತನ ಅಜ್ಞಾನಗಳನ್ನು ಮುಕ್ತಿಗೊಳಿಸಲು ಪ್ರಯತ್ನಿಸಿದರು
* ಜ್ಞಾನಯೋಗ, ಭಕ್ತಿಯೋಗ, ರಾಜಯೋಗ, ಕರ್ಮಯೋಗಗಳ ಕುರಿತು ಕೃತಿ ರಚಿಸಿದರು
* ಅವರ ಭಾಷಣಗಳು ಆ ಜನರನ್ನು ಸಂವಹಿಸಿದವು

* ಇವರ ಮಾತುಗಳು ಸ್ವಾತಂತ್ರ್ಯ ಹೊರಾಟಕ್ಕೆ ಪ್ರೇರಣೆಯಾಯಿತು.

4. **ದಯಾನಂದ ಸರಸ್ವತಿಯವರು ಭಾರತದ ಸಾಮಾಜಿಕ ಧಾರ್ಮಿಕ ಸುಧಾರಣೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಹೇಗೆ ?**

* ಆಧುನಿಕ ಭಾರತದ ಸಮಸ್ಯೆಗಳಿಗೆ ವೇದಗಳಲ್ಲಿ ಪರಿಹಾರವಿದೆ ಎಂದು ಸಾರಿದರು
* ಏಕದೇವತಾರಾಧನೆ
* ಜಾತಿ ವ್ಯವಸ್ಥೆಯ ವಿರೋಧ
* ಅಂತರಜಾತಿಯ ವಿವಾಹ ಪ್ರೋತ್ಸಾಹ
* ಬಹುಪತ್ನಿತ್ವ ಮತ್ತು ಬಾಲ್ಯವಿವಾಹ ವಿರೋಧಿಸಿದರು
* ಸ್ತ್ರೀ ಮತ್ತು ಪುರುಷರಿಗೆ ಸಮಾನತೆ
* ಪ್ರಾಚೀನ ಪವಿತ್ರ ಗ್ರಂಥಗಳ ಅಧ್ಯಯನ
* ಶುದ್ಧಿ ಚಳುವಳಿ ಪ್ರಾರಂಭ
* ಗೋ ರಕ್ಷಣಾ ಸಂಘ
* ದಯಾನಂದ ಆಂಗ್ಲೋ ವೇದಿಕ್ ಕಾಲೇಜು ಸ್ಥಾಪನೆ
* ಗುರುಕುಲ ವಿದ್ಯಾಲಯ ಸ್ಥಾಪನೆ

## ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ – 1857

1. **ಬ್ರಿಟಿಷರ ರಾಜಕೀಯ ನೀತಿಗಳು ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕಾರಣವಾದವು ಹೇಗೆ ? ವಿವರಿಸಿ**

* ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿಯಿಂದಾಗಿ ದೇಶೀಯ ರಾಜರು ರಾಜ್ಯ ಕಳೆದುಕೊಂಡರು
* ಉದಾಹರಣೆಗೆ ಸತಾರ, ಝಾನ್ಸಿ, ಜೈಪುರ, ಉದಯಪುರ
* ತಂಜಾವೂರು, ಕರ್ನಾಟಿಕ್ ನವಾಬರಿದ್ದ ರಾಜಪದವಿಗಳು ರದ್ದುಪಡಿಸಲಾಯಿತು
* ಮೊಘಲ್ ಚಕ್ರವರ್ತಿ, ಔದ್‌ನ ನವಾಬರನ್ನು ಬ್ರಿಟಿಷರು ಪದಚ್ಯುತಗೊಳಿಸಿದರು
* ಇದರಿಂದ ಲಕ್ಷಾಂತರ ಸೈನಿಕರು ನಿರುದ್ಯೋಗಿಗಳಾದರು

2. **ಬ್ರಿಟಿಷರ ಆರ್ಥಿಕ ನೀತಿಗಳು ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕಾರಣವಾದವು ಹೇಗೆ ?**

* ಕೈಗಾರಿಕಾ ಕ್ರಾಂತಿಯಿಂದ ದೇಶೀಯ ಕೈಗಾರಿಕೆಗಳ ಅವನತಿ
* ಕರಕುಶಲಗಾರರು ನಿರುದ್ಯೋಗಿಗಳಾದರು * ಗೃಹ ಕೈಗಾರಿಕೆಗಳಿಗೆ ಆರ್ಥಿಕ ನಷ್ಟ
* ಭಾರತೀಯ ವಸ್ತುಗಳಿಗೆ ದುಬಾರಿ ಸುಂಕ ಹೇರಿಕೆ
* ಜಮೀನ್ದಾರಿ ಪದ್ಧತಿಯಲ್ಲಿ ಮಧ್ಯವರ್ತಿಗಳು ರೈತರನ್ನು ಶೋಷಿಸಿದರು
* ತಾಲ್ಲೂಕುದಾರರಿಗೆ ನೀಡಿದ ಕಂದಾಯ ವಸೂಲಿ ಹಕ್ಕನ್ನು ಹಿಂಪಡೆಯಲಾಯಿತು
* ಇನಾಂ ಭೂಮಿಯನ್ನು ವಾಪಸ್ ಪಡೆಯಲಾಯಿತು.

3. **1857 ರ ದಂಗೆಯು ಹರಡಲು ಕಾರಣವಾದ ಘಟನೆಗಳನ್ನು ವಿವರಿಸಿ**

* ಮೀರತ್‌ನ ಸೈನಿಕರು ರಾಯಲ್ ಎನ್‌ಫೀಲ್ಡ್ ಬಂದೂಕುಗಳನ್ನು ನಿರಾಕರಿಸಿದರು
* ಸೈನಿಕರು ಸೆರೆಮನೆಗೆ ನುಗ್ಗಿ ಭಾರತೀಯ ಸಿಪಾಯಿಗಳನ್ನು ಬಿಡುಗಡೆಗೊಳಿಸಿದರು
* ಮೊಘಲರ ಅರಸ 2ನೇ ಬಹದ್ದೂರ ಷಹಾನನ್ನು ಭಾರತದ ಚಕ್ರವರ್ತಿ ಎಂದು ಘೋಷಿಸಿದನು.
* ಕಾನ್ಪುರದಲ್ಲಿ ನಾನಾ ಸಾಹೇಬ, ತಾತ್ಯಾಟೋಪಿ ಬ್ರಿಟಿಷರನ್ನು ವಿರೋಧಿಸಿದರು
* ಝಾನ್ಸಿರಾಣಿ ಲಕ್ಷ್ಮೀಬಾಯಿ ಬ್ರಿಟಿಷರ ವಿರುದ್ಧ ವೀರಾವೇಶದಿಂದ ಹೋರಾಡಿದಳು
* ಲಖನೌದಲ್ಲಿ ಬ್ರಿಟಿಷರ ವಿರುದ್ಧ ಹೋರಾಟಗಳು ನಡೆದವು.

## ಭಾರತದ ಸಮಸ್ಯೆಗಳು ಮತ್ತು ಪರಿಹಾರೋಪಾಯಗಳು

1. ಕೋಮುವಾದವು ಭಾರತದ ಏಕತೆಗೆ ಮಾರಕವಾಗಿದೆ ಹೇಗೆ ?

* ಕೋಮುವಾದವು ಆಂತರಿಕ ದಂಗೆಯನ್ನು ಹುಟ್ಟುಹಾಕುತ್ತದೆ
* ಧರ್ಮಗಳ ಕಲಹಕ್ಕೆ ಪ್ರೇರಕವಾಗಿದೆ
* ದೇಶದ ಐಕ್ಯತೆಗೆ ಧಕ್ಕೆಯಾಗಿದೆ
* ಜನರಲ್ಲಿ ಧಾರ್ಮಿಕ ಆಚರಣೆಗಳಡಿಯಲ್ಲಿ ತಪ್ಪು ಕಲ್ಪನೆ
* ಅರಾಜಕೀಯತೆ
* ಸಾಮಾಜಿಕ ಭಿನ್ನತೆ

2. ನಿರುದ್ಯೋಗ ಎಂದರೇನು ? ನಿರುದ್ಯೋಗಕ್ಕೆ ಕಾರಣವೇನು ?

ಕೆಲಸ ಮಾಡಲು ಸಾಮರ್ಥ್ಯವಿರುವ ವ್ಯಕ್ತಿಗೆ ಉದ್ಯೋಗಲಭ್ಯವಿಲ್ಲದ ಸ್ಥಿತಿಯನ್ನು ನಿರುದ್ಯೋಗ ಎನ್ನುವರು

ಕಾರಣಗಳು :
* ಅಧಿಕ ಜನಸಂಖ್ಯೆ
* ಅತಿಯಾದ ತಂತ್ರಜ್ಞಾನ
* ಸಂಪನ್ಮೂಲಗಳ ಕೊರತೆ
* ಕೃಷಿಯ ಮೇಲಿನ ಅವಲಂಬನೆ
* ಗೃಹ ಕೈಗಾರಿಕೆ ನಾಶ
* ಕೌಶಲ್ಯಾಧಾರಿತ ಶಿಕ್ಷಣದ ಕೊರತೆ

3. ನಿರುದ್ಯೋಗವನ್ನು ನಿವಾರಿಸಲು ನೀವು ನೀಡುವ ಸಲಹೆಗಳಾವುವು ?

* ಕೌಶಲ್ಯಾಧಾರಿತ ಶಿಕ್ಷಣ
* ಸ್ವಯಂ ಉದ್ಯೋಗಕ್ಕೆ ಬಂಡವಾಳ ಪೂರೈಕೆ
* ಕರಕುಶಲ ಕಸುಬುಗಳಿಗೆ ತರಬೇತಿ
* ಗೃಹಕೈಗಾರಿಕೆ ಉತ್ಪನ್ನಗಳಿಗೆ ಮಾರುಕಟ್ಟೆ ಸೃಷ್ಟಿ
* ವೃತ್ತಿಯಲ್ಲಿ ತೊಡಗಿಸಿಕೊಳ್ಳುವಮತೆ ಪ್ರೇರಣೆ
* ವೃತ್ತಿಪರ ಚಟುವಟಿಕೆಗಳು

4. ಭ್ರಷ್ಟಾಚಾರದ ನಕಾರಾತ್ಮಕ ಪರಿಣಾಮಗಳಾವುವು ?

* ಸಮಾಜವಿರೋಧಿ ಮತ್ತು ಆರ್ಥಿಕ ವಿರೋಧಿ ಚಟುವಟಿಕೆಗಳಿಗೆ ಅವಕಾಶ
* ಸ್ವಜನ ಪಕ್ಷಪಾತ
* ಜಾತೀಯತೆ
* ಔದ್ಯೋಗಿಕ ವಂಚನೆ
* ನಿಧಾನ ದ್ರೋಹ
* ಕಾನೂನು ಉಲ್ಲಂಘನೆ
* ಸಾರ್ವಜನಿಕ ಕ್ಷೇತ್ರದಲ್ಲಿ ಲೋಪದೋಷಗಳಲ್ಲಿ ಅವಕಾಶ
* ಅಕ್ರಮ ದಾಸ್ತಾನು, ಕಳ್ಳಸಾಗಾಣಿಕೆ ಮತ್ತು ಆರ್ಥಿಕ ವಂಚನೆ

5. ಪ್ರಾದೇಶಿಕ ಅಸಮಾನತೆ ತೊಡೆದುಹಾಕಲು ಸರ್ಕಾರ ಕೈಗೊಂಡ ಕ್ರಮಗಳಾವುವು ?

* 2001 ರಲ್ಲಿ ಡಿ. ಎಂ. ನಂಜುಂಡಪ್ಪ ಸಮಿತಿ ನೇಮಕ
* ಸಂವಿಧಾನದ ವಿಧಿ 371 ಜೆ ಸೇರ್ಪಡೆ
* ಹಿಂದುಳಿದ ಪ್ರದೇಶಗಳಿಗೆ ವಿಶೇಷ ಸ್ಥಾನಮಾನ
* ಮಲೆನಾಡು ಅಭಿವೃದ್ಧಿ ಪ್ರಾಧಿಕಾರ ರಚನೆ
* ಮುಖ್ಯವಾಹಿನಿಯಿಂದ ದೂರವಿರುವ ಪ್ರದೇಶಗಳಿಗೆ ಮೂಲಭೂತ ಸೌಕರ್ಯದ ಪೂರೈಕೆ

## ಭಾರತದ ವಿದೇಶಾಂಗ ನೀತಿ

1. ಭಾರತದ ವಿದೇಶಾಂಗ ನೀತಿಯ ಉದ್ದೇಶಗಳಾವುವು ?

* ರಾಷ್ಟ್ರದ ಭದ್ರತೆ
* ಆರ್ಥಿಕ ಸಂವರ್ಧನೆ
* ಸಾಂಸ್ಕೃತಿಕ ಮೌಲ್ಯಗಳನ್ನು ಬಿತ್ತರಿಸುವುದು
* ಮಿತ್ರರಾಷ್ಟ್ರಗಳನ್ನು ಹೆಚ್ಚಿಸಿಕೊಳ್ಳುವುದು
* ವಿಶ್ವಶಾಂತಿ, ಸೌಹಾರ್ದತೆ
* ಸಹಬಾಳ್ವೆ

2. ಭಾರತೀಯ ವಿದೇಶಾಂಗ ನೀತಿಯನ್ನು ನೆಹರುರವರ ವಿದೇಶಾಂಗ ನೀತಿಯೆಂದು ಕರೆಯಲು ಕಾರಣವೇನು ?

* ಭಾರತದ ವಿದೇಶಾಂಗ ನೀತಿಯ ರೂಪರೇಷೆಗಳನ್ನು 1946 ಸೆಪ್ಟೆಂಬರ್ 7 ರ ರೇಡಿಯೋ ಭಾಷಣದಲ್ಲಿ ಅರಿವು ಮೂಡಿಸಿದರು.

* ಅಮೆರಿಕಾ, ರಷ್ಯಾ, ಚೀನಾ, ದೇಶಗಳ ನಡುವೆ ಸಂಬಂಧ ಹೊಂದುವ ಸೂಚನೆ ನೀಡಿದರು.
* ಪ್ರಧಾನಿ ಹುದ್ದೆಯ ಜೊತೆಗೆ ವಿದೇಶಾಂಗ ಸಚಿವರಾಗಿ ಕಾರ್ಯ ನಿರ್ವಹಿಸಿದರು.
* ಭಾರತದ ವಿದೇಶಾಂಗ ನೀತಿಗೆ ಅಲಿಪ್ತ ನೀತಿ, ಪಂಚಶೀಲ ತತ್ವಗಳ ಸೇರ್ಪಡೆ
* ರಾಷ್ಟ್ರೀಯ ಹಿತಾಸಕ್ತಿ, ರಾಜಕೀಯ ಪರಿಸ್ಥಿತಿಗಳಂತಹ ಅಂಶಗಳಿಂದ ವಿದೇಶಾಂಗ ನೀತಿಯು ಪ್ರಮುಖವಾಯಿತು.

3. ಭಾರತದ ವಿದೇಶಾಂಗ ನೀತಿಯ ಮೂಲಭೂತ ಅಂಶಗಳಾವುವು ?

* ಪಂಚಶೀಲ ತತ್ವ
* ಅಲಿಪ್ತ ನೀತಿ
* ವಸಾಹತುಶಾಹಿತ್ವಕ್ಕೆ ವಿರೋಧ
* ವರ್ಣಭೇದ ನೀತಿ ವಿರೋಧ
* ನಿಶ್ಯಸ್ತ್ರೀಕರಣ

4. ಪ್ರಚಲಿತ ಜಗತ್ತಿಗೆ ನಿಶ್ಯಸ್ತ್ರೀಕರಣ ಅತೀ ಅಗತ್ಯ ಏಕೆ ?

* ಶಸ್ತ್ರಾಸ್ತ್ರಗಳ ಉತ್ಪಾದನೆ ತಗ್ಗಿಸುವುದು
* ಮಾರಾಟ ಮತ್ತು ತಡೆಯುವುದು
* ಮೂರನೇ ಮಹಾಯುದ್ಧ ತಡೆಯುವುದು
* ಪ್ರತಿಯೊಂದು ರಾಷ್ಟ್ರಕ್ಕೂ ಭದ್ರತೆ ಒದಗಿಸುವುದು
* ವಿಶ್ವಶಾಂತಿ, ಸಹಬಾಳ್ವೆಗೆ ಪ್ರಾಮುಖ್ಯತೆ ನೀಡುವುದು

## ಸಾಮಾಜಿಕ ಸ್ತರ ವಿನ್ಯಾಸ

1. ಸಾಮಾಜಿಕ ಸ್ತರ ವಿನ್ಯಾಸದ ಲಕ್ಷಣಗಳಾವುವು ?

* ಸಾಮಾಜಿಕ ಸ್ತರ ವಿನ್ಯಾಸವು ಸಾಮಾಜಿಕವಾದದ್ದು
* ಸಾಮಾಜಿಕ ಸ್ತರ ವಿನ್ಯಾಸವು ಸರ್ವವ್ಯಾಪಕವಾದುದು
* ಸ್ತರ ವ್ಯವಸ್ಥೆ ಪುರಾತನವಾದದ್ದು
* ಸ್ತರ ವಿನ್ಯಾಸವು ವಿವಿಧ ರೂಪಗಳಲ್ಲಿದೆ

2. ಅಸ್ಪೃಶ್ಯತೆಯ ಸಮಸ್ಯೆಗಳಾವುವು ?

* ಸಾಮಾಜಿಕ ವ್ಯವಸ್ಥೆಯಲ್ಲಿ ಅಸ್ಪೃಶ್ಯರಿಗೆ ಅತ್ಯಂತ ಕೆಳಸ್ಥಾನ ನೀಡಲಾಗಿತ್ತು
* ಅಸ್ಪೃಶ್ಯರನ್ನು ಶೈಕ್ಷಣಿಕ ಅವಕಾಶಗಳಿಂದ ಹೊರಗಿಡಲಾಗಿತ್ತು
* ಅಸ್ಪೃಶ್ಯರಿಗೆ ಆಸ್ತಿಯ ಒಡೆತನದ ಹಕ್ಕನ್ನು ನಿರಾಕರಿಸಲಾಗಿತ್ತು
* ಅಸ್ಪೃಶ್ಯರಿಗೆ ರಾಜಕೀಯ ಕ್ಷೇತ್ರದಲ್ಲಿ ಮತ್ತು ಆಡಳಿತದಲ್ಲಿ ಭಾಗವಹಿಸುವಿಕೆಯನ್ನು ನಿರಾಕರಿಸಲಾಗಿತ್ತು.

3. ಅಸ್ಪೃಶ್ಯತೆ ನಿವಾರಣೆಗೆ ಸರ್ಕಾರ ಕೈಗೊಂಡಿರುವ ಕಾನೂನಾತ್ಮಕ ಕ್ರಮಗಳಾವುವು ?

* ಸಂವಿಧಾನದ 17ನೇ ವಿಧಿ ಅಸ್ಪೃಶ್ಯತೆ ಆಚರಣೆ ನಿಷೇಧಿಸಿದೆ
* ಭಾರತ ಸರ್ಕಾರ 1955 ರಲ್ಲಿ ಅಸ್ಪೃಶ್ಯತಾ ಅಪರಾಧಗಳ ಕಾಯ್ದೆ ಜಾರಿಗೊಳಿಸಿದೆ
* 1976 ರಲ್ಲಿ ನಾಗರಿಕ ಹಕ್ಕುಗಳ ಸಂರಕ್ಷಣಾ ಕಾಯ್ದೆಯನ್ನು ಜಾರಿಗೆ ತರಲಾಗಿದೆ
* ದೇಶದ ಎಲ್ಲಾ ನಾಗರಿಕರೂ ಮತದಾನದ ಹಾಗೂ ಸಮಾನತೆ ಹಕ್ಕು ನೀಡಲಾಗಿದೆ
* ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ಜಾತಿಯವರಿಗೆ ಶೈಕ್ಷಣಿಕ ಮತ್ತು ಉದ್ಯೋಗಾವಕಾಶಗಳಲ್ಲಿ ಮೀಸಲಾತಿ ನೀಡಲಾಗಿದೆ.

## ದುಡಿಮೆ

1. ಸಂಘಟಿತ ಮತ್ತು ಅಸಂಘಟಿತ ಕೆಲಸಗಾರರ ನಡುವಿನ ವ್ಯತ್ಯಾಸ ತಿಳಿಸಿ

| ಸಂಘಟಿತ | ಅಸಂಘಟಿತ |
|---|---|
| * ಸರ್ಕಾರದ ಕಾನೂನಿನ ಚೌಕಟ್ಟಿಗೆ ಒಳಗಾಗಿದ್ದಾರೆ | * ಆಗಿರುವುದಿಲ್ಲ |
| * ನಿರ್ದಿಷ್ಟ ಸಮಯ | * ನಿರ್ದಿಷ್ಟ ಸಮಯ ಇಲ್ಲ |

| | |
|---|---|
| * ನಿರ್ದಿಷ್ಟ ವೇತನ | * ನಿರ್ದಿಷ್ಟ ವೇತನ ಇಲ್ಲ |
| * ಲಿಂಗ ತಾರತಮ್ಯ ಇಲ್ಲ | * ಲಿಂಗ ತಾರತಮ್ಯ ಇದೆ |
| * ವಿಶೇಷ ಭತ್ಯೆ ಇದೆ | * ವಿಶೇಷ ಭತ್ಯೆ ಇಲ್ಲ |
| ಉದಾ: ಬ್ಯಾಂಕು, ಶಿಕ್ಷಕ, ಸೈನ್ಯ, ನೌಕರರು | ಉದಾ : ಕೃಷಿ ಕಾರ್ಮಿಕರು, ರಸ್ತೆ ಬದಿ ವ್ಯಾಪಾರಿಗಳು |

2. **ಅಸಂಘಟಿತ ದುಡಿಮೆಗಾರರು ಎದುರಿಸುತ್ತಿರುವ ಸವಾಲುಗಳೇನು ?**

* ವಲಸೆ * ಸಾಮಾಜಿಕ ಭದ್ರತೆ * ಕಾನೂನಿನ ಚೌಕಟ್ಟು
* ಬಾಲ ಕಾರ್ಮಿಕರು * ದೈಹಿಕ ಮತ್ತು ಮಾನಸಿಕ ದೌರ್ಜನ್ಯ

## ಭಾರತದ ಸಾರಿಗೆ ಸಂಪರ್ಕ

1. **ರಸ್ತೆ ಸಾರಿಗೆ ಪ್ರಾಮುಖ್ಯತೆ ತಿಳಿಸಿ**

* ದೇಶದ ಕೃಷಿ ಮತ್ತು ಗ್ರಾಮೀಣ ಕೈಗಾರಿಕೆಗಳ ಪ್ರಗತಿಗೆ
* ಮನೆ ಮನೆಗೆ ಸೇವೆ ಸಲ್ಲಿಸಲು
* ರೈಲು, ಬಂದರು ಮತ್ತು ವಿಮಾನ ನಿಲ್ದಾಣಗಳಿಗೆ ಸಂಪರ್ಕ
* ಪ್ರವಾಸೋದ್ಯಮ, ವ್ಯಾಪಾರ, ವಾಣೀಜ್ಯ ಹಾಗೂ ಕೈಗಾರಿಕಾ ಅಭಿವೃದ್ಧಿಗೆ
* ಉದ್ಯೋಗ ಅವಕಾಶ ಸೃಷ್ಟಿ
* ಹಳ್ಳಿ, ಪಟ್ಟಣ ಮತ್ತು ನಗರಗಳ ಸಂಪರ್ಕ

2. **ಭಾರತದ ಪಶ್ಚಿಮ ತೀರದ ಬಂದರುಗಳನ್ನು ಹೆಸರಿಸಿ**

* ಕಾಂಡ್ಲಾ * ಮರ್ಮಗೋವ * ಮುಂಬಯಿ * ನವ ಮಂಗಳೂರು
* ಜವಾಹರಲಾಲ್ ನೆಹರು * ಕೊಚ್ಚಿ

3. **ಭಾರತದ ಪೂರ್ವ ತೀರದ ಬಂದರುಗಳನ್ನು ಹೆಸರಿಸಿ**

* ತೂತಕುಡಿ * ವಿಶಾಖಪಟ್ಟಣ * ಚೆನ್ನೈ * ಪಾರಾದೀಪ
* ಎನ್ನೋರ್ * ಹಾಲ್ದಿಯಾ * ಕಲ್ಕತ್ತಾ

4. **ಸುವರ್ಣ ಚತುಷ್ಕೋನ ಮತ್ತು ಸೂಪರ್ ಹೆದ್ದಾರಿಗಳ ಕುರಿತು ಬರೆಯಿರಿ**

* 4 ರಿಂದ 6 ಪಥಗಳ ಉತ್ತಮ ರಸ್ತೆಗಳ ಯೋಜನೆ
* ದೇಶದ ಪ್ರಮುಖ ನಗರ, ಸಾಂಸ್ಕೃತಿಕ ಮತ್ತು ಕೈಗಾರಿಕಾ ಕೇಂದ್ರಗಳನ್ನು ಸಂಪರ್ಕಿಸುತ್ತದೆ
* ಸೂಪರ್ ಹೆದ್ದಾರಿಗಳಲ್ಲಿ ಎರಡು ಪ್ರಕಾರ
* ಉತ್ತರ – ದಕ್ಷಿಣ ಕಾರಿಡಾರ್ (ಶ್ರೀನಗರದಿಂದ – ಕನ್ಯಾಕುಮಾರಿ)
* ಪೂರ್ವ – ಪಶ್ಚಿಮ ಕಾರಿಡಾರ್ (ಅಸ್ಸಾಂನ ಶಿಲ್ಚರ್‌ನಿಂದ ಗುಜರಾತ್‌ನ ಪೋರ್‌ಬಂದರ್)
* ಈ ಕಾರಿಡಾರ್ ರಸ್ತೆಗಳು ದೇಶದ ಪ್ರಮುಖ ನಗರ, ಕೈಗಾರಿಕಾ ಕೇಂದ್ರಗಳನ್ನು ಮತ್ತು ಬಂದರುಗಳನ್ನು ಸಂಪರ್ಕಿಸುತ್ತದೆ.

5. **ಭಾರತದ ರೈಲು ಸಾರಿಗೆ ಕುರಿತು ಬರೆಯಿರಿ**

* ಭಾರತದ ಸರಕು ಮತ್ತು ಅಧಿಕ ಸಂಖ್ಯೆಯ ಪ್ರಯಾಣಿಕರನ್ನು ದೂರದ ಸ್ಥಳಗಳಿಗೆ ಸಾಗಿಸಲು ಹೆಚ್ಚು ಉಪಯುಕ್ತ
* ದೇಶದ ವ್ಯಾಪಾರ ಮತ್ತು ಪ್ರವಾಸೋದ್ಯಮದ ಬೆಳವಣಿಗೆಗೆ ಉಪಯುಕ್ತ
* ಕೃಷಿ, ಕೈಗಾರಿಕೆ ಮತ್ತು ಆರ್ಥಿಕತೆಯ ಅಭಿವೃದ್ಧಿಗೆ ಉಪಯುಕ್ತ
* ಭಾರತದ ಪ್ರಥಮ ರೈಲು ಮಾರ್ಚ್ 1813ರಲ್ಲಿ ಮುಂಬೈ ಮತ್ತು ಥಾಣಾಗಳ ನಡುವೆ ನಿರ್ಮಾಣಗೊಂಡಿತು

* ರೈಲು ಸಾರಿಗೆಯು ಭಾರತದ ಅತಿ ದೊಡ್ಡ ಸಾರ್ವಜನಿಕ ಉದ್ದಿಮೆ

## ಕೈಗಾರಿಕೆ

**1. ಕೈಗಾರಿಕೆ ಸ್ಥಾನೀಕರಣ ಮೇಲೆ ಪ್ರಭಾವ ಬೀರುವ ಅಂಶಗಳಾವುವು ?**

* ಕಚ್ಚಾವಸ್ತುಗಳ ಸರಬರಾಜು
* ಶಕ್ತಿ ಸಂಪನ್ಮೂಲಗಳ ಪೂರೈಕೆ
* ಸಾರಿಗೆ ಮತ್ತು ಸಂಪರ್ಕದ ವ್ಯವಸ್ಥೆ
* ಮಾರುಕಟ್ಟೆ ಸೌಲಭ್ಯ
* ಬಂಡವಾಳ
* ಕಾರ್ಮಿಕರು ಮತ್ತು ನೀರು ದೊರೆಯುವಿಕೆ
* ಸೂಕ್ತ ವಾಯುಗುಣ
* ಸರ್ಕಾರದ ನೀತಿಗಳು

**2. ಭಾರತದ ಪ್ರಮುಖ ಕೈಗಾರಿಕಾ ಪ್ರದೇಶಗಳನ್ನು ಪಟ್ಟಿ ಮಾಡಿ**

* ಹೂಗ್ಲಿ–ಕಲ್ಕತ್ತಾ
* ಮುಂಬೈ – ಪುಣೆ
* ಅಹಮದಾಬಾದ್ – ವಡೋದರ
* ಮಧುರೈ – ಕೋಯಮತ್ತೂರು–ಬೆಂಗಳೂರು
* ಛೋಟನಾಗಪುರಿ ಪ್ರಸ್ಥಭೂಮಿ
* ದೆಹಲಿ–ಮೀರತ್
* ವಿಶಾಖಪಟ್ಟಣ – ಗುಂಟೂರು
* ಕೊಲ್ಲಂ – ತಿರುವನಂತಪುರ

## ಭಾರತದ ನೈಸರ್ಗಿಕ ವಿಪತ್ತುಗಳು

**1. ಆವರ್ತ ಮಾರುತಕ್ಕೆ ಕಾರಣಗಳು ಮತ್ತು ಪರಿಣಾಮಗಳು**

* ಅಧಿಕ ಉಷ್ಣಾಂಶ
* ಪ್ರಶಾಂತ ವಾಯು
* ಹೆಚ್ಚು ತೇವಾಂಶಭರಿತ ವಾಯು ಪರಿಣಾಮಗಳು
* ಅಪಾರ ಸಾವು ಮತ್ತು ಆಸ್ತಿ ಪಾಸ್ತಿಗಳಿಗೆ ಹಾನಿ
* ಕಟ್ಟಡಗಳಿಗೆ ಧಕ್ಕೆ
* ಸಾರಿಗೆ ಸಂಪರ್ಕ ಮಾಧ್ಯಮಗಳ ಅಸ್ತವ್ಯಸ್ತ

**2. ಪ್ರವಾಹಕ್ಕೆ ಕಾರಣ ಮತ್ತು ನಿಯಂತ್ರಣ ಕ್ರಮಗಳು**

* ಅತ್ಯಧಿಕ ಮಳೆ, ಮೇಘಸ್ಫೋಟ, ನದಿಗಳಲ್ಲಿ ಹೂಳು ತುಂಬುವುದು
* ಅವೈಜ್ಞಾನಿಕ ನೀರಾವರಿ ವ್ಯವಸ್ಥೆ, ಒಡ್ಡು, ಅಣೆಕಟ್ಟುಗಳು ಒಡೆದು ಹೋಗುವುದು

ನಿಯಂತ್ರಣ ಕ್ರಮಗಳು

* ಅರಣ್ಯ ಬೆಳೆಸುವುದು
* ಒಡ್ಡುಗಳ ನಿರ್ಮಾಣ
* ಅಣೆಕಟ್ಟುಗಳ ನಿರ್ಮಾಣ
* ಪ್ರವಾಹಗಳ ಬಗ್ಗೆ ಮುನ್ನೆಚ್ಚರಿಕೆ ನೀಡುವುದು

**3. ಸಮುದ್ರ ತೀರದ ಸವೆತಕ್ಕೆ ಕಾರಣ, ಪರಿಣಾಮ ಮತ್ತು ನಿಯಂತ್ರಣ ಕ್ರಮಗಳು**

* ನೈರುತ್ಯ ಮಾನ್ಸೂನ್ ಮಾರುತಗಳು
* ಉಷ್ಣ ವಲಯದ ಆವರ್ತ ಮಾರುತಗಳು
* ಸುನಾಮಿ

ಪರಿಣಾಮಗಳು

* ಕರಾವಳಿ ಪ್ರದೇಶದ ಕಟ್ಟಡ ಮತ್ತು ಮರಗಳು ಕೊಚ್ಚಿ ಹೋಗುವುದು
* ರಸ್ತೆ ಮತ್ತು ರೈಲು ಮಾರ್ಗಗಳಿಗೆ ಧಕ್ಕೆ
* ಕರಾವಳಿ ಜನರೊಗೆ ಪುನರ್ವಸತಿ ಕಲ್ಪಿಸುವ ಸಮಸ್ಯೆ

ನಿಯಂತ್ರಣ ಕ್ರಮಗಳು

* ಸಮುದ್ರ ಅಲೆಗಳ ಹೊಡೆತ ನಿಯಂತ್ರಿಸಲು ಸಮುದ್ರ ಗೋಡೆ ನಿರ್ಮಾಣ
* ತೀರಗಳಲ್ಲಿ ಮರಳು ಮತ್ತು ಗಣಿಗಾರಿಕೆ ನಿಷೇಧ
* ತೀರಗಳಲ್ಲಿ ಮರಗಳನ್ನು ಬೆಳೆಸುವುದು

4. ಭೂಕಂಪನದ ಮುನ್ನೆಚ್ಚರಿಕಾ ಕ್ರಮಗಳು

* ಭೂಕಂಪನ ವಲಯಗಳಲ್ಲಿ ಜನವಸತಿ ನಿಷೇಧ
* ಭೂಕಂಪನ ನಿರೋಧಕ ಕಟ್ಟಡಗಳ ನಿರ್ಮಾಣ
* ಬಹುಮಹಡಿ ಕಟ್ಟಡ ನಿರ್ಮಾಣವನ್ನು ಕೈಬಿಡುವುದು
* ಅಂತರ್ಜಲಕ್ಕಾಗಿ ಬಾವಿಗಳ ಆಳ ಕೊರೆತ ನಿಷೇಧಿಸುವುದು
* ಬಹುದೊಡ್ಡ ಅಣೆಕಟ್ಟು ಮತ್ತು ಜಲಾಶಯಗಳ ನಿರ್ಮಾಣಕ್ಕೆ ನಿಷೇಧ
* ಅರಣ್ಯ ನಾಶ ಮತ್ತು ತೀವ್ರ ಸ್ವರೂಪದ ಗಣಿಗಾರಿಕೆ ಚಟುವಟಿಕೆಗಳನ್ನು ತಡೆಗಟ್ಟುವುದು

## ಗ್ರಾಮೀಣ ಅಭಿವೃದ್ಧಿ

1. ಗ್ರಾಮೀಣ ಅಭಿವೃದ್ಧಿ ಅಡಿಯಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯ ಲಕ್ಷಣಗಳನ್ನು ತಿಳಿಸಿ

* ಗ್ರಾಮ, ತಾಲ್ಲೂಕು, ಜಿಲ್ಲಾ ಮೂರು ಹಂತದ ವ್ಯವಸ್ಥೆ
* ನೇರ ಹಾಗೂ ನಿಯಮಿತ ಚುನಾವಣೆಗಳು
* ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ, ಮಹಿಳೆಯರಿಗಾಗಿ ಮೀಸಲಾತಿ
* ಹಣಕಾಸು, ಆಡಳಿತ, ಮುಂಗಡ ಪತ್ರ ನೀಡಿಕೆ
* ಕಾರ್ಯನಿರ್ವಾಹಕ ಸಿಬ್ಬಂದಿ ನೀಡಿಕೆ
* ಕಟ್ಟುನಿಟ್ಟಿನ ಕ್ರಮಗಳು, ಕಡ್ಡಾಯ ಚುನಾವಣೆ ನಡೆಸುವುದು

2. ಗ್ರಾಮೀಣೋದ್ಧಾರದಲ್ಲಿ ಮಹಿಳಾ ಸ್ವಸಹಾಯ ಸಂಘಗಳ ಪಾತ್ರವನ್ನು ಸ್ಥೂಲವಾಗಿ ಪರಿಚಯಿಸಿ

* ಗ್ರಾಮೀಣ ಬಡಜನತೆಯನ್ನು ಸ್ವಾವಲಂಬಿಗಳನ್ನಾಗಿಸುವುದು
* ಸ್ವಸಹಾಯ ಸಂಘಗಳಿಂದ ಸಾಲ ಪಡೆದ ಉತ್ಪಾದಕ ಚಟುವಟಿಕೆಯಲ್ಲಿ ಸಕ್ರಿಯವಾಗಿಸುವುದು
* ಉಳಿತಾಯ ಸಂಗ್ರಹ, ಸಾಲ ವಸೂಲಾತಿಯಲ್ಲಿ ಉತ್ತಮ ಸಾಧನೆ
* ಸಾಮಾಜಿಕ ಅನಿಷ್ಠ ಪದ್ಧತಿಗಳನ್ನು ದೂರ ಮಾಡುವುದು
* ಸ್ವಚ್ಛ ಹಾಗೂ ಪ್ರಗತಿಪರ ಸಮಾಜ ಕಟ್ಟುವುದು
* ಅತಿ ಸೂಕ್ಷ್ಮ ಕೆಲಸಗಳಲ್ಲಿ ತೊಡಗಿಸಿಕೊಂಡು ಆದಾಯ ಗಳಿಕೆ

## ಹಣ ಮತ್ತು ಸಾಲ

1. ಹಣದ ವಿಕಾಸದ ಹಂತಗಳನ್ನು ತಿಳಿಸಿ ? ಸಾಲ ವಿನಿಮಯ ಪದ್ಧತಿಯನ್ನು ಅರ್ಥೈಸಿ

* ಸಾಟಿ ವಿನಿಮಯ ಪದ್ಧತಿ
* ವಸ್ತು ರೂಪದ ಹಣ
* ಲೋಹದ ಹಣ
* ಕಾಗದದ ಹಣ
* ಬ್ಯಾಂಕ್ ಹಣ
* ಪ್ಲಾಸ್ಟಿಕ್ ಹಣ
* ಹಣವನ್ನು ಬಳಸದೆ ಸರಕುಗಳನ್ನು ಸರಕುಗಳಿಗೆ ವಿನಿಮಯ

2. ಭಾರತೀಯ ರಿಜರ್ವ ಬ್ಯಾಂಕಿನ ಕಾರ್ಯಗಳೇನು ?

* ನೋಟು ಚಲಾವಣೆಯ ಏಕಸ್ವಾಮ್ಯ
* ಸರ್ಕಾರದ ಬ್ಯಾಂಕು ಆಗಿ ಕಾರ್ಯನಿರ್ವಹಣೆ
* ಬ್ಯಾಂಕುಗಳ ಬ್ಯಾಂಕ್ ಆಗಿ ಕಾರ್ಯನಿರ್ವಹಣೆ
* ರಾಷ್ಟ್ರೀಯ ಸಂದಾಯ ಕೇಂದ್ರವಾಗಿ ಕಾರ್ಯನಿರ್ವಹಣೆ
* ಸಾಲ ಪ್ರಮಾಣದ ನಿಯಂತ್ರಕ
* ವಿದೇಶಿ ವಿನಿಮಯ ಸಂಗ್ರಹದ ಮೇಲ್ವಿಚಾರಕ
* ಬ್ಯಾಂಕಿಂಗ್ ಹವ್ಯಾಸದ ಅಭಿವೃದ್ಧಿ

3. ಭಾರತದಲ್ಲಿ ಹಣ ಪೂರೈಕೆಯ ಪರಿಕಲ್ಪನೆಗಳನ್ನು ವ್ಯಾಖ್ಯಾನಿಸಿ

* $M_1$ = ಕರೆನ್ಸಿ ನೋಟುಗಳು ಮತ್ತು ನಾಣ್ಯಗಳು
* $M_2 = M_1$ + ಅಂಚೆ ಕಛೇರಿಗಳಲ್ಲಿ ಉಳಿತಾಯ
* $M_3 = M_1$ + ವಾಣಿಜ್ಯ ಬ್ಯಾಂಕು
* $M_4 = M_3$ ಅಂಚೆ ಕಛೇರಿಗಳಲ್ಲಿ ಒಟ್ಟು ಉಳಿತಾಯ

4. ಆರ್. ಬಿ. ಐ. ಬಳಸುವ ಸಾಲ ನಿಯಂತ್ರಣ ಕ್ರಮಗಳನ್ನು ವಿವರಿಸಿ

* ಮಾರ್ಜಿನ್ ಪ್ರಮಾಣದ ಬದಲಾವಣೆ
* ಸಾಲದ ಗರಿಷ್ಠ ಮಿತಿ
* ನೈತಿಕ ಒತ್ತಡ
* ನೇರ ಕ್ರಮ
* ನಿರ್ದಿಷ್ಟ ಉದ್ದೇಶಗಳಿಗೆ ನೀಡುವ ಸಾಲದ ಪ್ರಮಾನದ ಗರಿಷ್ಠ ಮಿತಿ
* ಸಾಲ ನೀಡಿಕೆ ತಡೆಯುತ್ತಿದೆ

## ಸಾರ್ವಜನಿಕ ಹಣಕಾಸು ಮತ್ತು ಆಯವ್ಯಯ

1. ಸಾರ್ವಜನಿಕ ವೆಚ್ಚದ ಪ್ರಮುಖ ಉದ್ದೇಶಗಳನ್ನು ಪಟ್ಟಿ ಮಾಡಿ

* ಆರ್ಥಿಕ ಬೆಳವಣಿಗೆಯನ್ನು ತೀವ್ರಗೊಳಿಸುವುದು
* ಉದ್ಯಮ ವ್ಯವಹಾರ ಮತ್ತು ವಾಣಿಜ್ಯ ಪ್ರೋತ್ಸಾಹ
* ಕೃಷಿ ಹಾಗೂ ಗ್ರಾಮೀಣ ಅಭಿವೃದ್ಧಿ ಪ್ರೋತ್ಸಾಹ
* ಸಂತುಲಿತ ಪ್ರಾದೇಶಿಕ ಬೆಳವಣಿಗೆ ಪ್ರೋತ್ಸಾಹ
* ಸಾಮಾಜಿಕ ಆರ್ಥಿಕ ಮೂಲಭೂತ ಸೌಕರ್ಯ ನಿರ್ಮಿಸುವುದು
* ಸಂಪೂರ್ಣ ಉದ್ಯೋಗ ಸಾಧಿಸುವುದು
* ಸಾಮಾಜಿಕ ಕಲ್ಯಾಣ ಅಧಿಕಗೊಳಿಸುವುದು

2. ಪ್ರಮುಖ ತೆರಿಗೆಯೇತರ ವರಮಾನಗಳನ್ನು ತಿಳಿಸಿ

* ಭಾರತೀಯ ರಿಜರ್ವ ಬ್ಯಾಂಕ್ ಗಳಿಸುವ ಲಾಭ
* ಭಾರತೀಯ ರೈಲ್ವೇ ಗಳಿಸುವ ಲಾಭ
* ಅಂಚೆ ಮತ್ತು ದೂರವಾಣಿ ಸೇವೆಗಳಿಂದ ಬರುವ ವರಮಾನ
* ಸಾರ್ವಜನಿಕ ಉದ್ಯಮಗಳು ಗಳಿಸುವ ವರಮಾನ
* ನಾಣ್ಯ ಮುದ್ರಣಾಲಯ ಮತ್ತು ಟಂಕಸಾಲೆಯಿಂದ ಬರುವ ವರಮಾನ
* ವಿವಿಧ ರೀತಿಯ ಶುಲ್ಕಗಳು ಮತ್ತು ದಂಡಗಳು

## ಬ್ಯಾಂಕಿನ ವ್ಯವಹಾರಗಳು

1. ಬ್ಯಾಂಕಿನ ಕಾರ್ಯಗಳನ್ನು ತಿಳಿಸಿ

* ಸಾರ್ವಜನಿಕರಿಂದ ಠೇವಣಿ ಅಂಗೀಕರಿಸುವುದು
* ಸಾರ್ವಜನಿಕರಿಗೆ ಮತ್ತು ಸಂಘ ಸಂಸ್ಥೆಗಳಿಗೆ ಸಾಲ ಕೊಡುವುದು
* ಹಣವನ್ನು ವರ್ಗಾಯಿಸುವುದು
* ಹುಂಡಿಗಳ ಸೋಡಿ ಮಾಡುವುದು
* ಭದ್ರತಾ ಕಪಾಟುಗಳನ್ನು ಬಾಡಿಗೆಗೆ ಕೊಡುವುದು
* ಸಾಲ ಪತ್ರಗಳನ್ನು ಜವಾಬ್ದಾರಿ ಪತ್ರಗಳನ್ನು ಕೊಡುವುದು

**2. ಬ್ಯಾಂಕಿನಲ್ಲಿ ತೆರೆಯಬಹುದಾದ ಖಾತೆಗಳು ಯಾವುವು ? ಒಂದನ್ನು ವಿವರಿಸಿ**

* ಉಳಿತಾಯ ಖಾತೆ
* ಚಾಲ್ತಿ ಖಾತೆ
* ಅವರ್ತ ಠೇವಣಿ ಖಾತೆ
* ನಿಶ್ಚಿತ ಠೇವಣಿ ಖಾತೆ

ಚಾಲ್ತಿ ಖಾತೆ : ಒಂದು ದಿನಕ್ಕೆ ಎಷ್ಟು ಬಾರಿಯಾದರೂ ತುಂಬಬಹುದಾದ ಖಾತೆ ಚಾಲ್ತಿ ಖಾತೆ. ಇದಕ್ಕೆ ಬಡ್ಡಿಯನ್ನು ಕೊಡುವುದಿಲ್ಲ.

**3. ಬ್ಯಾಂಕು ಖಾತೆಯನ್ನು ತೆಗೆಯುವ ವಿಧಾನವನ್ನು ತಿಳಿಸಿ**

* ಯಾವ ವಿಧದ ಖಾತೆಯನ್ನು ತೆಗೆಯಬೇಕೆಂದು ನಿರ್ಧಾರ
* ಬ್ಯಾಂಕಿನ ಅಧಿಕಾರಿ ಸಂಪರ್ಕ
* ಅರ್ಜಿ ಜೊತೆ ಲೆಕ್ಕದ ನಮೂನೆ ತುಂಬುವುದು
* ಪರಿಚಿತರ ಉಲ್ಲೇಖನವನ್ನು ಕೊಡುವುದು
* ನಮೂನೆ ಬ್ಯಾಂಕಿಗೆ ಒಪ್ಪಿಸುವುದು
* ಅಧಿಕಾರಿಯ ಒಪ್ಪಿಗೆ
* ಪ್ರಾರಂಭಿಕ ಠೇವಣಿ

## ಬ್ಯಾಂಕಿನ ವ್ಯವಹಾರಗಳು

**1. ಅಂಚೆ ಇಲಾಖೆ ಸಲ್ಲಿಸುವ ಸೇವೆಗಳಾವುವು ?**

* ರಾಷ್ಟ್ರೀಯ ಉಳಿತಾಯ ಪತ್ರ
* ಅಂಚೆ ಉಳಿತಾಯ ಖಾತೆ
* ಕಿಸಾನ್ ವಿಕಾಸ ಪತ್ರ
* ಅಂಚೆ ವಿಮೆ

**2. ನಿಮ್ಮ ಭವಿಷ್ಯದ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ನೀವು ಯಾವ ಖಾತೆಯನ್ನು ತೆರೆಯುತ್ತೀರಿ ಮತ್ತು ಏಕೆ ?**

ಆವರ್ತ ಠೇವಣಿ ಖಾತೆ :

ಏಕೆಂದರೆ, * ಭವಿಷ್ಯದ ಅವಶ್ಯಕತೆಗಳಾದ ಮಕ್ಕಳ ವಿವಾಹ, ಬೆಲೆಬಾಳುವ ವಸ್ತುಗಳ ಖರೀದಿ, ನೆಲ, ಕಾರು ಮುಂತಾದವುಗಳನ್ನು ಕೊಳ್ಳಲು ಇದು ಸೂಕ್ತ

* ಇಲ್ಲಿ ತಿಂಗಳು–ತಿಂಗಳು ವ್ಯವಸ್ಥಿತವಾಗಿ ಠೇವಣಿಗಳನ್ನು ಒಂದು ಅವಧಿಗೆ ಜಮಾ ಮಾಡಲಾಗುತ್ತದೆ. ಅವಧಿ ಮುಗಿದ ನಂತರ ಠೇವಣಿ ಮಾಡಿದ ಹಣದ ಜೊತೆಗೆ ಬಡ್ಡಿಯನ್ನು ಸೇರಿಸಿ ಹಣವನ್ನು ಬ್ಯಾಂಕು ಹಿಂದಿರುಗಿಸುತ್ತದೆ.

**3. ವಿದ್ಯಾರ್ಥಿಗಳೇ ನಿಮಗೆ ಯಾವ ಖಾತೆ ಸೂಕ್ತ ಮತ್ತು ಏಕೆ ?**

ಉಳಿತಾಯ ಖಾತೆ

ಏಕೆಂದರೆ,
* ಹಣ ಉಳಿತಾಯಕ್ಕೆ ಸಹಾಯ
* ಗರಿಷ್ಠ ಮೊತ್ತಕ್ಕೆ ಪರಿಮಿತಿ ಇಲ್ಲ
* ಹಣ ಹಿಂಪಡೆಯಲು ಚೆಕ್ ಬುಕ್ ಅಥವಾ ಹಣ ಹಿಂಪಡೆಯಲು ಚೀಟಿಯ ಮೂಲಕ ಸಾಧ್ಯ.

**4. ಉಳಿತಾಯ ಖಾತೆ ಮತ್ತು ಚಾಲ್ತಿ ಖಾತೆಗಿರುವ ವ್ಯತ್ಯಾಸಗಳೇನು ?**

ಉಳಿತಾಯ ಖಾತೆ

* ನಿಯಮಿತ, ಸಾಮಾನ್ಯವಾಗಿ ವೇತನ ಪಡೆಯುವ ವಿದ್ಯಾರ್ಥಿಗಳು, ಹಿರಿಯ ನಾಗರಿಕರು, ಪಿಂಚಣಿದಾರರು ಈ ಖಾತೆಯನ್ನು ತೆರೆಯಬಹುದು
* ಚೆಕ್ ಬುಕ್ ಅಥವಾ ಹಣ ಹಿಂದಕ್ಕೆ ಪಡೆಯುವ ಚೀಟಿಯ ಮೂಲಕ ಹಣ ಹಿಂಪಡೆಯಬಹುದು

ಚಾಲ್ತಿ ಖಾತೆ :

* ಸಾಮಾನ್ಯವಾಗಿ ಹೆಚ್ಚು ಬ್ಯಾಂಕ್ ವಹಿವಾಟು ನಡೆಸುವ ವ್ಯಾಪಾರಸ್ಥರು, ವಾಣಿಜ್ಯ ಮತ್ತು ಔದ್ಯೋಗಿಕ ಸಂಸ್ಥೆಯವರು ಈ ಖಾತೆಯನ್ನು ತೆರೆಯುತ್ತಾರೆ.

* ಠೇವಣಿಗಳ ಮರುಪಾವತಿ ಮತ್ತು ಬೇಡಿಕೆ ಠೇವಣಿಗಳು ಅಥವಾ ಉಪಸರ್ಗ ವ್ಯವಹಾರಗಳ ಮೂಲಕ ಹಣವನ್ನು ಹಿಂಪಡೆಯಲು ಸಾಧ್ಯ.

**5. ಅರ್. ಬಿ. ಐ. ನ್ನು ಬ್ಯಾಂಕುಗಳ ಬ್ಯಾಂಕ್ / ಬ್ಯಾಂಕುಗಳ ತಾಯಿ ಎನ್ನಲು ಕಾರಣವೇನು?**

* ಭಾರತದಲ್ಲಿ ಬ್ಯಾಂಕ್‌ಗಳ ಎಲ್ಲ ಚಟುವಟಿಕೆಗಳು ಅರ್.ಬಿ.ಐ.ನ ಹತೋಟಿಯಲ್ಲಿರುತ್ತದೆ
* ಅರ್.ಬಿ.ಐ. ದೇಶದ ಕೇಂದ್ರ ಬ್ಯಾಂಕ್
* ಇದು ಹಣಕಾಸಿನ ರೀತಿಯನ್ನು ರೂಪಿಸುತ್ತದೆ
* ಈ ಕಾರ್ಯನೀತಿಯನ್ನು ಎಲ್ಲ ಬ್ಯಾಂಕ್‌ಗಳು ಪಾಲಿಸಬೇಕಾಗುತ್ತದೆ

**6. ಬ್ಯಾಂಕುಗಳ ಗುಣಲಕ್ಷಣಗಳೇನು ?**

* ಹಣದ ವಹಿವಾಟು
* ಸಾಲಗಳನ್ನು ಕೊಡುವುದು
* ಪಾವತಿ ಮತ್ತು ಹಿಂದಕ್ಕೆ ಪಡೆಯುವುದು
* ಠೇವಣಿಗಳ ಅಂಗೀಕಾರ

**7. ಬ್ಯಾಂಕಿನ ಕಾರ್ಯಗಳೇನು ?**

* ಸಾರ್ವಜನಿಕರಿಂದ ಠೇವಣಿ ಅಂಗೀಕಾರ
* ಸಾರ್ವಜನಿಕರಿಗೆ ಸಂಘ ಸಂಸ್ಥೆಗಳಿಗೆ ಸಾಲ ಕೊಡುತ್ತದೆ
* ಹುಂಡಿಗಳನ್ನು ಸೋಡಿ ಮಾಡುವುದು
* ಹಣದ ವರ್ಗಾವಣೆ
* ಭದ್ರತಾ ಕಪಾಟು ಬಾಡಿಗೆಗೆ ಕೊಡುತ್ತದೆ

**8. ಬ್ಯಾಂಕುಗಳು ಸಲ್ಲಿಸುವ ಸೇವೆಗಳಾವುವು ?**

* ಖಾಸಗಿ ಮತ್ತು ವ್ಯಾಪಾರಕ್ಕೆ ಸಾಲ
* ಭದ್ರತಾ ಕಪಾಟು ಕೊಡುವುದು
* ಭರವಸೆ ಸೇವೆಗಳು
* ಮನೆಕಟ್ಟಲು ಅಥವಾ ವಾಹನ ಖರೀದಿಸಲು ಸಾಲ ಕೊಡುವುದು

**9. ಬ್ಯಾಂಕುಗಳ ವಿಧಗಳಾವುವು ?**

* ವಾಣಿಜ್ಯ ಬ್ಯಾಂಕ್
* ಸ್ಥಳೀಯ ಬ್ಯಾಂಕ್‌ಗಳು
* ಸಹಕಾರಿ ಬ್ಯಾಂಕ್
* ಆರ್. ಬಿ. ಐ.

**10. ಬ್ಯಾಂಕ್‌ಗಳಲ್ಲಿ ತೆರೆಯಬಹುದಾದ ವಿವಿಧ ಖಾತೆಗಳು ಯಾವುವು ?**

* ಉಳಿತಾಯ
* ಆವರ್ತ ಠೇವಣಿ
* ಚಾಲ್ತಿ
* ನಿಶ್ಚಿತ ಠೇವಣಿ

**11. ಬ್ಯಾಂಕ್ ಖಾತೆ ತೆಗೆಯುವುದರಿಂದ ಆಗುವ ಅನುಕೂಲಗಳು ಯಾವುವು ?**
**ಅಥವಾ ಪ್ರತಿಯೊಬ್ಬರೂ ಬ್ಯಾಂಕ್ ಖಾತೆ ತೆರೆಯಬೇಕು ಏಕೆ ?**
**ಅಥವಾ ಬ್ಯಾಂಕ್ ಖಾತೆ ತೆಗೆಯುವುದರಿಂದ ಹಲವುಪ್ರಯೋಜನಗಳಿವೆ. ಸಮರ್ಥಿಸಿ**

* ಹಣದ ಭದ್ರತೆ
* ಹಣದ ಪಾವತಿ
* ಹಣ ವಸೂಲು
* ಸಾಲ ಪಡೆಯಲು
* ವ್ಯವಹಾರ ಸುಗಮಕ್ಕೆ
* ಭದ್ರತಾ ಕಪಾಟು ಪಡೆಯಲು

**12. ಬ್ಯಾಂಕರನಿಗೂ ಮತ್ತು ಗ್ರಾಹಕರಿಗೂ ಇರುವ ಸಂಬಂಧ ತಿಳಿಸಿ**

| | | | | |
|---|---|---|---|---|
| | ಸಾಮಾನ್ಯ | | | ವಿಶೇಷ |
| ಪ್ರಾಥಮಿಕ | ಸಹಾಯಕ | ನಿಯೋಗಿ ಮತ್ತು ಮುಖ್ಯಸ್ಥನ ಸಂಬಂಧ | ಚೆಕ್ಕುಗಳ ಮನ್ನಣೆ | ಗ್ರಾಹಕರ ಲೆಕ್ಕಗಳ ಗೌಪ್ಯತೆ ಕಾಪಾಡುವುದು |

**13. ಬ್ಯಾಂಕ್ ಖಾತೆಯನ್ನು ತೆಗೆಯುವ ವಿಧಾನಗಳು**

* ಯಾವ ವಿಧವಾದ ಬ್ಯಾಂಕ್ ಖಾತೆಯನ್ನು ತೆಗೆಯಬೇಕೆಂಬುದನ್ನು ನಿರ್ಧರಿಸುವುದು

* ಪ್ರಸ್ತಾವನೆ ಅರ್ಜಿ, ಖಾತೆ ತೆರೆಯುವ ಲೆಕ್ಕದ ನಮೂನೆಯನ್ನು ತುಂಬುವುದು
* ಪರಿಚಿತರ ಉಲ್ಲೇಖನವನ್ನು ಕೊಡುವುದು
* ಬ್ಯಾಂಕ್ ಖಾತೆಯನ್ನು ತೆಗೆಯುವ ನಮೂನೆಯನ್ನು ಬ್ಯಾಂಕಿಗೆ ಒಪ್ಪಿಸುವುದು
* ಅಧಿಕಾರಿಯ ಒಪ್ಪಿಗೆ ಪಡೆಯುವುದು
* ಪ್ರಾರಂಭಿಕ ಠೇವಣಿ ಇಡುವುದು

## ವ್ಯವಹಾರದ ಜಾಗತೀಕರಣ

**1. ಅಂತರಾಷ್ಟ್ರೀಯ ಹಣಕಾಸು ನಿಧಿ(ಐ. ಎಂ. ಎಫ್.) ಪ್ರಕಾರ ಜಾಗತೀಕರಣದ ಅರ್ಥವೇನು ?**

ಸರಕು ಮತ್ತು ಸೇವೆಗಳು ಹಾಗೂ ಅಂತರಾಷ್ಟ್ರೀಯ ಬಂಡವಾಳದ ಹರಿವು, ತೀವ್ರ ಮತ್ತು ವ್ಯಾಪಕವಾದ ತಾಂತ್ರಿಕತೆಯ ಪ್ರಸರಣಗಳ ಮೂಲಕ ವಿಶ್ವದಾದ್ಯಂತ ಹೆಚ್ಚಿನ ಪ್ರಮಾಣದ ವೈವಿಧ್ಯತೆಯ ಗಡಿಯಾಚೆಗಿನ ವ್ಯವಹಾರಗಳಿಂದಾಗಿ ಹೆಚ್ಚುತ್ತಿರುವ ದೇಶಗಳ ಅಂತರ ಸ್ವಾವಲಂಬನೆ.

**2. ಐ. ಎಂ. ಎಫ್. ಜಾಗತೀಕರಣಕ್ಕೆ ನೀಡಿರುವ ವ್ಯಾಖ್ಯೆಯಿಂದ ಯಾವ ಅಂಶಗಳು ಸ್ಪಷ್ಟವಾಗುತ್ತವೆ ?**

* ಜಾಗತೀಕರಣವು ಸರಕು ಮತ್ತು ಸೇವೆಗಳ ಹೆಚ್ಚುತ್ತಿರುವ ಗಡಿಯಾಚೆಗಿನ ಚಲನೆ
* ಬಂಡವಾಳದ ತಾಂತ್ರಿಕತೆಯ ಮತ್ತು ಮಾಹಿತಿಯ ಅಂತರಾಷ್ಟ್ರೀಯ ಹರಿವು
* ಇಡೀ ವಿಶ್ವವನ್ನೇ ಒಂದು ಮಾರುಕಟ್ಟೆಯಾಗಿಸಿಕೊಂಡು ಕಚ್ಚಾ ವಸ್ತುಗಳು ಮತ್ತು ಇತರ ಸಂಪನ್ಮೂಲಗಳನ್ನು ವಿಶ್ವದ ಅಗ್ಗವಾದ ಮಾರುಕಟ್ಟೆಯಿಂದ ಪಡೆಯುವುದು
* ವಿಶ್ವದ ಯಾವುದೇ ಪ್ರದೇಶದಲ್ಲಿ ಕಡಿಮೆ ವೆಚ್ಚದಲ್ಲಿ ಸರಕುಗಳನ್ನು ಉತ್ಪಾದಿಸುವುದು

**3. ಜಾಗತೀಕರಣದಲ್ಲಿ ಅಡಕವಾಗಿರುವ ಅಂಶಗಳಾವುವು ?**

* ವಿಶ್ವವ್ಯಾಪಿ ಸಂಸ್ಥೆಗಳಿಗೆ ಪ್ರೋತ್ಸಾಹಧನ ಸೃಷ್ಟಿಸುವುದು
* ಬಂಡವಾಳ ಹತೋಟಿ ಕಡಿಮೆಗೊಳಿಸುವುದು / ನಿರ್ಮೂಲನೆ ಮಾಡುವುದು
* ಆಮದು ಮತ್ತು ರಫ್ತುಗಳ ಸುಂಕಗಳನ್ನು ನಿರ್ಮೂಲನೆ ಮಾಡಿ ಮುಕ್ತವಲಯಗಳನ್ನು ಸೃಷ್ಟಿಸುವುದು
* ಸಾರಿಗೆ ವೆಚ್ಚವನ್ನು ಸಮುದ್ರಯಾನದಲ್ಲಿ ಕಂಟೈನರ್ ಸೇವೆಯ ಅಳವಡಿಕೆಯಿಂದ ಕಡಿಮೆ ಮಾಡುವುದು

**4. ಜಾಗತೀಕರಣದ ಮುಖ್ಯ ಲಕ್ಷಣಗಳೇನು ?**

* ವಿಶ್ವ ಹಣಕಾಸಿನ ನೀತಿಯನ್ನು ಅಭಿವೃದ್ಧಿಪಡಿಸುತ್ತದೆ
* ಅಂತರಾಷ್ಟ್ರೀಯ ಸಾಂಸ್ಕೃತಿಕ ಪದ್ಧತಿಗಳನ್ನು ಹರಡಲು ಸಹಾಯ ಮಾಡುತ್ತದೆ
* ಅಂತರಾಷ್ಟ್ರೀಯ ಸಂಚಾರ ಮತ್ತು ಪರ್ಯಟನಗಳಿಗೆ ಅವಕಾಶ ಒದಗಿಸುತ್ತದೆ
* ಸ್ಥಳೀಯ ಆಹಾರ ಪದಾರ್ಥಗಳು ಬೇರೆ ದೇಶಗಳಿಗೂ ಹಬ್ಬಲು ಸಾಧ್ಯವಾಗುತ್ತದೆ

**5. ಜಾಗತೀಕರಣದ ಅನುಕೂಲತೆಗಳೇನು ? ಅಥವಾ ಜಾಗತೀಕರಣದ ಸಕಾರಾತ್ಮಕ ಪರಿಣಾಮಗಳೇನು ? ಅಥವಾ ಜಾಗತೀಕರಣದ ಪ್ರಯೋಜನಗಳೇನು ?**

* ಜನರ ಜೀವನ ಮಟ್ಟ ಹೆಚ್ಚಿಸಲು ಸಹಾಯ
* ಒಂದು ದೇಶದ ಜನರ ವರಮಾನ ಹೆಚ್ಚಿಸುತ್ತದೆ
* ಪ್ರಪಂಚದಾದ್ಯಂತ ಒಂದೇ ರೀತಿಯ ವಸ್ತುಗಳು ದೊರಕಲು ಸಾಧ್ಯವಾಗುತ್ತದೆ
* ಸ್ಥಳೀಯ ವ್ಯಾಪಾರ ಸಂಸ್ಥೆಗಳ ಮಧ್ಯೆ ಪೈಪೋಟಿ ಉಂಟಾಗಿ ಸರಕುಗಳ ಬೆಲೆಗಳು ಕಡಿಮೆ ಇರುತ್ತದೆ.

**6. ಜಾಗತೀಕರಣದ ನಕಾರಾತ್ಮಕ ಪರಿಣಾಮಗಳಾವುವು ? ಅಥವಾ ಜಾಗತೀಕರಣದ ದುಷ್ಪರಿಣಾಮಗಳಾವುವು / ಕೆಟ್ಟ ಪರಿಣಾಮಗಳಾವುವು ?**

**ಅಥವಾ ಜಾಗತೀಕರಣದ ಅನಾನುಕೂಲಗಳೇನು ?**

* ಭಯೋತ್ಪಾದನೆ ಮತ್ತು ಪಾತಕಿಗಳಿಗೆ ಸಹಾಯ
* ಅನೇಕ ಮಾರಣಾಂತಿಕ ವೈರಾಣುಗಳಿಂದ ಹಬ್ಬುವ ರೋಗಗಳು ವಿಶ್ವದಾದ್ಯಂತ ಹಬ್ಬುತ್ತವೆ. ಉದಾ : ಏಡ್ಸ್, ಕ್ಯಾನ್ಸರ್,
* ಪರಿಸರದ ಅವನತಿ
* ಶ್ರೀಮಂತರು ಇನ್ನೂ ಶ್ರೀಮಂತರಾಗುತ್ತಾರೆ ಮತ್ತು ಬಡವರು ಒಂದು ಊಟಕ್ಕೂ ಶ್ರಮಪಡಬೇಕಾಗುತ್ತದೆ
* ಸಾಂಪ್ರದಾಯಿಕ ಆಹಾರ ಸೇವನೆಗಳು ಕ್ರಮೇಣ ನಿರ್ಮೂಲ ಹೊಂದುತ್ತವೆ.

**7. ವಿಶ್ವ ವ್ಯಾಪಾರ ಸಂಘಟನೆಯ ಉದ್ದೇಶಗಳಾವುವು ?**

**ಅಥವಾ ಡಬ್ಲ್ಯೂ. ಟಿ. ಓ. ದ ಉದ್ದೇಶಗಳಾವುವು ?**

* ಅಂತರಾಷ್ಟ್ರೀಯ ವ್ಯಾಪಾರವನ್ನು ಕಾನೂನಿನ ಚೌಕಟ್ಟಿಗೆ ಒಳಪಡಿಸುವುದು
* ಅಂತರಾಷ್ಟ್ರೀಯ ವ್ಯಾಪಾರದಲ್ಲಿ ತೆರಿಗೆಗಳನ್ನು ಕಡಿಮೆ ಮಾಡುವುದು
* ಬಹುಪಕ್ಷೀಯ ವ್ಯಾಪಾರ ಒಪ್ಪಂದಗಳನ್ನು ವಿಶ್ವದಾದ್ಯಂತ ಜಾರಿಗೆ ತರುವುದು
* ವಿಶ್ವದಾದ್ಯಂತ ಮುಕ್ತ ಮತ್ತು ಸ್ವತಂತ್ರ ಅಂತರಾಷ್ಟ್ರೀಯ ವ್ಯಾಪಾರಕ್ಕೆ ಒತ್ತು ನೀಡುವುದು

**8. ವಿಶ್ವ ವ್ಯಾಪಾರ ಸಂಘಟನೆಯ ಇತರ ಗುರಿಗಳಾವುವು ?**

**ಅಥವಾ ಡಬ್ಲ್ಯೂ. ಟಿ. ಓ. ದ ಇತರ ಗುರಿಗಳಾವುವು ?**

* ಸದಸ್ಯ ರಾಷ್ಟ್ರಗಳಲ್ಲಿ ಉತ್ತಮ ಸರ್ಕಾರ ರಚಿಸಲು ಸಹಾಯ ಮಾಡುವುದು
* ಅಂತರಾಷ್ಟ್ರೀಯ ಮಟ್ಟದಲ್ಲಿ ವ್ಯಾಪಾರ ವೆಚ್ಚಗಳನ್ನು ಕಡಿಮೆ ಮಾಡುವುದು
* ಜೀವನ ವೆಚ್ಚವನ್ನು ಕಡಿಮೆ ಮಾಡಿ ಸದಸ್ಯ ರಾಷ್ಟ್ರಗಳ ಜನರ ಜೀವನ ಮಟ್ಟ ಹೆಚ್ಚಿಸುವುದು
* ಸದಸ್ಯ ರಾಷ್ಟ್ರಗಳಲ್ಲಿ ಶಾಂತಿ, ಸ್ಥಿರತೆ, ದೃಢತೆ ಕಾಪಾಡಲು ಸಹಕರಿಸುವುದು

**9. ಜಾಗತೀಕರಣದಿಂದ ಸ್ಥಳೀಯ ವಸ್ತುಗಳಿಗೆ ಮಾರುಕಟ್ಟೆಯೇ ಇಲ್ಲದೇ ಹೋಗುತ್ತದೆ. ಸಮರ್ಥಿಸಿ**

* ಹೆಚ್ಚುತ್ತಿರುವ ಪೈಪೋಟಿಯಿಂದಾಗಿ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಹೊಸದಾಗಿ ಕೈಗಾರಿಕೆಗಳನ್ನು ಸಾಧಿಸಲು ಸಾಧ್ಯವಾಗುವುದಿಲ್ಲ.
* ಹೆಚ್ಚು ಹೆಚ್ಚು ವಸ್ತುಗಳನ್ನು ಅಭಿವೃದ್ಧಿ ಹೊಂದಿರುವ ದೇಶಗಳು ತಂದು ತುಂಬಿ, ವಸ್ತುಗಳ ಬೆಲೆ ಕಡಿಮೆಯಾಗುತ್ತದೆ.
* ಅಗ ಸ್ಥಳೀಯ ವಸ್ತುಗಳಿಗೆ ಮಾರುಕಟ್ಟೆಯೇ ಇಲ್ಲದೇ ಹೋಗುತ್ತದೆ

**10. ಜಾಗತೀಕರಣವು ಪರಿಸರಕ್ಕೆ ಹಾನಿ ಸಮರ್ಥಿಸಿ**

**ಅಥವಾ ಜಾಗತೀಕರಣದಿಂದ ಪರಿಸರದ ಅವನತಿಯಾಗುತ್ತದೆ ಹೇಗೆ ?**

* ಕೈಗಾರಿಕೆಗಳಿಗೆ ಬೇಕಾದ ಕಚ್ಚಾ ಪದಾರ್ಥಗಳನ್ನು ನೈಸರ್ಗಿಕ ಸಂಪನ್ಮೂಲಗಳಿಂದ ಪಡೆಯುತ್ತೇವೆ.
* ಇದರಿಂದ ಭೂಖಂಡದಲ್ಲಿ ಮಾಲಿನ್ಯವು ಹೆಚ್ಚಾಗಿ ನಾವು ಉಸಿರಾಡುವ ವಾಯುಕೂಡ ಮಾಲಿನ್ಯದಿಂದ ಕೂಡಿ ಬದುಕುಳಿಯುವುದು ಕಷ್ಟವಾಗುತ್ತದೆ.
* ಜಾಗತೀಕರಣದಿಂದಾಗಿ ಪಟ್ಟಣಗಳು ಅಭಿವೃದ್ಧಿ ಹೊಂದಿ ಕಸದ ತೊಟ್ಟಿಗಳಾಗಿ ಮಾರ್ಪಾಡಾಗುವ ಸಾಧ್ಯತೆ ಉಂಟಾಗಿದೆ.
* ಕೈಗಾರಿಕಾ ತ್ಯಾಜ್ಯಗಳು ಶೇಖರಣೆ ಹೊಂದಿ ಮಾಲಿನ್ಯವು ಆಕಾಶದೆತ್ತರಕ್ಕೆ ಬೆಳೆಯುತ್ತದೆ

**11. ಜಾಗತೀಕರಣವು ಸಾಂಪ್ರದಾಯಿಕ ಆಹಾರ ಸೇವನೆಗಳು ಕ್ರಮೇಣ ನಿರ್ಮೂಲ ಹೊಂದುವಂತೆ ಮಾಡುತ್ತಿದೆ. ಸಮರ್ಥಿಸಿ.**

* ಜಾಗತೀಕರಣದಿಂದ ಶೀಘ್ರ ಆಹಾರ ಸರಪಳಿಗಳು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಹೆಚ್ಚಾಗಿ ಹರಡುತ್ತವೆ. ಉದಾ : ಕೆ.ಎಫ್.ಸಿ, ಮ್ಯಾಕ್‌ಡೊನಾಲ್ಡ್ ..
* ಇದರಿಂದಾಗಿ ಪ್ರಯೋಜನಕಾರಿಯಲ್ಲದ ಆಹಾರ ಸೇವನೆ ಜಾಸ್ತಿಯಾಗುತ್ತದೆ
* ಜನರ ಆರೋಗ್ಯದ ಅವನತಿ ಉಂಟಾಗುತ್ತದೆ
* ಅನೇಕ ರೋಗರುಜಿನಗಳಿಗೆ ಎಡೆಮಾಡಿಕೊಡುತ್ತದೆ

**12. ವಿಶ್ವ ವ್ಯಾಪಾರ ಸಂಘಟನೆ / ಡಬ್ಲ್ಯೂ. ಟಿ. ಓ. ದ ಬಗ್ಗೆ ಟಿಪ್ಪಣಿ ಬರೆಯಿರಿ**

* ಜಗತ್ತಿನ ಶಾಶ್ವತ ಸಂಘಟನೆ
* ವಿಶ್ವದ ವ್ಯಾಪಾರ ವ್ಯವಹಾರಗಳಿಗೆ ಸಂಬಂಧಪಟ್ಟ ಎಲ್ಲಾ ವಿಚಾರಗಳ ಮೇಲ್ವಿಚಾರಣೆ ನೋಡಿಕೊಳ್ಳುತ್ತದೆ.
* 1995, ಜನವರಿ 1 ರಂದು ಅಸ್ತಿತ್ವಕ್ಕೆ ಬಂದಿತು
* ಸದಸ್ಯ ರಾಷ್ಟ್ರಗಳ ಸಂಖ್ಯೆ – 164
* ಕೇಂದ್ರ ಕಛೇರಿ – ಸ್ವಿಟ್ಜರ್‌ಲ್ಯಾಂಡ್ನ ಜಿನೇವಾ
* ಸಮ್ಮೇಳನ – ಪ್ರತೀ ಎರಡು ವರ್ಷಕ್ಕೊಮ್ಮೆ

## ಉದ್ಯಮಗಾರಿಕೆ

**1. ಉದ್ಯಮಿ / ಉದ್ಯಮಗಾರಿಕೆಯ ಗುಣಲಕ್ಷಣ ತಿಳಿಸಿ**

* ಸೃಜನಾತ್ಮಕ
* ಕ್ರಿಯಾತ್ಮಕ
* ತಂಡವನ್ನು ಕಟ್ಟುವುದು
* ಸಮಸ್ಯೆಯ ಪರಿಹಾರ
* ನಷ್ಟ ಭರಿತಕ್ಕೆ ಸಿದ್ಧ
* ವಚನ ಬದ್ಧತೆ
* ನಾಯಕತ್ವ
* ಗುರಿಮುಟ್ಟುವಿಕೆ
* ಅತ್ಮವಿಶ್ವಾಸ

**2. ಉದ್ಯಮಿಯನ್ನು ಅರ್ಥಿಕ ಚಟುವಟಿಕೆಯ ಎಂದು ಕರೆಯುತ್ತಾರೆ ಏಕೆ ?**

* ಆರ್ಥಿಕತೆ ಯಂತ್ರದಲ್ಲಿ ವಿದ್ಯುತ್ ಸಂಚರಿಸುವ ರೀತಿಯಲ್ಲಿ ಕ್ರಿಯಾತ್ಮಕತೆಯನ್ನು ಬೆಳೆಸುತ್ತಾನೆ.
* ಜನರ ಪ್ರಯೋಜನಕಾರಿಯಲ್ಲದ ಉಳಿತಾಯದಿಂದ ಬಂಡವಾಳ ಬೆಳೆಸುತ್ತಾನೆ.
* ಎರವಲು ಸಂಪನ್ಮೂಲಗಳ ಮೂಲಕ ಉದ್ಯಮವನ್ನು ಸೃಷ್ಟಿಸುತ್ತಾನೆ.
* ಅರ್ಥಿಕ ಹಾಗೂ ಕೈಗಾರಿಕಾವೃದ್ಧಿಗೆ ಬೇಕಾದ ಹೊಸ ವಸ್ತು ಮತ್ತು ಸೇವೆಗಳನ್ನು ಪರಿಚಯಿಸುತ್ತಾನೆ.
* ತೃಪ್ತಿಕರಣದ ಅಗತ್ಯಗಳನ್ನು ಪೂರೈಸಲು ಶ್ರಮಿಸುತ್ತಾನೆ
* ಮೌಲ್ಯಾಧಾರಿತ ಸಂಪತ್ತನ್ನು ಸೃಷ್ಟಿಸುತ್ತಾನೆ.

## ಜಾಗತೀಕರಣ

**1. ಜಾಗತೀಕರಣದ ವ್ಯಾಖ್ಯೆ ನೀಡಿ. ಅದರ ಮುಖ್ಯ ಗುಣಲಕ್ಷಣಗಳನ್ನು ವಿವರಿಸಿ**

ಸರಕು ಮತ್ತು ಸೇವೆಗಳು ಹಾಗೂ ಅಂತರಾಷ್ಟ್ರೀಯ ಬಂಡವಾಳದ ಹರಿವು, ವೈವಿಧ್ಯತೆಯ ಗಡಿಯಾಚೆಗಿನ ವ್ಯವಹಾರಗಳಿಂದಾಗಿ ಹೆಚ್ಚುತ್ತಿರುವ ದೇಶಗಳ ಅಂತರ ಸ್ವಾವಲಂಬನೆ

* ಅಂತರಾಷ್ಟ್ರೀಯ ವ್ಯಾಪಾರವನ್ನು ಹೆಚ್ಚಿಸುತ್ತದೆ
* ಬಂಡವಾಳದ ನೇರ ಹೂಡಿಕೆಯನ್ನು ಹೆಚ್ಚಿಸುತ್ತದೆ
* ಡಬ್ಲ್ಯೂ. ಟಿ. ಓ. ಮತ್ತು ಐ. ಎಂ. ಎಫ್. ಪಾತ್ರ ಹೆಚ್ಚಿಸುತ್ತದೆ
* ಸಾಂಸ್ಕೃತಿಕ ಪದ್ಧತಿಗಳನ್ನು ಹರಡಲು ಸಹಾಯ
* ವಲಸೆ ಹೋಗುವುದನ್ನು ಹೆಚ್ಚಿಸುತ್ತದೆ
* ಸ್ಥಳೀಯ ಆಹಾರ ಪದಾರ್ಥಗಳು ಬೇರೆ ದೇಶಗಳಿಗೆ ಹಬ್ಬಲು ಸಾಧ್ಯವಾಗುತ್ತದೆ.

**2. ವಿಶ್ವ ವ್ಯಾಪಾರ ಸಂಘಟನೆಯ ಪ್ರಮುಖ ಉದ್ದೇಶಗಳನ್ನು ನಿರೂಪಿಸಿ.**

* ವ್ಯಾಪಾರ ಒಪ್ಪಂದಗಳನ್ನು ವಿಶ್ವದಾದ್ಯಂತ ಜಾರಿಗೆ ತರುವುದು
* ಮಧ್ಯವರ್ತಿಯಾಗಿ ಕೆಲಸ ಮಾಡುವುದು
* ಮುಕ್ತ ಹಾಗು ಸ್ವತಂತ್ರ ವ್ಯಾಪಾರಕ್ಕೆ ಒತ್ತು
* ಅಂತರಾಷ್ಟ್ರೀಯ ವ್ಯಾಪಾರದಲ್ಲಿ ತೆರಿಗೆಗಳನ್ನು ಕಡಿಮೆ ಮಾಡುವುದು
* ಅಂತರಾಷ್ಟ್ರೀಯ ವ್ಯಾಪಾರವನ್ನು ಕಾನೂನಿನ ಚೌಕಟ್ಟಿಗೆ ಒಳಪಡಿಸುವುದು
* ಹಿಂದುಳಿದ ರಾಷ್ಟ್ರಗಳು ಪ್ರಯೋಜನ ಪಡೆಯಲು ಯತ್ನ.

## ಧಾರ್ಮಿಕ ಸುಧಾರಕರು

**1. ಪೆರಿಯಾರ್ ಚಳುವಳಿಯ ಮುಖ್ಯಾಂಶಗಳನ್ನು ಪಟ್ಟಿ ಮಾಡಿ**

* ಈ ಚಳುವಳಿಯು ಬ್ರಾಹ್ಮಣೇತರ ಚಳುವಳಿಯಾಗಿ ಪ್ರಾರಂಭವಾಯಿತು
* ಬ್ರಾಹ್ಮಣೇತರರ ಮೇಲಿದ್ದ ನಿರ್ಬಂಧವನ್ನು ತೊಡೆದು ಹಾಕುವುದು ಇದರ ಉದ್ದೇಶ\
* ಇವರು ತಮಿಳು ಭಾಷೆಯನ್ನು ದ್ರಾವಿಡ ಭಾಷೆ ಎಂದರು
* ವರ್ಣಾಶ್ರಮದ ವಿರುದ್ಧ ದ್ರಾವಿಡ ಚಳುವಳಿ ಪ್ರಾರಂಭಿಸಿದರು
* ಜನಾಂಗೀಯ ಶ್ರೇಷ್ಠತೆಯನ್ನು ತಿರಸ್ಕರಿಸಿದರು
* ಅಸ್ಪೃಶ್ಯರಿಗೆ ದೇವಾಲಯ ಪ್ರವೇಶದ ಹಕ್ಕಿನ ಪರ ಹೋರಾಡಿದರು

**2. ನಾರಾಯಣ ಗುರು ಧರ್ಮ ಪರಿಪಾಲನಾ ಯೋಗಂ ಸಂಘಟನೆಯ ಕೊಡುಗೆಗಳನ್ನು ತಿಳಿಸಿ ಅಥವಾ ಹಿಂದುಳಿದ ಮತ್ತು ಶೋಷಣೆಗೊಳಗಾದ ಸಮುದಾಯದ ಸಬಲೀಕರಣಕ್ಕೆ ನಾರಾಯಣ ಗುರುರವರ ಕೊಡುಗೆಗಳನ್ನು ವಿವರಿಸಿ**

* ಶ್ರೀ ನಾರಾಯಣ ಗುರುರವರು 1903 ರಲ್ಲಿ ಧರ್ಮ ಪರಿಪಾಲನಾ ಯೋಗಂ ಆರಂಭಿಸಿದರು
* ಇದರ ಉದ್ದೇಶವೆಂದರೆ ಹಿಂದುಳಿದ ಮತ್ತು ಶೋಷಣೆಗೊಳಗಾದ ಜನರ ಸಬಲೀಕರಣ
* ಕೇರಳದಲ್ಲಿ ಹಿಂದುಳಿದ ಮತ್ತು ದಲಿತ ಸಮುದಾಯಗಳಿಗೆ ನಿರ್ಬಂಧ ಹೇರಲಾಗಿತ್ತು
* ಕೇರಳದಲ್ಲಿ ಅತಿಯಾಗಿ ಜಾತಿ ಅಂತರಗಳ ಸಮಸ್ಯೆಗಳಿದ್ದವು
* ಇದರ ವಿರುದ್ಧ ಸಾಮಾಜಿಕ ಪ್ರತಿರೋಧದ ಚಳುವಳಿ ಆರಂಭಿಸಿದರು
* ಮಾನವ ಕುಲಕ್ಕೆ ಒಂದೇ ಜಾತಿ, ಒಂದೇ ಧರ್ಮ ಮತ್ತು ಒಬ್ಬನೇ ದೇವರು ಎಂದು ಇವರ ಆಶಯವಾಗಿತ್ತು.
* ಇದನ್ನು ಸಾಧಿಸಲು ಶಿಕ್ಷಣವೇ ಮಾರ್ಗ ಎಂದು ನಂಬಿದ್ದರು
* ಕೆಳ ಸಮುದಾಯಗಳಿಗೆ ಪರ್ಯಾಯ ದೇವಾಲಯಗಳನ್ನು ನಿರ್ಮಿಸಿದರು.

**3. ಜಾತಿ ಪದ್ಧತಿಯನ್ನು ನಿವಾರಿಸುವಲ್ಲಿ ಜ್ಯೋತಿಭಾ ಫುಲೆಯವರ ಹೋರಾಟ ಮಾರ್ಗವನ್ನು ವಿವರಿಸಿ**

* ಇವರು 1873 ರಲ್ಲಿ ಸತ್ಯಶೋಧಕ ಸಮಾಜ ಸ್ಥಾಪಿಸಿದರು
* ಇದರ ಮೂಲಕ ಬ್ರಾಹ್ಮಣೇತರ ಸಮುದಾಯಗಳಿಗೆ ಮತ್ತು ಸ್ತ್ರೀಯರಿಗೆ ಸಮಾನತೆ ದೊರಕಿಸಲಾರಂಭಿಸಿದರು
* ಸೈದ್ಧಾಂತಿಕ ಹೋರಾಟವನ್ನು ಕಟ್ಟುವುದಕ್ಕಾಗಿ ಶ್ರಮಿಸಿದರು
* ಇದರ ಹಿನ್ನೆಲೆಯಲ್ಲಿ ಗುಲಾಮಗಿರಿ ಎಂಬ ಗ್ರಂಥ ರಚಿಸಿದರು
* ಶೂದ್ರರಿಗೆ ಮತ್ತು ಸ್ತ್ರೀಯರಿಗೆ ಶಾಲೆ ಪ್ರಾರಂಭಿಸಿದರು
* ತಮ್ಮ ಬಾವಿಯಲ್ಲಿ ಎಲ್ಲಾ ಜಾತಿಯವರಿಗೂ ನೀರು ಸೇದಿಕೊಳ್ಳಲು ಅವಕಾಶ ನೀಡಿದರು.
* ಹೆಣ್ಣು ಮಕ್ಕಳಿಗೆ ವಸತಿ ನಿಲಯವನ್ನು ಸ್ಥಾಪಿಸಿದರು

4. ಪಂಚಶೀಲ ತತ್ವಗಳಾವುವು ?

* ಪರಸ್ಪರ ರಾಷ್ಟ್ರಗಳ ಪ್ರಾದೇಶಿಕ ಮತ್ತು ಸಾರ್ವಭೌಮತೆಗೆ ಗೌರವ
* ಪರಸ್ಪರ ಆಕ್ರಮಣ ಮಾಡದಿರುವುದು
* ಪರಸ್ಪರ ಆಂತರಿಕ ವ್ಯವಹಾರದಲ್ಲಿ ಹಸ್ತಕ್ಷೇಪ ಮಾಡದಿರುವುದು
* ಪರಸ್ಪರ ಸಹಕಾರ ಮತ್ತು ಸಮಾನತೆ
* ಶಾಂತಿಯುತ ಸಹಬಾಳ್ವೆ

5. 1857 ರ ದಂಗೆಯ ವಿಫಲತೆಗೆ ಕಾರಣಗಳಾವುವು ?

* ಇದು ಇಡೀ ಭಾರತವನ್ನು ವ್ಯಾಪಿಸಿದ ದಂಗೆಯಾಗಿರಲಿಲ್ಲ
* ದೇಶದ ಬಿಡುಗಡೆಗೆ ನಡೆದುದಕ್ಕಿಂತ ರಾಜನ ಸ್ವಹಿತಾಸಕ್ತಿಗೆ ನಡೆಯಿತು
* ಯೋಜಿತ ದಂಗೆಯಾಗಿರದೆ ಅನಿರೀಕ್ಷಿತ ಕಾರಣಗಳಿಂದ ಪ್ರೇರಿತವಾಗಿತ್ತು
* ಬ್ರಿಟಿಷ್ ಸೈನಿಕರ ಒಗ್ಗಟ್ಟು ಮತ್ತು ಭಾರತೀಯ ಸೈನಿಕರಲ್ಲಿದ್ದ ಭಿನ್ನತೆ
* ಸೂಕ್ತ ಮಾರ್ಗದರ್ಶನದ ಕೊರತೆ
* ವ್ಯವಸ್ಥಿತ ಸಂಘಟನೆಯ ಕೊರತೆ
* ಯುದ್ಧ ತಂತ್ರ ಮತ್ತು ಸೈನಿಕ ಪರಿಣಿತಿಯ ಕೊರತೆ
* ಸೂಕ್ತ ನಾಯಕತ್ವ ಮತ್ತು ಶಿಸ್ತಿನ ಕೊರತೆ
* ದೇಶೀಯ ರಾಜರು ಸಿಪಾಯಿಗಳಿಗೆ ಬೆಂಬಲ ನೀಡಲಿಲ್ಲ

6. 1857 ರ ದಂಗೆಯ ಪರಿಣಾಮಗಳೇನು ?

* ಈಸ್ಟ್ ಇಂಡಿಯಾ ಕಂಪನಿಯ ಆಡಳಿತ ಕೊನೆಗೊಂಡಿತು
* ಬ್ರಿಟಿಷ್ ರಾಣಿಯ ಆಡಳಿತ ಪ್ರಾರಂಭವಾಯಿತು
* ಭಾರತದ ವ್ಯವಹಾರವನ್ನು ಬ್ರಿಟಿಷ್ ಪಾರ್ಲಿಮೆಂಟಿನ ಭಾರತದ ಕಾರ್ಯದರ್ಶಿಗೆ ನೀಡಲಾಯಿತು.
* ಭಾರತೀಯರ ಪ್ರೀತಿ, ಬೆಂಬಲವಿಲ್ಲದೆ ಶಾಂತಿಯುತ ಆಳ್ವಿಕೆ ನಡೆಸಲಾಗುವುದಿಲ್ಲ ಎಂದು ಬ್ರಿಟಿಷರು ಅರಿತರು
* ತಮ್ಮ ಮೇಲಿದ್ದ ಭಾರತೀಯರ ಅಭಿಪ್ರಾಯ ತಿಳಿಯದಿದ್ದದ್ದು ದಂಗೆಗೆ ಕಾರಣ ಎಂದು ಬ್ರಿಟಿಷರು ಅರಿತರು
* ಶಾಸನ ರೂಪಿಸುವ ಪ್ರಕ್ರಿಯೆಯಲ್ಲಿ ಭಾರತೀಯರನ್ನು ಸೇರಿಸಿಕೊಳ್ಳಲಾಯಿತು
* ದಂಗೆಯು ಭಾರತೀಯ ಸ್ವತಂತ್ರ ಹೋರಾಟಕ್ಕೆ ಹೊಸ ದಿಕ್ಸೂಚಿಯಾಯಿತು

7. 1857 ರ ದಂಗೆಯಲ್ಲಿ ಸೈನಿಕರ ಧಾರ್ಮಿಕ ಮನೋಭಾವವನ್ನು ಪ್ರಚೋದಿಸಿದ ಅಂಶಗಳಾವುವು ?

* ಬ್ರಿಟಿಷರು ರಾಯಲ್ ಎನ್‌ಫೀಲ್ಡ್ ಎಂಬ ನವೀನ ಬಂದೂಕನ್ನು ಸೇನೆಗೆ ಸೇರಿಸಿದರು
* ಈ ಬಂದೂಕಿನ ತುಪಾಕಿಗೆ ಹಂದಿ ಮತ್ತು ಹಸುವಿನ ಕೊಬ್ಬನ್ನು ಸವರಿದ್ದಾರೆ ಎಂಬ ವದಂತಿ ಹಬ್ಬಿತು
* ಹಿಂದೂಗಳಿಗೆ ಹಸು ಪವಿತ್ರವಾದ್ದರಿಂದ ಹಿಂದೂ ಸೈನಿಕರು ಬಂದೂಕನ್ನು ಬಳಸಲು ನಿರಾಕರಿಸಿದರು
* ಮುಸ್ಲಿಂ ಸೈನಿಕರಿಗೆ ಹಂದಿ ನಿಷಿದ್ಧವಾದ್ದರಿಂದ ಅವರೂ ಬಂದೂಕನ್ನು ಉಪಯೋಗಿಸಲು ನಿರಾಕರಿಸಿದರು
* ಬ್ರಿಟಿಷರು ಈ ಬಂದೂಕನ್ನು ಬಳಸಲು ಆಜ್ಞೆ ಮಾಡಿದುದು ಭಾರತೀಯ ಸೈನಿಕರಿಗೆ ಧಾರ್ಮಿಕ ಮನೋಭಾವ ಪ್ರಚೋದಿಸಿತು.
* ಸೈನಿಕರನ್ನು ಸಾಗರೋತ್ತರ ಸೇವೆಗೆ ಒತ್ತಾಯಿಸಿದ್ದು ಸಹ ಧಾರ್ಮಿಕ ಮನೋಭಾವ ಪ್ರಚೋದಿಸಿತು.

**8. ಪ್ರಸ್ತುತ ಜಗತ್ತಿನಲ್ಲಿ ಸಂಪರ್ಕ ಮಾಧ್ಯಮಗಳು ಮಹತ್ವದ ಪಾತ್ರ ವಹಿಸುತ್ತದೆ ಎಂದು ಹೇಗೆ ಹೇಳುವಿರಿ ?**

* ಸಂಪರ್ಕ ಮಾಧ್ಯಮಗಳು ಸರ್ಕಾರದ ನೀತಿ ನಿಯಮಗಳನ್ನು ತಿಳಿಸುತ್ತದೆ
* ನೈಸರ್ಗಿಕ ವಿಪತ್ತು ಮತ್ತು ವಿನಾಶದ ಸೂಚನೆ ನೀಡುತ್ತದೆ
* ಹವಾಗುಣದ ಮುನ್ಸೂಚನೆ ತಿಳಿಸುತ್ತದೆ
* ವ್ಯಾಪಾರ – ವಾಣಿಜ್ಯ ಅಭಿವೃದ್ಧಿಗೆ ನೆರವಾಗುತ್ತದೆ
* ಕೃಷಿ ಮತ್ತು ಕೈಗಾರಿಕಾ ಅಭಿವೃದ್ಧಿಗೂ ನೆರವಾಗುತ್ತದೆ
* ಮನರಂಜನೆ ಪೂರೈಸುತ್ತದೆ
* ದಿನನಿತ್ಯದ ಮಾಹಿತಿಗಳನ್ನು ಪೂರೈಸುತ್ತದೆ
* ದೇಶದ ಏಕತೆ ಮತ್ತು ಸಮಗ್ರತೆ ನಿರ್ವಹಣೆಗೂ ನೆರವಾಗುತ್ತದೆ

**9. ಭಾರತದಲ್ಲಿ ಜ್ಞಾನಾಧಾರಿತ ಕೈಗಾರಿಕೆಗಳ ಪ್ರಮುಖ ಪಾತ್ರವನ್ನು ತಿಳಿಸಿ**

* ಇದು ಜ್ಞಾನಾಧಾರಿತ ಉತ್ಪಾದನೆ ಮತ್ತು ಸೇವೆಯನ್ನೊಳಗೊಂಡ ಉದ್ಯಮವಾಗಿದೆ
* ಇದರಿಂದ ರಾಷ್ಟ್ರದ ಆದಾಯ ಹೆಚ್ಚಾಗುತ್ತದೆ
* ಉದ್ಯೋಗವಕಾಶ ಹೆಚ್ಚಾಗುತ್ತದೆ

# :: 4 ಅಂಕದ ಪ್ರಶ್ನೆಗಳು ::

## ಸ್ವಾತಂತ್ರ್ಯ ಹೋರಾಟ

**1. ಸ್ವಾತಂತ್ರ್ಯ ಹೋರಾಟದಲ್ಲಿ ಮಂದಗಾಮಿಗಳ ಪಾತ್ರವನ್ನು ವಿವರಿಸಿ**

* 1885 ರಿಂದ 1905 ಮಂದಗಾಮಿಗಳ ಯುಗ
* ಡಬ್ಲ್ಯೂ.ಸಿ.ಬ್ಯಾನರ್ಜಿ, ಎಂ.ಜಿ. ರಾನಡೆ, ಸುರೇಂದ್ರನಾಥ ಬ್ಯಾನರ್ಜಿ, ಗೋಪಾಲಕೃಷ್ಣ ಗೋಖಲೆ
* ಬ್ರಿಟಿಷ್ ಆಳ್ವಿಕೆ ಮತ್ತು ನ್ಯಾಯಪರತೆಯಲ್ಲಿ ನಂಬಿಕೆ
* ಪ್ರಾರ್ಥನೆ ಮತ್ತು ಮನವಿಗಳ ಮೂಲಕ ಬೇಡಿಕೆ
* ದೇಶದ ಕೈಗಾರಿಕಾಭಿವೃದ್ಧಿ, ಸೈನಿಕ ವೆಚ್ಚ ಕಡಿಮೆ ಮಾಡುವುದು, ಉತ್ತಮ ಶಿಕ್ಷಣ, ಬಡತನದ ಬಗ್ಗೆ ಅಧ್ಯಯನ ಮತ್ತು ಪರಿಹಾರದ ಬೇಡಿಕೆಗಳು
* ಸಂಪತ್ತಿನ ಸೋರುವಿಕೆ ಸಿದ್ಧಾಂತ
* ಜನರಲ್ಲಿ ರಾಜಕೀಯ ಎಚ್ಚರ ತರುವ ಪ್ರಯತ್ನ
* ಬ್ರಿಟಿಷ್ ಆಳ್ವಿಕೆಯಿಂದ ಉಂಟಾದ ದುಷ್ಪರಿಣಾಮಗಳ ಅವಲೋಕನ

**2. ಭಾರತದ ಬಡತನಕ್ಕೆ ಬ್ರಿಟಿಷ್ ಆಳ್ವಿಕೆಯೇ ಕಾರಣ ಎಂದು ಸಂಪತ್ತಿನ ಸೋರಿಕೆ ಸಿದ್ಧಾಂತ ಹೇಗೆ ನಿರೂಪಿಸಿತು ? ಅಥವಾ ಸಂಪತ್ತಿನ ಸೋರಿಕೆ ಸಿದ್ಧಾಂತವನ್ನು ವಿವರಿಸಿ**

* ಬ್ರಿಟಿಷರ ಆಳ್ವಿಕೆಯ ದುಷ್ಪರಿಣಾಮಗಳನ್ನು ಮಂದಗಾಮಿಗಳು ಮೊಟ್ಟಮೊದಲು ಅವಲೋಕಿಸಿದರು.
* ಭಾರತದ ಸಂಪತ್ತು ಇಂಗ್ಲೆಂಡ್‌ಗೆ ಸೋರಿಹೋಗುವುದನ್ನು ಅಂಕಿಅಂಶಗಳೊಂದಿಗೆ ವಿವರಿಸಿದರು
* ದಾದಾಬಾಯಿ ನವರೋಜಿಯವರು ಈ ಸಿದ್ಧಾಂತದ ಪ್ರತಿಪಾದಕ
* ಅಮದನ್ನು ಹೆಚ್ಚಿಸಿ, ರಫ್ತನ್ನು ಕಡಿಮೆ ಮಾಡಿದ್ದರಿಂದ ಸಂಪತ್ತು ಇಂಗ್ಲೆಂಡಿಗೆ ಸೋರಿ ಹೋಗುತ್ತದೆ ಎಂದು ಪ್ರತಿಪಾದಿಸಿದರು
* ಬ್ರಿಟಿಷ್ ಅಧಿಕಾರಿಗಳ ನಿವೃತ್ತಿ ವೇತನ, ವೇತನ ಆಡಳಿತಾತ್ಮಕ ವೆಚ್ಚವನ್ನು ಭಾರತವೇ ಭರಿಸಬೇಕಿತ್ತು
* ಭಾರತದ ಸಂಪತ್ತಿನ್ನು ಬ್ರಿಟಿಷರು ಬರಿದು ಮಾಡಿದ ರೀತಿಯನ್ನು ವಿವರಿಸಿದರು
* ದಾದಾಬಾಯಿ ನವರೋಜಿ, ಆರ್. ಸಿ. ದತ್ ರವರು ತಮ್ಮ ಕೃತಿಯಲ್ಲಿ ಸಂಪತ್ತಿನ ಸೋರಿಕೆಯನ್ನು ವಿವರಿಸಿದ್ದಾರೆ
* ಭಾರತದ ಸಂಪತ್ತು ಪ್ರವಾಹದ ರೀತಿಯಲ್ಲಿ ಪರೋಕ್ಷವಾಗಿ ಇಂಗ್ಲೆಂಡಿಗೆ ಸೋರಿ ಹೋಗುತ್ತಿತ್ತು.

**3. ಕ್ರಾಂತಿಕಾರಿಗಳು ರಹಸ್ಯ ಸಂಘಟನೆಗಳ ಮೂಲಕ ತಮ್ಮದೇ ಆದ ವಿಭಿನ್ನ ಮಾರ್ಗದ ಮೂಲಕ ಬ್ರಿಟಿಷರ ವಿರುದ್ಧ ಹೊರಾಡಿದರು. ಸಮರ್ಥಿಸಿ.**

* ಬ್ರಿಟಿಷರನ್ನು ಹಿಂಸಾತ್ಮಕ ಮಾರ್ಗದಿಂದ ಮಾತ್ರ ಓಡಿಸಬಹುದೆಂದು ನಂಬಿದ್ದರು
* ರಹಸ್ಯ ಸಂಘಗಳ ಮೂಲಕ ದೇಶ ಮತ್ತು ವಿದೇಶದಲ್ಲಿ ಶಾಲೆ ಸ್ಥಾಪಿಸಿ ಹಣಕಾಸು ಶಸ್ತ್ರಾಸ್ತ್ರ ಸಂಗ್ರಹಿಸಿ ಕ್ರಾಂತಿಕಾರಿಗಳಿಗೆ ತರಬೇತಿ ನೀಡಿದರು.
* ಅನುಶೀಲನಾ ಸಮಿತಿ ಮತ್ತು ಅಭಿನವ ಭಾರತ, ಭಾರತ ರಹಸ್ಯ ಸಂಘಟನೆಗಳು
* ತಮ್ಮ ಗುರಿ ಸಾಧನೆಗಾಗಿ ಬಾಂಬು ಮತ್ತು ಬಂದೂಕುಗಳನ್ನು ಪ್ರಯೋಗ ಮಾಡಿದರು
* ಬಿ.ಡಿ.ಸಾವರ್ಕರ್, ಅರಬಿಂದೋ ಘೋಷ್, ಭಗತ್ ಸಿಂಗ್, ರಾಜಗುರು ಕ್ರಾಂತಿಕಾರಿಗಳಲ್ಲಿ ಪ್ರಮುಖರು
* ಇವರು ರಾಷ್ಟ್ರೀಯ ಆಂದೋಲನಕ್ಕೆ ಸ್ಫೂರ್ತಿಯ ಚಿಲುಮೆಯಾಗಿದ್ದರು
* ಬ್ರಿಟಿಷರ ಆಡಳಿತದ ವ್ಯವಸ್ಥೆಗೆ ಧಕ್ಕೆ ತರುವ ಮೂಲಕ ಸ್ವಾತಂತ್ರ್ಯ ಪಡೆಯುವ ಕನಸುಕಂಡಿದ್ದರು.
* ಇಂಗ್ಲೆಂಡಿನ ಲೋಟಸ್ ಮತ್ತು ಡಾಗರ್ ಎಂಬ ಗುಪ್ತ ಸಂಘಟನೆಗಳ ಮೂಲಕ ಅರಬಿಂದೋ ಘೋಷರು ಸ್ವಾತಂತ್ರ್ಯ ಹೋರಾಟಕ್ಕೆ ಬೆಂಬಲ ನೀಡಿದ್ದರು.

4. ಸ್ವದೇಶಿ ಚಳುವಳಿಯು ಬಂಗಾಳದ ವಿಭಜನೆಯನ್ನು ಹಿಂಪಡೆಯಲು ಕಾರಣವಾಯಿತು. ಸ್ಪಷ್ಟೀಕರಿಸಿ.

* 1905 ರ ಬಂಗಾಳದ ವಿಭಜನೆಯನ್ನು ರಾಷ್ಟ್ರೀಯ ಕಾಂಗ್ರೆಸ್ ವಿರೋಧಿಸಿತು
* ಬಂಗಾಳದ ವಿಭಜನೆಯ ವಿರುದ್ಧ ದೇಶಾದ್ಯಂತ ಪ್ರತಿರೋಧಗಳು ಮತ್ತು ಸ್ವದೇಶಿ ಚಳುವಳಿಗಳು ನಡೆದವು.
* ವಿದೇಶಿ ವಸ್ತುಗಳನ್ನು ಬಹಿಷ್ಕರಿಸಲಾಯಿತು
* ವಿದೇಶಿ ವಸ್ತುಗಳನ್ನು ಪ್ರೋತ್ಸಾಹಿಸುವ ಸಂಸ್ಥೆಗಳನ್ನು ಬಹಿಷ್ಕರಿಸಲಾಯಿತು
* ಸ್ವದೇಶಿ ವಸ್ತುಗಳನ್ನು ಬಳಸುವಂತ ಭಾರತೀಯರನ್ನು ಪ್ರೇರೇಪಿಸಲಾಯಿತು.
* ಹಿಂದೂ ಮತ್ತು ಮುಸ್ಲಿಂ ಸಮುದಾಯಗಳ ನಡುವೆ ಭಾವೈಕ್ಯತೆ ಸಧಿಸಲು ರಕ್ಷಾ ಬಂಧನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.
* ದೇಶಾದ್ಯಂತ ಬ್ರಿಟಿಷರ ವಿರುದ್ಧ ಹರತಾಳಗಳು ನಡೆದವು
* ಅನೇಕ ರಾಷ್ಟ್ರೀಯ ನಾಯಕರು ಖಾದಿ ಬಟ್ಟೆಗಳನ್ನು ಬಳಸುವಂತೆ ಪ್ರಚಾರ ಮಾಡಿದರು

## ಗಾಂಧಿಯುಗ ಮತ್ತು ರಾಷ್ಟ್ರೀಯ ಹೋರಾಟ

1. ಗಾಂಧೀಜಿಯವರ ಅರಂಬಭಿಕ ಹೋರಾಟಗಳು ಸ್ವಾತಂತ್ರ್ಯ ಹೋರಾಟಕ್ಕೆ ಭದ್ರ ಅಡಿಪಾಯವನ್ನು ಹಾಕಿತು. ಈ ಹೇಳಿಯನ್ನು ಸಮರ್ಥಿಸಿ.

* ಗೋಖಲೆಯವರ ಮಾರ್ಗದರ್ಶನ ಪಡೆದರು
* ಸಾಮಾಜಿಕ ವಾಸ್ತವ ತಿಳಿಯಲು ಭಾರತ ದರ್ಶನ ಮಾಡಿದರು
* ರೈತರ, ದಲಿತರ ಕಾರ್ಮಿಕರ ಸಮಸ್ಯೆಗಳನ್ನು ಆಲಿಸಿದರು
* ಸಬರಮತಿಯಲ್ಲಿ ಆಶ್ರಮ ಸ್ಥಾಪಿಸಿದರು
* ಚಂಪಾರಣ್ ಚಳುವಳಿ ಆರಂಭಿಸಿದರು
* ಹತ್ತಿ ಗಿರಣಿ ಕಾರ್ಮಿಕರ ಪರವಾಗಿ ಹೋರಾಡಿದರು
* ಗುಜರಾತ್‌ನ ಖೇಡಾ ರೈತರ ಪರವಾಗಿ ಹೋರಾಟ ಮಾಡಿದರು
* ಸತ್ಯ, ಅಹಿಂಸೆ, ಸತ್ಯಾಗ್ರಹ ಮಾರ್ಗಗಳನ್ನು ಪ್ರಯೋಗಿಸಿದರು.

2. ಕ್ವಿಟ್ ಇಂಡಿಯಾ ಚಳುವಳಿಯು ಭಾರತದ ಸ್ವಾತಂತ್ರ್ಯ ಸಂಗ್ರಾಮದ ಮೈಲಿಗಲ್ಲು – ವಿವರಿಸಿ

* ಕಾಂಗ್ರೆಸ್ ಕ್ವಿಟ್ ಇಂಡಿಯಾ ಚಳುವಳಿಗೆ ಕರೆ ನೀಡಿತು
* ಬ್ರಿಟಿಷರೇ ಭಾರತ ಬಿಟ್ಟು ತೊಲಗಿ ಎನ್ನುವುದು ಇದರ ಆಶಯ
* ಗಾಂಧೀಜಿಯವರು ದೇಶಬಾಂಧವರಿಗೆ ಮಾಡು ಇಲ್ಲವೇ ಮಡಿ ಎಂದು ಕರೆ ನೀಡಿದರು
* ಕ್ರಿಪ್ಸ್‌ನ ಸಲಹೆಗಳನ್ನು ತಿರಸ್ಕರಿಸಿ ಚಳಿವಳಿಗೆ ಕರೆ ನೀಡಿದರು
* ಅನೇಕ ನಾಯಕರನ್ನು ಸರ್ಕಾರ ಬಂಧಿಸಿತು
* ಆಗ ಚಳುವಳಿಯ ನಾಯಕತ್ವವನ್ನು ಜಯಪ್ರಕಾಶ್ ನಾರಾಯಣ್ ವಹಿಸಿದರು.
* ಮುಸ್ಲಿಂಲೀಗ್ ಈ ಚಳುವಳಿಯಿಂದ ದೂರ ಉಳಿಯಿತು
* ಬ್ರಿಟಿಷರು ಈ ಚಳುವಳಿಯನ್ನು ಹತ್ತಿಕ್ಕಿದರು

3. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ರೈತರು ಮತ್ತು ಕಾರ್ಮಿಕರ ಬಂಡಾಯಗಳು ಮಹತ್ವದ ಪಾತ್ರ ವಹಿಸಿದ್ದವು. ಹೇಗೆ ?

* ಬ್ರಿಟಿಷರ ನೀತಿಯಿಂದ ರೈತು ದಂಗೆ ಎದ್ದರು
* ಚಂಪಾರಣ್ಯ ಜಿಲ್ಲೆಯಲ್ಲಿ ನೀಲಿ ಬೆಳೆಯುವುದನ್ನು ವಿರೋಧಿಸಿದರು
* ಭೂಕಂದಾಯದ ವಿರುದ್ಧ ಹರತಾಳ ನಡೆಸಿದರು
* ಮಲಬಾರ್ ಪ್ರದೇಶಗಳಲ್ಲೂ ರೈತರು ಹರತಾಳ ನಡೆಸಿದರು

* ತೆಲಂಗಾಣದಲ್ಲಿ ರೈತರು ಕಮೀನ್ದಾರರು ಹಾಗೂ ರಜಾಕರ ವಿರುದ್ಧ ಪ್ರತಿಭಟಿಸಿದರು
* ಮಹಾರಾಷ್ಟ್ರದಲ್ಲಿ ಕಡಿಮೆ ಕೂಲಿ ವಿರುದ್ಧ ಚಳುವಳಿ ನಡೆಸಿದರು
* ಕಾರ್ಮಿಕರು ತಮ್ಮ ಬೇಡಿಕೆಗಳಿಗಾಗಿ ಸಂಘಟಿತರಾದರು
* ರೈಲ್ವೆ ಕೂಲಿಗಳು ನಿಲ್ದಾಣದಲ್ಲಿ ಮುಷ್ಕರ ಹೂಡಿದರು.

4. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಬುಡಕಟ್ಟು ಬಂಡಾಯಗಳು ಅವಿಸ್ಮರಣೀಯವಾಗಿಸಿದೆ. ಹೇಗೆ ? ಅಥವಾ ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಬುಡಕಟ್ಟು ಬಂಡಾಯದ ಪಾತ್ರ ವಿವರಿಸಿ

* ಬ್ರಿಟಿಷರ ಕಂದಾಯ ನೀತಿ ವಿರುದ್ಧ ದಂಗೆ ಎದ್ದರು
* ಬ್ರಿಟಿಷರ ಅರಣ್ಯ ನೀತಿ ವಿರುದ್ಧ ದಂಗೆ ಎದ್ದರು
* ಸಂತಾಲರ ದಂಗೆಯನ್ನು ಭಾರತದ ಅದ್ಯ ಹೋರಾಟ ಎಂದು ಗುರುತಿಸಲಾಗಿದೆ
* ಸಂತಾಲರು ಬ್ರಿಟಿಷರು ಮತ್ತು ಜಮೀನ್ದಾರರ ವಿರುದ್ಧ ರಹಸ್ಯ ಸಭೆಗಳನ್ನು ನಡೆಸಿದರು
* ಜಮೀನ್ದಾರರು ಹಾಗೂ ಮಹಾರಾಜರನ್ನು ಲೂಟಿ ಮಾಡಲು ನಿರ್ಧರಿಸಿದರು
* ಬುಡಕಟ್ಟು ಜನರು ತಮ್ಮ ಶತ್ರುಗಳನ್ನು ಹತ್ಯೆ ಮಾಡಿದರು
* ಮುಂಡ ಚಳುವಳಿಯೂ ಪ್ರಮುಖವಾಗಿದೆ
* ಕರ್ನಾಟಕದಲ್ಲಿ ಹಲಗಲಿ ಬೇಡರು ಹೋರಾಟ ಮಾಡಿದರು

5. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಸುಭಾಷ್‌ಚಂದ್ರ ಬೋಸ್‌ರವರ ಪಾತ್ರ/ಕೊಡುಗೆಯನ್ನು ವಿವರಿಸಿ

* ಪ್ರತಿಷ್ಠಿತ ಹುದ್ದೆ ತ್ಯಜಿಸಿ ಚಳುವಳಿಗೆ ಧುಮುಕಿದರು
* ವಿದೇಶದಲ್ಲಿದ್ದ ಭಾರತೀಯರನ್ನು ಸಂಘಟಿಸಿದರು
* ಸಮಾಜವಾದಿ ಪಕ್ಷವನ್ನು ಸ್ಥಾಪಿಸಿದರು
* ಫಾರ್ವರ್ಡ್ ಬ್ಲಾಕ್ ಪಕ್ಷ ಕಟ್ಟಿದರು
* ಜರ್ಮನಿಯಲ್ಲಿ ಭಾರತೀಯ ಯುದ್ಧ ಖೈದಿಗಳನ್ನು ಸಂಘಟಿಸಿದರು
* ಐ. ಎನ್. ಎ. ದ ನಾಯಕತ್ವ ವಹಿಸಿದರು
* ದೆಹಲಿ ಚಲೋಗೆ ಕರೆ ನೀಡಿದರು
* ನನಗೆ ರಕ್ತ ಕೊಡಿ, ನಾನು ನಿಮಗೆ ಸ್ವಾತಂತ್ರ್ಯ ನೀಡಲು ಪ್ರಮಾಣಿಸುತ್ತೇನೆ ಎಂದರು.

6. ಸವಿನಯ ಕಾನೂನು ಭಂಗ ಚಳುವಳಿಯು ಭಾರತ ಸ್ವಾತಂತ್ರ್ಯ ಹೋರಾಟದಲ್ಲಿ ಪ್ರಮುಖ ಚಳುವಳಿಯಾಗಿತ್ತು. ವಿವರಿಸಿ

* ಗಾಂಧೀಜಿಗೆ ಚಳುವಳಿಯ ಪೂರ್ಣ ಜವಾಬ್ದಾರಿ ವಹಿಸಲಾಯಿತು
* ಸಬರಮತಿಯಲ್ಲಿ ಸಭೆ ಸೇರಿ ಚಳುವಳಿ ಹಮ್ಮಿಕೊಳ್ಳಲು ನಿರ್ಣಯಿಸಲಾಯಿತು
* 11 ಬೇಡಿಕೆಗಳ ಪಾತ್ರವನ್ನು ವೈಸ್‌ರಾಯ್‌ಗೆ ರವಾನಿಸಿದರು
* ಬೇಡಿಕೆಗಳನ್ನು ತಿರಸ್ಕರಿಸಿದ್ದರಿಂದ ಸಬರಮತಿ ಆಶ್ರಮದಿಂದ ಚಳುವಳಿ ಪ್ರಾರಂಭಿಸಿದರು
* ದಂಡಿಯಲ್ಲಿ ಉಪ್ಪನ್ನು ತಯಾರಿಸುವ ಮೂಲಕ ಕಾನೂನನ್ನು ಮುರಿದರು
* ಬ್ರಿಟಿಷರು ಗಾಂಧೀಜಿ ಜೊತೆಗೆ ಅನೇಕ ನಾಯಕರುಗಳನ್ನು ಬಂಧಿಸಿದರು
* ನಂತರ ದುಂಡು ಮೇಜಿನ ಪರಿಷತ್‌ನಲ್ಲಿ ಭಾಗವಹಿಸಲು ಹಲವು ನಾಯಕರುಗಳನ್ನು ಬಿಡುಗಡೆ ಮಾಡಿದರು.

## ಇತಿಹಾಸ

1. ತೀವ್ರಗಾಮಿಗಳ ಹೋರಾಟವು ಸ್ವಾತಂತ್ರ್ಯ ಹೋರಾಟಕ್ಕೆ ಪ್ರೇರಕ ಶಕ್ತಿಯಾಗಿತ್ತು ಸಮರ್ಥಿಸಿ ಅಥವಾ ಸ್ವಾತಂತ್ರ್ಯ ಹೋರಾಟದಲ್ಲಿ ತಿಲಕರ ಪಾತ್ರವನ್ನು ವಿವರಿಸಿ

* ಬಂಗಾಳದ ವಿಭಜನೆಯನ್ನು ವಿರೋಧಿಸಿದರು
* ಸ್ವದೇಶಿ ಚಳುವಳಿಯಲ್ಲಿ ಭಾಗಿಯಾದರು

* ಪತ್ರಿಕೆಗಳಲ್ಲಿ ಕ್ರಾಂತಿಕಾರಕ ವಿಚಾರಗಳನ್ನು ಬರೆದರು
* ಧಾರ್ಮಿಕ ಆಚರಣೆಗಳ ಮೂಲಕ ಜನರನ್ನು ಸಂಘಟಿಸಿದರು
* ತೀವ್ರಗಾಮಿಗಳಲ್ಲಿ ಬಾಲ ಗಂಗಾಧರ ತಿಲಕರು ಅಗ್ರಗಣ್ಯರು
* ಸ್ವರಾಜ್ಯವೇ ನನ್ನ ಜನ್ಮಸಿದ್ಧ ಹಕ್ಕು ಅದನ್ನು ಪಡೆದೇ ತೀರುತ್ತೇನೆ ಎಂದು ಘೋಷಿಸಿದರು
* ಕೇಸರಿ ಮತ್ತು ಮರಾಠ ಪತ್ರಿಕೆಗಳನ್ನು ಆರಂಭಿಸಿದರು
* ಬ್ರಿಟಿಷ್ ಸರ್ಕಾರವು ತಿಲಕರನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಿತು

**2. ಅಸಹಕಾರ ಚಳುವಳಿಯನ್ನು ಘೊಷಿಸಿದ ಸನ್ನಿವೇಶಗಳನ್ನು ಚರ್ಚಿಸಿ**

* ಜಲಿಯನ್ ವಾಲಾ ಬಾಗ್ ಹತ್ಯಾಕಾಂಡ
* ಬ್ರಿಟಿಷರು ಜಾರಿಗೆ ತಂದ ರೌಲತ್ ಕಾಯಿದೆ
* ಪಂಜಾಬ್‌ನಲ್ಲಿ ಸೈನಿಕ ಆಡಳಿತ ಜಾರಿಗೆ ತಂದಿದ್ದು
* ರವೀಂದ್ರ ನಾಥ ಠಾಗೋರ್‌ರು ನೈಟ್ ಹುಡ್ ಪದವಿಯನ್ನು ಸರ್ಕಾರಕ್ಕೆ ಹಿಂದಿರುಗಿಸಿದರು
* ಮುಗ್ಧ ಭಾರತೀಯರ ಕಗ್ಗೊಲೆ
* ಬ್ರಿಟಿಷರ ಒಡೆದು ಆಳುವ ನೀತಿ
* ಅಹಿಂಸೆಯ ಮೂಲಕ ಸ್ವರಾಜ್ ಗಳಿಕೆ
* ಬ್ರಿಟಿಷರ ನಿರ್ದಯಿ ಆಡಳಿತದ ವಿಕೃತ ರೂಪವನ್ನು ಜನರಿಗೆ ಪರಿಚಯಿಸುವುದು
* ಭವಿಷ್ಯದಲ್ಲಿ ಜಲಿಯನ್ ವಾಲಾ ಬಾಗ್‌ನಂತಹ ಘಟನೆಗಳು ನಡೆಯದಂತೆ ನೋಡಿಕೊಳ್ಳುವುದು

**3. ಗಾಂಧೀಜಿಯವರ ಅಂತಃಸತ್ವದ ಸಾಧನಗಳು ಸ್ವಾತಂತ್ರ್ಯ ಹೋರಾಟಕ್ಕೆ ಪ್ರೇರಕ ಶಕ್ತಿಯಾಗಿದ್ದವು. ಹೇಗೆ ?**

* ಸತ್ಯಾಗ್ರಹದ ಚಳುವಳಿಯನ್ನು ಆರಂಭಿಸಿದರು
* ಅಹಿಂಸೆಯ ಮೂಲಕ ಸ್ವಾತಂತ್ರ್ಯ ಗಳಿಸಬಹುದು
* ಅಹಿಂಸೆ, ಉಪವಾಸಗಳೆಂಬ ಮಾತೃತ್ವದ ಮಾಂತ್ರಿಕತೆಯ ಆಯುಧ ಬಳಸಿ ಬ್ರಿಟಿಷರನ್ನು ಮಣಿಸುವುದು.
* ಹಿಂದೂ – ಮುಸ್ಲಿಂ ಏಕತೆ
* ಖಿಲಾಫತ್ ಚಳುವಳಿಗೆ ಬೆಂಬಲ
* ಅಸಹಕಾರ ಚಳುವಳಿ
* ಭಾರತೀಯ ಜನಸಾಮಾನ್ಯರ ಜೊತೆ ಸಂವಾದ
* ಸಬರಮತಿ ಆಶ್ರಮ ಸ್ಥಾಪಿಸುವ ಮೂಲಕ ಹೋರಾಟ
* ಸತ್ಯ, ಅಹಿಂಸೆ, ಸತ್ಯಾಗ್ರಹಗಳು ಹೋರಾಟದ ಮಾರ್ಗಗಳು

**4. ಅಸಹಕಾರ ಚಳುವಳಿಯ ಸಂದರ್ಭದಲ್ಲಿ ಆದ ಪ್ರಮುಖ ಬೆಳವಣಿಗೆಗಳನ್ನು ಚರ್ಚಿಸಿ**

* ಮೋತಿಲಾಲ್ ನೆಹರು, ಓ. ಆರ್. ದಾಸ್ ಮೊದಲಾದವರು ವಕೀಲ ವೃತ್ತಿ ಬಿಟ್ಟರು
* ವಿದ್ಯಾರ್ಥಿಗಳನ್ನು ಶಾಲಾ ಕಾಲೇಜುಗಳನ್ನು ತೊರೆದರು
* ಪ್ರಾಂತ್ಯಗಳಿಗೆ ನಡೆದ ಚುನಾವಣೆಯನ್ನು ಬಹಿಷ್ಕರಿಸಿತು
* ರಾಷ್ಟ್ರೀಯ ವಿದ್ಯಾಲಯಗಳ ಸ್ಥಾಪನೆ
* ಠಾಗೂರವರು ನೈಟ್ ಹುಡ್ ಪದವಿಯನ್ನು ಸರ್ಕಾರಕ್ಕೆ ಹಿಂದಿರುಗಿಸಿದರು
* ವಿದೇಶಿ ಬಟ್ಟೆಗಳ ಬಹಿಷ್ಕಾರ
* ವಿದೇಶಿ ವಸ್ತುಗಳ ಮಾರಾಟ ಮಾಡುವ ಅಂಗಡಿಗಳ ಮುಂದೆ ಬಹಿಷ್ಕಾರ
* ಪ್ರಿನ್ಸ್ ಆಫ್ ವೇಲ್ಸ್ ರಾಜಕುಮಾರ ಬರುವ ಕಾರ್ಯಕ್ರಮ ವಿರೋಧಿಸುವುದು

**5. ಅಸಹಕಾರ ಚಳುವಳಿಯ ಪ್ರಮುಖ ಕಾರ್ಯಕ್ರಮಗಳನ್ನು ಪಟ್ಟಿ ಮಾಡಿ**

* ಶಾಲಾ ಕಾಲೇಜು ಮತ್ತು ನ್ಯಾಯಾಲಯಗಳನ್ನು ಬಹಿಷ್ಕರಿಸುವುದು

* ಚುನಾವಣೆ ಬಹಿಷ್ಕರಿಸುವುದು
* ಬ್ರಿಟಿಷರು ನೀಡಿರುವ ಗೌರವ ಪದವಿಗಳನ್ನು ಮತ್ತು ಸ್ಥಾನಗಳನ್ನು ವಾಪಾಸು ಮಾಡುವುದು
* ಸ್ಥಳೀಯ ಸಭೆಗಳಿಗೆ ನಾಮ ನಿರ್ದೇಶನಗೊಂಡ ಸದಸ್ಯರು ರಾಜೀನಾಮೆ ನೀಡುವುದು
* ಸರ್ಕಾರಿ ಕಾರ್ಯಕ್ರಮಗಳನ್ನು ಬಹಿಷ್ಕರಿಸುವುದು
* ವಿದೇಶಿ ವಸ್ತುಗಳ ಬಹಿಷ್ಕಾರ
* ಕೈಮಗ್ಗ ನೇಕಾರಿಕೆಗೆ ಉತ್ತೇಜನ
* ರಾಷ್ಟ್ರೀಯ ಶಾಲೆಗಳನ್ನು ತೆರೆಯುವುದು
* ಹಿಂದೂ ಮತ್ತು ಮುಸ್ಲಿಂರ ನಡುವೆ ಐಕ್ಯತೆ
* ಅಸ್ಪೃಶ್ಯತೆ ಹೋಗಲಾಡಿಸುವುದು
* ಮಹಿಳಾ ಸಬಲೀಕರಣ

## 20ನೇ ಶತಮಾನದ ರಾಜಕೀಯ ಆಯಾಮಗಳು

1. ಪ್ರಥಮ ಮಹಾಯುದ್ಧದ ಕಾರಣ ಮತ್ತು ಪರಿಣಾಮಗಳನ್ನು ಪಟ್ಟಿ ಮಾಡಿ

* ನಿರಂತರವಾದ ಸಂಘರ್ಷ (ಯೂರೋಪಿನ ರಾಷ್ಟ್ರಗಳ ನಡುವೆ)
* ಮಿಲಿಟರೀಕರಣ
* ಬಲಾಢ್ಯ ರಾಷ್ಟ್ರಗಳ ನಡುವಿನ ಶಕ್ತಿ ಅಸಮತೋಲನ
* ಉಗ್ರ ರಾಷ್ಟ್ರೀಯತೆ
* ಸಮಾಜವಾದದ ನೀತಿಗಳು
* ಪರಸ್ಪರ ವಿರುದ್ಧ ಬಣಗಳ ರಚನೆ
* ಆಸ್ಟ್ರೀಯಾದ ರಾಜಕುಮಾರನ ಹತ್ಯೆ

ಪರಿಣಾಮಗಳು :

* ರಾಷ್ಟ್ರ ಸಂಘದ ರಚನೆ
* ವರ್ಸೈಲ್ಸ್ ಒಪ್ಪಂದ
* ಯೂರೋಪಿನ ಭೂಪಟದ ಬದಲಾವಣೆ
* ಸರ್ವಾಧಿಕಾರಿಗಳ ಉಗಮಕ್ಕೆ ಕಾರಣ
* ಯೂರೋಪಿನಲ್ಲಿ ಹೊಸ ಸಂಧಿ ರಾಷ್ಟ್ರಗಳ ಉದಯ

2. ರಷ್ಯಾದ ಕ್ರಾಂತಿಯಲ್ಲಿ ಲೆನಿನ್‌ನ ಪಾತ್ರವೇನು ?

* ರೈತ ಮತ್ತು ಕಾರ್ಮಿಕರಿಗೆ ಕ್ರಾಂತಿಕಾರಿ ಮಾರ್ಗದರ್ಶನ
* ದೇಶ ಭ್ರಷ್ಟನಾದರು
* 1917 ರ ಅಕ್ಟೋಬರ್ ಕ್ರಾಂತಿಯ ನೇತಾರ
* ಶಾಂತಿ, ಆಹಾರ, ಭೂಮಿ ಜನಪರ ಘೋಷಣೆ
* ಸಮಾಜವಾದಿ ಗಣರಾಜ್ಯದ ಸ್ಥಾಪನೆ
* ಭೂಮಿ ರೈತರಿಗೆ ಸೇರಿದ್ದು ಎಂಬ ಘೋಷಣೆ
* ಎಲ್ಲಾ ರಷ್ಯನ್ನರಿಗೂ ಉಚಿತ ಶಿಕ್ಷಣ, ಕ್ರೀಡೆ, ಆರೋಗ್ಯ, ವಸತಿ
* ಕಾರ್ಲ್ ಮಾರ್ಕ್ಸ್‌ನ ವೈಜ್ಞಾನಿಕ ಸಮಾಜವಾದವನ್ನು ಪ್ರಥಮ ಬಾರಿಗೆ ಜಾರಿ
* ರಷ್ಯಾದ ಮೊಟ್ಟಮೊದಲ ಅಧ್ಯಕ್ಷ

3. ರಷ್ಯಾದ ಪ್ರಗತಿಗೆ ಸ್ಟಾಲಿನ್‌ನ ಶ್ರಮಗಳು

* ಪಂಚವಾರ್ಷಿಕ ಯೋಜನೆ ಜಾರಿ
* ಅಮೆರಿಕಾಕ್ಕೆ ಸರಿಸಮನಾಗಿ ರಷ್ಯಾದ ನಿರ್ಮಾಣ
* ಮೊಟ್ಟಮೊದಲ ಮಾನವಸಹಿತ ಉಪಗ್ರಹದ ಉಡಾವಣೆ
* ಯೂರಿ ಗಗಾರಿನ್ ಜಗತ್ತಿನ ಮೊದಲ ಗಗನಯಾತ್ರಿ
* 2ನೇ ಮಹಾಯುದ್ಧದ ನಂತರ ಸಮಾಜವಾದಿ ಬಣದ ನಾಯಕತ್ವ

* ಏಷ್ಯಾ, ಆಫ್ರಿಕಾ, ದಕ್ಷಿಣ ಅಮೆರಿಕಾ ದೇಶಗಳ ವಿಮೋಚನಾ ಹೋರಾಟಕ್ಕೆ ಬೆಂಬಲ
* ವಿಜ್ಞಾನ ತಂತ್ರಜ್ಞಾನದಲ್ಲಿ ಅಭಿವೃದ್ಧಿ
* ಕೃಷಿ ಮತ್ತು ಕೈಗಾರಿಕೆಗಳ ಅಭಿವೃದ್ಧಿ

**4. ಹಿಟ್ಲರನ ನಾಝಿವಾದವು 2ನೇ ಮಹಾಯುದ್ಧಕ್ಕೆ ಪ್ರಮುಖ ಕಾರಣವಾಯಿತು. ಸಮರ್ಥಿಸಿ.**

* ನಾಝಿವಾದವು ಜರ್ಮನ್ ಆರ್ಯನ್ ಜನಾಂಗವೇ ಜಗತ್ತಿಗೆ ಶ್ರೇಷ್ಠವೆಂದು ಪ್ರತಿಪಾದನೆ
* ಎಲ್ಲಾ ಸಮಸ್ಯೆಗೆ ಯಹೂದಿಗಳೇ ಕಾರಣ ಎಂದು ಘೋಷಣೆ
* ಜರ್ಮನಿಯ ಈ ಸ್ಥಿತಿಗೆ ಕಮ್ಯುನಿಷ್ಟರು ಮತ್ತು ಕ್ಯಾಥೋಲಿಕರು ಕಾರಣವೆಂದು ನಂಬಿಕೆ
* ಉಗ್ರ ರಾಷ್ಟ್ರೀಯವಾದದ ಪ್ರತಿಪಾದನೆ
* ಗೊಬೆಲ್ಸ್ ಮಂತ್ರಿಯ ಮೂಲಕ ಜನರಲ್ಲಿ ಭೀತಿ ಸೃಷ್ಟಿ
* ಬೂದು ಅಂಗಿ ಎಂಬ ಕ್ರೌರ್ಯ ಪಡೆಯ ರಚನೆ
* ಹೊಲೊಕಾಸ್ಟ್ ಎಂಬ ಸಾಮೂಹಿಕ ಕಗ್ಗೊಲೆ
* ಕಾನ್ಸೆಂಟ್ರೇಷನ್ ಕ್ಯಾಂಪ್‌ಗಳಲ್ಲಿ ಜನರನ್ನು ವಿಷಾನಿಲ ಬಿಟ್ಟು ಸಾಮೂಹಿಕ ಹತ್ಯೆ
* 1935 ರಲ್ಲಿ ನ್ಯೂರೆಂಬರ್ಗ್ ಕಾಯಿದೆ ಜಾರಿ
* ಜಗತ್ತನ್ನೇ ಗೆಲ್ಲಬೇಕೆಂಬ ಭಾವನೆಯಿಂದ 1939ರಲ್ಲಿ ಪೋಲೆಂಡ್ ಮೇಲೆ ಆಕ್ರಮಣ

**5. ಮುಸ್ಸೋಲಿನಿಯ ಫ್ಯಾಸಿಸ್ಟ್‌ವಾದವು ಅತ್ಯಂತ ಕ್ರೂರವಾಗಿತ್ತು. ಸಮರ್ಥಿಸಿ.**

* ಉಗ್ರ ರಾಷ್ಟ್ರೀಯವಾದ
* ಪರಕೀಯ ಶಕ್ತಿಗಳ ನಾಶ
* ಹಿಂಸೆಯ ವೈಭವೀಕರಣ
* ಜನಾಂಗೀಯ ಶ್ರೇಷ್ಠತೆ
* ನರಮೇಧಗಳಿಗೆ ಬೆಂಬಲ
* ಕಾರ್ಮಿಕ ಮುಷ್ಕರಗಳ ನಿಷೇಧ
* ಗುಪ್ತ ಪೊಲೀಸರ ಮೂಲಕ ವಿರೋಧಗಳ ದಮನ
* ಏಕಪಕ್ಷೀಯವಾಗಿ ಇಟಲಿಯ ಸರ್ವಾಧಿಕಾರಿ
* 1939 ಹಿಟ್ಲರ್‌ಗಳೊಂದಿಗೆ ಸೇರಿ 2ನೇ ಮಹಾಯುದ್ಧಕ್ಕೆ ಕಾರಣನಾದ

**6. 2ನೇ ಮಹಾಯುದ್ಧದ ಕಾರಣ ಮತ್ತು ಪರಿಣಾಮ**

* ಜರ್ಮನಿಯಲ್ಲಿ ಹಿಟ್ಲರ್ ಇಟಲಿಯಲ್ಲಿ ಮುಸೋಲಿನಿಯಂತಹ ಸರ್ವಾಧಿಕಾರಿಗಳ ಉಗಮ
* ಅತೀ ಉಗ್ರ ರಾಷ್ಟ್ರೀಯತೆ
* ಪರಸ್ಪರ ಮೈತ್ರಿ ಒಪ್ಪಂದಗಳು
* ಮಿತ್ರ ಬಣ ಮತ್ತು ಶತ್ರು ಬಣಗಳ ರಚನೆ
* ಸಾಮ್ರಾಜ್ಯಶಾಹಿ ಧೋರಣೆ
* ರಾಷ್ಟ್ರ ಸಂಘದ ವಿಫಲತೆ
* ಅರ್ಥಿಕ ಮಹಾಕುಸಿತ (1ನೇ ಮಹಾಯುದ್ಧದ ನಂತರ)
* 1939 ರಲ್ಲಿ ಜರ್ಮನಿ ಪೋಲೆಂಡ್‌ನ ಮೇಲೆ ಆಕ್ರಮಣ

**7. ಚೀನಾವು ಕ್ರಾಂತಿಯ ನಂತರ ಹೇಗೆ ಜಾಗತಿಕ ಶಕ್ತಿಯಾಗಿ ಹೊರಹೊಮ್ಮಿತು?**

* ಚೀನಾದಲ್ಲಿ ಸಾಮೂಹಿಕ ಕೃಷಿ ಪದ್ಧತಿ ಜಾರಿ
* ಉಚಿತ ಶಿಕ್ಷಣ ಮತ್ತು ಆರೋಗ್ಯ ಸೌಲಭ್ಯಗಳು
* ವಿಜ್ಞಾನ ಮತ್ತು ತಂತ್ರಜ್ಞಾನದ ಅಳವಡಿಕೆ
* ಖಾಸಗಿ ಆಸ್ತಿಯನ್ನು ಸಮಾಜದ ಆಸ್ತಿಯನ್ನಾಗಿಸಿದರು
* 1966 ರಲ್ಲಿ ಸಾಮೂಹಿಕ ಕ್ರಾಂತಿಯ ಮೂಲಕ ಅನೇಕ ತಪ್ಪು
* ಮುನ್ನಡೆಯ ಮಹಾಜಿಗಿತ ಅರ್ಥಿಕ ಕ್ರಾಂತಿ
* ಡೆಂಗ್ ಷಿಯೋಪಿಂಗ್‌ನ ಸುಧಾರಣೆಗಳು
* ಕಮ್ಯೂನಿಸ್ಟ್ ಪಕ್ಷದ ನೇತೃತ್ವದಲ್ಲಿ ಬಂಡವಾಳವಾದವನ್ನು ಅರಗಿಸಿಕೊಂಡು ಜಾಗತಿಕ ಶಕ್ತಿಯಾಯಿತು.

## ಭಾರತದ ಸಮಸ್ಯೆಗಳು ಮತ್ತು ಪರಿಹಾರೋಪಾಯಗಳು

**1. ನಿರುದ್ಯೋಗ ಸಮಸ್ಯೆಯ ನಿವರಣಾ ಕ್ರಮಗಳಾವುವು ?**

* ಸರ್ಕಾರದಿಂದ ಉದ್ಯೋಗ ಸೃಷ್ಟಿ ಕಾರ್ಯಕ್ರಮಗಳು * ಕೌಶಲ್ಯ ಆಧಾರಿತ ಶಿಕ್ಷಣ
* ಗುಣಮಟ್ಟದ ತಾಂತ್ರಿಕ ಶಿಕ್ಷಣ * ಗೃಹ ಕೈಗಾರಿಕೆಗಳಿಗೆ ಪ್ರೋತ್ಸಾಹ
* ಸ್ವಯಂ ಉದ್ಯೋಗಕ್ಕೆ ಪ್ರೋತ್ಸಾಹ
* ಮೂಲ ಬಂಡವಾಳವನ್ನು ಸಾಲ ರೂಪದಲ್ಲಿ ನೀಡುವುದು
* ವೃತ್ತಿ ಶಿಕ್ಷಣಕ್ಕೆ ಉತ್ತೇಜನ ನೀಡುವುದು

**2. ಭ್ರಷ್ಟಾಚಾರವನ್ನು ಹೇಗೆ ತಡೆಗಟ್ಟಬಹುದು**

**ಅಥವಾ ಭ್ರಷ್ಟಾಚಾರ ತಡೆಗಟ್ಟಲು ನಿಮ್ಮ ಸಲಹೆಗಳೇನು ?**

* ಪ್ರಬಲ ರಾಜಕೀಯ ಇಚ್ಛಾಶಕ್ತಿ * ಸಾರ್ವಜನಿಕರ ಸಹಕಾರ
* ಉತ್ತಮ ನಾಯಕತ್ವ * ಲೋಕಾಯುಕ್ತ ಸಂಸ್ಥೆಗಳ ಉತ್ತಮ ಕಾರ್ಯದಕ್ಷತೆ
* ಸರ್ಕಾರಿ ಕಛೇರಿಗಳಲ್ಲಿ ಸಿ. ಸಿ. ಕ್ಯಾಮೆರಾ * ಕಾನೂನಿನ ಕಠಿಣ ಶಿಕ್ಷೆ
* ಉತ್ತಮ ಅಧಿಕಾರಿ ವರ್ಗ * ತ್ವರಿತ ನ್ಯಾಯ ನಿರ್ಣಯ
* ಜನರಲ್ಲಿ ಜಾಗೃತಿ ಮೂಡಿಸುವುದು

**3. ಮಹಿಳೆಯ ಸ್ಥಾನಮಾನ ಸುಧಾರಿಸಲು ಸರ್ಕಾರ ಕೈಗೊಂಡ ಪ್ರಮುಖ ಕ್ರಮಗಳನ್ನು ತಿಳಿಸಿ**

* ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ * ಮಹಿಳಾ ಶಿಕ್ಷಣ ಉತ್ತೇಜನ
* ಮಹಿಳಾ ಆಯೋಗ ರಚನೆ * ಬಾಲ್ಯ ವಿವಾಹ ನಿಷೇಧ ಕಾಯ್ದೆ ಜಾರಿ
* ಸ್ತ್ರೀ ಶಕ್ತಿ ಸಂಘಗಳ ರಚನೆ * ರಾಜಕೀಯದಲ್ಲಿ ಮಹಿಳಾ ಮೀಸಲಾತಿ
* ಸರ್ಕಾರಿ ಉದ್ಯೋಗದಲ್ಲಿ ಮೀಸಲಾತಿ * ಮಹಿಳಾ ಜಾಗೃತಿ ಕಾರ್ಯಕ್ರಮಗಳು
* ಮಹಿಳಾ ಸ್ವ ಉದ್ಯೋಗಕ್ಕೆ ಪ್ರೋತ್ಸಾಹ

**4. ಭಯೋತ್ಪಾದನೆಯಿಂದ ಉಂಟಾಗುವ ಪರಿಣಾಮಗಳು ಹಾಗೂ ಅದರ ನಿಯಂತ್ರಣ ಕ್ರಮಗಳನ್ನು ತಿಳಿಸಿ**

ಪರಿಣಾಮಗಳು

* ಆಸ್ತಿ ಪ್ರಾಣ ಹಾನಿ * ಮಾನಸಿಕ ವೇದನೆ ಸೃಷ್ಟಿಸುತ್ತದೆ
* ಭಯದ ವಾತಾವರಣ ಸೃಷ್ಟಿಸುತ್ತದೆ * ಸರ್ಕಾರಕ್ಕೆ ನಕಾರಾತ್ಮಕ ಪ್ರಭಾವ
* ಸಾರ್ವಜನಿಕ ಸಂಪತ್ತಿನ ನಾಶ

ನಿಯಂತ್ರಣ ಕ್ರಮಗಳು

* ವಿಶೇಷ ಪರಿಣತಿ ನಿಗ್ರಹ ಪಡೆಯ ರಚನೆ * ಭಯೋತ್ಪಾದನ ನಿಗ್ರಹ ದಳ ರಚನೆ
* ರಕ್ಷಣಾ ಪಡೆಗಳ ಕಾರ್ಯಾಚರಣೆ * ಭಯೋತ್ಪಾದಕತೆಗೆ ತೀವ್ರ ವಿರೋಧ
* ಭಯೋತ್ಪಾದನಾ ಸಂಘಟನೆಗಳ ನಾಶ * ಅಂತರಾಷ್ಟ್ರೀಯ ಸಹಕಾರ

**5. ಕೋಮುವಾದವು ದೇಶದ ಏಕತೆ ಮತ್ತು ಅಖಂಡತೆಗೆ ಧಕ್ಕೆ ತರುತ್ತದೆ.ಇದನ್ನು ಹೇಗೆ ನಿಯಂತ್ರಿಸುವುದು?**

* ಏಕರೂಪ ನಾಗರಿಕ ಸಂಹಿತೆ ಜಾರಿ * ಎಲ್ಲಾ ನಾಗರಿಕರನ್ನು ಸಮಾನವಾಗಿ ಕಾಣುವುದು
* ರಾಷ್ಟ್ರೀಯ ಚಿಂತನೆ ಬೆಳೆಸುವುದು * ಜಾತ್ಯಾತೀತ ತತ್ವ ಬಳಸುವುದು
* ಮತೀಯ ಮೂಲಭೂತ ವಾದವನ್ನು ಸಾಂಸ್ಕೃತಿಕ ಕಲೆಗೆ ಧಕ್ಕೆಯಾಗದಂತೆ ತಡೆಯುವುದು
* ಎಲ್ಲಾ ಮತ ಅಥವಾ ಧರ್ಮವನ್ನು ಸಮಾನವಾಗಿ ಕಾಣುವುದು
* ಸರ್ವಧರ್ಮ ಸಮನ್ವಯತೆಯನ್ನು ಎತ್ತಿ ಹಿಡಿಯುವುದು
* ಸಂಕುಚಿತ ಭಾವನೆ ಹೋಗಲಾಡಿಸುವುದು
* ಸಹೋದರ ಭಾವನೆ ಬೆಳೆಸುವುದು

## ಭಾರತದ ಅರಣ್ಯ ಸಂಪತ್ತು

**1. ಭಾರತದಲ್ಲಿ ಅರಣ್ಯ ಸಂಪತ್ತಿನ ವಿಧಗಳನ್ನು ಪಟ್ಟಿ ಮಾಡಿ. ಒಂದನ್ನು ವಿವರಿಸಿ**

* ಉಷ್ಣವಲಯದ ನಿತ್ಯ ಹರಿದ್ವರ್ಣದ ಕಾಡುಗಳು
* ಉಷ್ಣವಲಯದ ಎಲೆ ಉದುರಿಸುವ ಕಾಡುಗಳು
* ಕುರುಚಲು ಸಸ್ಯ ಮತ್ತು ಹುಲ್ಲುಗಾವಲು * ಮರುಭೂಮಿ ಸಸ್ಯವರ್ಗ
* ಪರ್ವತದ ಕಾಡುಗಳು * ಮ್ಯಾಂಗ್ರೋವ್ ಕಾಡುಗಳು

ಉಷ್ಣ ವಲಯದ ನಿತ್ಯ ಹರಿದ್ವರ್ಣದ ಕಾಡುಗಳು :

* ವಾರ್ಷಿಕ 250 ಸೆಂ. ಮೀ. ಮಳೆಯಾಗುವ ಸ್ಥಳಗಳಲ್ಲಿ ಕಂಡುಬರುತ್ತದೆ
* ಪಶ್ಚಿಮಘಟ್ಟಗಳ ಪಶ್ಚಿಮ ಭಾಗ,ಈಶಾನ್ಯ ರಾಜ್ಯಗಳು,ಅಂಡಮಾನ್ ನಿಕೋಬಾರ್‌ಗಳಲ್ಲಿ ಹಂಚಿಕೆ
* ದಟ್ಟವಾಗಿ ಮತ್ತು ಎತ್ತರಕ್ಕೆ ಬೆಳೆಯುತ್ತದೆ
* ಯಾವುದೇ ಅವಧಿಯಲ್ಲಿ ಎಲೆಗಳನ್ನು ಉದುರಿಸದೇ ಸದಾ ಹಸಿರಾಗಿರುತ್ತದೆ
* ಮರಗಳು – ತೇಗ, ಬೀಟೆ, ಎಬೋನಿ, ಮಹಾಗನಿ, ಗುಜಾರ, ಚಂಪಾ.....

**2. ಭಾರತದಲ್ಲಿ ಇತ್ತೀಚೆಗೆ ಅರಣ್ಯ ಸಂಪತ್ತು ಕಡಿಮೆಯಾಗಲು ಕಾರಣವೇನು ?**

* ಕೃಷಿ ಕ್ಷೇತ್ರದ ವಿಸ್ತರಣೆ * ರಸ್ತೆ ಮತ್ತು ರೈಲು ಮಾರ್ಗಗಳ ನಿರ್ಮಾಣ
* ನೀರಾವರಿ ಯೋಜನೆಗಳ ನಿರ್ಮಾಣ * ಕೈಗಾರೀಕೀಕರಣ
* ನಗೀಕರಣ * ಅತಿಯಾಗಿ ಮೇಯಿಸುವಿಕೆ
* ಕಾಡ್ಗಿಚ್ಚು * ಮರಗಳ ಕಳ್ಳಸಾಗಾಣಿಕೆ

**3. ಭಾರತದಲ್ಲಿ ಅರಣ್ಯವನ್ನು ಸಂರಕ್ಷಿಸಲು ನಿಮ್ಮ ಸಲಹೆಗಳೇನು ?**

* ಅರಣ್ಯ ನಾಶ ನಿಯಂತ್ರಣ * ಮಿತಿಮೀರಿ ಮೇಯಿಸುವುದನ್ನು ನಿಯಂತ್ರಿಸುವುದು
* ಕಾಡ್ಗಿಚ್ಚು ನಿಯಂತ್ರಣ * ಅರಣ್ಯ ಅತಿಕ್ರಮಣ ತಡೆ
* ಕೀಟ ಹಾಗೂ ರೋಗಗಳ ನಿಯಂತ್ರಣ * ಕಳ್ಳ ಸಾಗಾಣಿಕೆ ತಡೆ
* ಮರಗಳನ್ನು ವೈಜ್ಞಾನಿಕವಾಗಿ ಕಡಿಯುವುದು
* ಅರಣ್ಯ ನಾಶ ನಿಯಂತ್ರಣ ಕಾಯ್ದೆಯನ್ನು ನಿಯಂತ್ರಿಸುವುದು
* ಅರಣ್ಯ ಬೆಳೆಸಲು ಪ್ರೋತ್ಸಾಹ
* ಪ್ರಾಮುಖ್ಯತೆ ಬಗ್ಗೆ ಜನರಲ್ಲಿ ಅರಿವು ಮೂಡಿಸುವುದು

**4. ಭಾರತದ ಅರಣ್ಯ ಸಂಪತ್ತು ದೇಶದ ಅಭಿವೃದ್ಧಿಯಲ್ಲಿ ಪ್ರಧಾನ ಪಾತ್ರ ವಹಿಸುತ್ತದೆ. ವಿವರಿಸಿ**

* ಪ್ರಮುಖ ನೈಸರ್ಗಿಕ ಸಂಪತ್ತು * ಪ್ರತ್ಯಕ್ಷವಾಗಿ ಮರದ ವಸ್ತುಗಳ ಪೂರೈಕೆ
* ಸೌದೆ ಮತ್ತು ಕೈಗಾರಿಕಾ ಕಚ್ಚಾ ಪದಾರ್ಥಗಳ ಪೂರೈಕೆ
* ಜಾನುವಾರುಗಳಿಗೆ ಮೇವು ಪೂರೈಕೆ * ಜನರಿಗೆ ಉದ್ಯೋಗ ನೀಡಿಕೆ
* ಹರಿಯುವ ನೀರಿನ ರಭಸವನ್ನು ಮಿತಿಗೊಳಿಸುತ್ತದೆ
* ಪ್ರವಾಹ ಮತ್ತು ಮಣ್ಣಿನ ಸವೆತದ ನಿಯಂತ್ರಣ
* ಮರುಭೂಮೀಕರಣದ ತಡೆ * ಮಣ್ಣಿನ ಫಲವತ್ತತೆ ವೃದ್ಧಿ
* ವಾಯುಗುಣದ ಸಮತೋಲನ * ವನ್ಯಜೀವಿಗಳಿಗೆ ಆಶ್ರಯ ತಾಣ
* ಪರಿಸರದ ಸಮತೋಲನ

## ಗ್ರಾಮೀಣಾಭಿವೃದ್ಧಿ

**1. ಗ್ರಾಮೀಣಾಭಿವೃದ್ಧಿಯಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಪಾತ್ರವನ್ನು ವಿವರಿಸಿ**

* ಗ್ರಾಮಗಳಿಗೆ ರಸ್ತೆ, ಚರಂಡಿ, ಕುಡಿಯುವ ನೀರು, ಬೀದಿದೀಪ, ಶಾಲೆ ಮುಂತಾದ ಸೌಕರ್ಯಗಳನ್ನು ಒದಗಿಸುವುದು
* ಉದ್ಯೋಗ ಅವಕಾಶಗಳನ್ನು ಒದಗಿಸುವುದು
* ಕೃಷಿಗೆ ನೀರಾವರಿ ವಿಸ್ತರಣೆ
* ಗ್ರಾಮೀಣ ಗುಡಿ ಕೈಗಾರಿಕೆಗಳನ್ನು ಪ್ರೋತ್ಸಾಹಿಸುವುದು
* ಗ್ರಾಮಗಳಲ್ಲಿ ಪಡಿತರ ವ್ಯವಸ್ಥೆಯನ್ನು ಬಲಪಡಿಸುವುದು
* ಗ್ರಾಮೀಣ ಸಂಸ್ಕೃತಿಯನ್ನು ಶ್ರೀಮಂತಗೊಳಿಸುವುದು
* ಅರ್ಹರಿಗೆ ಸರ್ಕಾರದ ಸೌಲಭ್ಯವನ್ನು ದೊರಕಿಸಿಕೊಡುವುದು

**2. ಗಾಂಧೀಜಿಯವರ ಗ್ರಾಮ ಸ್ವರಾಜ್ಯ ಕಲ್ಪನೆಯನ್ನು ವಿಕೇಂದ್ರೀಕರಣದ ಹಿನ್ನೆಲೆಯಲ್ಲಿ ವಿವರಿಸಿ**

* ಗ್ರಾಮದ ಆಡಳಿತಾಧಿಕಾರ ಮತ್ತು ಅಭಿವೃದ್ಧಿಯ ಜವಾಬ್ದಾರಿಯನ್ನು ಗ್ರಾಮದ ಜನರಿಗೇ ವಹಿಸಿಕೊಡುವುದು
* ನಿರ್ಧಾರ ಕೈಗೊಳ್ಳುವಲ್ಲಿ ಜನರ ಪಾಲುದಾರಿಕೆ ಹೆಚ್ಚಿಸುವುದು
* ಇದು ತಳಮಟ್ಟದಿಂದಲೇ ಯೋಜನೆ ನಿರೂಪಿಸುವಿಕೆ ಮತ್ತು ಅಭಿವೃದ್ಧಿ ಸಾಧನೆಯ ಪ್ರಕ್ರಿಯೆಯಾಗಿದೆ.
* ಇದನ್ನೇ ಗಾಂಧೀಜಿಯವರು ಗ್ರಾಮ ಸ್ವರಾಜ್ಯ ಎಂದು ಕರೆದರು
* ವಿಕೇಂದ್ರೀಕರಣವು ಎಲ್ಲರ ರೀತಿಯ ಶೋಷಣೆಗಳನ್ನು ತಡೆಯುತ್ತದೆ.
* ಮಾನವನ ಸ್ವಾತಂತ್ರ್ಯ ಮತ್ತು ಘನತೆಯನ್ನು ಸಂರಕ್ಷಿಸುತ್ತದೆ
* ಭಾರತದಲ್ಲಿ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿಗಳುಳ್ಳ ಮೂರು ಹಂತದ ಪಂಚಾಯಿತಿ ವ್ಯವಸ್ಥೆ ಅಸ್ತಿತ್ವದಲ್ಲಿದೆ

**3. ಹಣದ ಕಾರ್ಯಗಳನ್ನು ವಿವರಿಸಿ**

* ವಿನಿಮಯ ಮಾಧ್ಯಮ
* ಮೌಲ್ಯ ನಿರ್ಣಯ
* ವಿಳಂಬಿತ ಸಂದಾಯ ಪ್ರಮಾಣ
* ಖರೀದಿ ಶಕ್ತಿಯ ಸಂಗ್ರಹ
* ಖರೀದಿ ಶಕ್ತಿಯ ವರ್ಗಾವಣೆ

**4. ಬ್ಯಾಂಕ್ ಉದ್ಯಮದಲ್ಲಿ ಅಂಚೆ ಕಛೇರಿಗಳ ಪಾತ್ರವೇನು ?**

* ಇತ್ತೀಚಿನ ದಿನಗಳಲ್ಲಿ ಅಂಚೆ ಕಛೇರಿಗಳು ಬ್ಯಾಂಕ್ ವ್ಯವಹಾರಗಳನ್ನು ನಡೆಸುತ್ತಿದೆ
* ರಾಷ್ಟ್ರೀಯ ಉಳಿತಾಯ ಪತ್ರಗಳ ಮಾರಾಟ
* ಕಿಸಾನ್ ವಿಕಾಸ ಪತ್ರಗಳ ಮಾರಾಟ
* ಅಂಚೆ ಉಳಿತಾಯ ಖಾತೆಗಳ ಆರಂಭ
* ಮಾಹೆಯಾನ ತೀರು ಠೇವಣಿಗಳ ಸೌಲಭ್ಯ
* ನಿವೃತ್ತಿ ವೇತನ ಪಡೆಯಲು ಸೌಲಭ್ಯ
* ಹಣದ ವರ್ಗಾವಣೆ

**5. ಆರ್ಥಿಕ ಕ್ಷೇತ್ರದ ಅಭಿವೃದ್ಧಿಯಲ್ಲಿ ಉದ್ಯಮಿಯ ಪಾತ್ರವನ್ನು ವಿವರಿಸಿ**

* ಉದ್ಯಮಿಯು ಬಂಡವಾಳವನ್ನು ನಿರ್ಮಿಸುತ್ತಾನೆ
* ಅಧಿಕ ಪ್ರಮಾಣದ ಉದ್ಯೋಗ ಅವಕಾಶಗಳನ್ನು ಒದಗಿಸುತ್ತಾನೆ
* ದೇಶದ ಒಟ್ಟು ದೇಶೀಯ ಉತ್ಪನ್ನವನ್ನು ಹೆಚ್ಚಿಸುತ್ತಾನೆ
* ಜನರ ತಲಾ ವರಮಾನವನ್ನು ಹೆಚ್ಚಿಸುತ್ತಾನೆ

* ಮಾರುಕಟ್ಟೆಯನ್ನು ಅಭಿವೃದ್ಧಿಪಡಿಸುತ್ತಾನೆ
* ದೇಶದ ರಫ್ತು ವ್ಯಾಪಾರವನ್ನು ಹೆಚ್ಚಿಸುತ್ತಾನೆ
* ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸುತ್ತಾನೆ
* ಉತ್ತಮ ವಸ್ತುಗಳನ್ನು ಕಡಿಮೆ ದರದಲ್ಲಿ ಜನರಿಗೆ ಒದಗಿಸುತ್ತಾನೆ

**6. ಜಾಗತೀಕರಣದ ಸಕಾರಾತ್ಮಕ ಪರಿಣಾಮಗಳೇನು ?**

**ಅಥವಾ ಜಾಗತೀಕರಣ ಅಭಿವೃದ್ಧಿಶೀಲ ದೇಶಗಳಿಗೆ ಅತ್ಯಗತ್ಯ ಏಕೆ ?**

* ಹೆಚ್ಚಿನ ಸರಕು ಮತ್ತು ಸೇವೆಗಳು ಉತ್ಪಾದನೆಯಾಗಲು ಸಹಾಯ ಮಾಡುತ್ತದೆ
* ದೇಶದ ರಾಷ್ಟ್ರೀಯ ಉತ್ಪನ್ನವನ್ನು ಹೆಚ್ಚಿಸುತ್ತದೆ
* ದೇಶದ ಜನರ ವರಮಾನವನ್ನು ಹೆಚ್ಚಿಸುತ್ತದೆ
* ವಿವಿಧ ಸರಕುಗಳಿಗೆ ಜನರಿಗೆ ದೊರಕುತ್ತವೆ
* ಸರಕುಗಳ ಬೆಲೆಗಳು ಕಡಿಮೆಯಾಗುತ್ತವೆ
* ಗುಣಮಟ್ಟದ ಸರಕುಗಳು ಜನರಿಗೆ ದೊರಕುತ್ತದೆ
* ರಾಷ್ಟ್ರಗಳ ನಡುವೆ ರಾಜಕೀಯ ಸಾಮರಸ್ಯ ಉಂಟಾಗುತ್ತದೆ

**7. ಜಾಗತೀಕರಣದ ನಕಾರಾತ್ಮಕ ಪರಿಣಾಮಗಳೇನು ?**

**ಅಥವಾ ಜಾಗತೀಕರಣದಿಂದ ಅಭಿವೃದ್ಧಿಶೀಲ ರಾಷ್ಟ್ರಗಳ ಉತ್ಪಾದನಾ ಸಾಮರ್ಥ್ಯವನ್ನೇ ನಾಶ ಮಾಡಬಹುದು. ಈ ಹೇಳಿಕೆಯನ್ನು ವಿಮರ್ಶಿಸಿ**

* ಅಗ್ಗದವಸ್ತುಗಳ ಆಮದಿನಿಂದಾಗಿ ಉತ್ಪಾದನೆ ಕಡಿಮೆಯಾಗಿ ನಿರುದ್ಯೋಗ ಸಮಸ್ಯೆ ಹೆಚ್ಚಾಗುತ್ತದೆ
* ಹೊಸದಾಗಿ ಕೈಗಾರಿಕೆಗಳನ್ನು ಸ್ಥಾಪಿಸಲು ಸಾಧ್ಯವಾಗುವುದಿಲ್ಲ
* ಸ್ಥಳೀಯ ವಸ್ತುಗಳಿಗೆ ಮಾರುಕಟ್ಟೆ ಇಲ್ಲದೇ ಹೋಗುತ್ತದೆ
* ಪರಿಸರದ ಅವನತಿಗೆ ಕಾರಣವಾಗುತ್ತದೆ
* ಶ್ರೀಮಂತರು ಇನ್ನೂ ಶ್ರೀಮಂತರಾಗಿ ಬಡವರು ಒಂದು ಊಟಕ್ಕೂ ಶ್ರಮಪಡಬೇಕಾಗುತ್ತದೆ
* ಪಟ್ಟಣಗಳು ಕಸದ ತೊಟ್ಟಿಗಳಾಗಿ ಮಾರ್ಪಾಡಾಗುತ್ತದೆ

**8. ಭ್ರಷ್ಟಾಚಾರ ತಡೆಗಟ್ಟಲು ನಿಮ್ಮ ಸಲಹೆಗಳೇನು ?**

* ಪ್ರಬಲ ರಾಜಕೀಯ ಇಚ್ಛಾಶಕ್ತಿ * ಸಾರ್ವಜನಿಕರ ಸಹಕಾರ
* ಉತ್ತಮ ಅಧಿಕಾರಿ ವರ್ಗ * ಜನಜಾಗೃತಿ
* ಲೋಕಪಾಲ್ ಮತ್ತು ಲೋಕಾಯುಕ್ತ ಸಂಸ್ಥೆಗಳ ಸ್ಥಾಪನೆ
* ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ವಿಧಿಸುವುದು* ಸರ್ಕಾರಿ ಕಛೇರಿಗಳಲ್ಲಿ ಸಿಸಿ ಟಿವಿ ಅಳವಡಿಕೆ

**9. ನೆಹರೂರವರು ಪ್ರಧಾನ ಮಂತ್ರಿಗಳಾಗಿ ರಾಷ್ಟ್ರಕ್ಕೆ ನೀಡಿದ ಪ್ರಮುಖ ಕೊಡುಗೆಗಳನ್ನು ವಿವರಿಸಿ**

* ಪಟೇಲರ ಸಹಾಯದಿಂದ ದೇಶೀಯ ಸಂಸ್ಥಾನಗಳನ್ನು ಒಗ್ಗೂಡಿಸಿದರು
* ಭಾರತವನ್ನು ಭಾಷಾವಾರು ಪ್ರಾಂತ್ಯಗಳಾಗಿ ವಿಂಗಡಿಸಿದರು
* ಭಾರತದಲ್ಲಿ ಮಿಶ್ರ ಆರ್ಥಿಕತೆಗೆ ಭದ್ರ ಬುನಾದಿ ಹಾಕಿದರು
* ಬೃಹತ್ ಕೈಗಾರಿಕೆಗಳ ಸ್ಥಾಪನೆ ಮತ್ತು ಅಭಿವೃದ್ಧಿಗೆ ಚಾಲನೆ ನೀಡಿದರು
* ಪಂಚ ವಾರ್ಷಿಕ ಯೋಜನೆಗಳನ್ನು ಜಾರಿಗೆ ತಂದರು
* ಭಾರತವು ಅಣುಶಕ್ತಿ ಹೊಂದುವುದಕ್ಕೆ ತಳಹದಿ ರೂಪಿಸಿದರು
* ಪಂಚಶೀಲ ತತ್ವ ಮತ್ತು ಅಲಿಪ್ತ ನೀತಿಯ ಮೂಲಕ ಭಾರತದ ವಿದೇಶಾಂಗ ನೀತಿಯನ್ನು ನಿರೂಪಿಸಿದರು
* ಉತ್ತಮ ಆಡಳಿತದ ಮೂಲಕ ನವಭಾರತದ ಶಿಲ್ಪಿ ಎನಿಸಿದರು

**10. ಸಾಮಾಜಿಕ ನ್ಯಾಯವನ್ನು ಒದಗಿಸಿಕೊಡಲು ಅಂಬೇಡ್ಕರ್ ನಿರ್ವಹಿಸಿದ ಪಾತ್ರವನ್ನು ವಿವರಿಸಿ**

* ಸಾಮಾಜಿಕ ಸಮಾನತೆ ಇಲ್ಲದ ರಾಜಕೀಯ ಸ್ವಾತಂತ್ರ್ಯ ಅರ್ಥಹೀನವೆಂದು ನಂಬಿದ್ದರು
* ಜಾತಿ ವ್ಯವಸ್ಥೆಯ ವಿನಾಶಕ್ಕೆ ಹೋರಾಟಗಳನ್ನು ರೂಪಿಸಿದರು
* ಅಸ್ಪೃಶ್ಯತೆಯ ನಿವಾರಣೆಗೆ ಮಹರ್ ಮತ್ತು ಕಾಲಾರಾಂ ಚಳುವಳಿಯನ್ನು ರೂಪಿಸಿದರು
* ಗಾಂಧೀಜಿ ಜೊತೆಗೆ ಪೂನಾ ಒಪ್ಪಂದ ಮಾಡಿಕೊಂಡು ಅಸ್ಪೃಶ್ಯರಿಗೆ ಚುನಾವಣಾ ಕ್ಷೇತ್ರಗಳಲ್ಲಿ ಮೀಸಲಾತಿ ಪಡೆದರು.
* ಬಹಿಷ್ಕೃತ ಹಿತಕಾರಿಣಿ ಸಭಾ ಮತ್ತು ಸ್ವತಂತ್ರ ಕಾರ್ಮಿಕ ಪಕ್ಷವನ್ನು ಸ್ಥಾಪಿಸಿದರು
* ಪ್ರಬುದ್ಧ ಭಾರತ, ಜನತಾ ಮತ್ತು ಮೂಕನಾಯಕ ಎಂಬ ಪತ್ರಿಕೆಗಳನ್ನು ಆರಂಭಿಸಿದರು
* ಸಂವಿಧಾನ ಕರಡು ಸಮಿತಿಯ ಅಧ್ಯಕ್ಷರಾಗಿ ಶೋಷಿತರಿಗೆ ಮೀಸಲಾತಿ ಕಲ್ಪಿಸಿದರು
* ದೇಶದ ಮೊದಲ ಕಾನೂನು ಮಂತ್ರಿಯಾಗಿ ಅಸ್ಪೃಶ್ಯತೆಯ ನಿವಾರಣೆಗೆ ಕಾನೂನುಗಳನ್ನು ಜಾರಿಗೆ ತಂದರು.

# ನಕ್ಷೆ ಗುರುತಿಸುವಿಕೆ

## ಭಾರತದ ಭೂಪಟವನ್ನು ಬರೆದು ಈ ಕೆಳಗಿನವುಗಳನ್ನು ಗುರುತಿಸಿ

1. ಕರ್ಕಾಟಕ ಸಂಕ್ರಾಂತಿ ವೃತ್ತ ಅಥವಾ 23 $^1/_2{}^0$ ಉತ್ತರ ಅಕ್ಷಾಂಶ
2. ಭಾರತದ ಕಾಲಮಾನ ರೇಖೆ ಅಥವಾ 82 $^1/_2{}^0$ ಪೂರ್ವ ರೇಖಾಂಶ
4. ಭಾರತದ ದಕ್ಷಿಣದ ತುತ್ತತುದಿ – ಇಂದಿರಾ ಪಾಯಿಂಟ್
5. ಭಾರತದ ಉತ್ತರದ ತುತ್ತತುದಿ – ಇಂದಿರಾ ಕೋಲ್
6. ರಾಷ್ಟ್ರೀಯ ರಾಜಧಾನಿ ಕೇಂದ್ರ – ದೆಹಲಿ
7. ಪಾಕ್ ಜಲಸಂಧಿ
8. ಮನ್ನಾರ್ ಖಾರಿ
9. ಕಛ್ ಖಾರಿ
10. ಕ್ಯಾಂಬತ್ ಖಾರಿ
16. ಮೌಂಟ್ ಗಾಡ್ವಿನ್ ಆಸ್ಟಿನ್ ಅಥವಾ ಭಾರತದ ಅತ್ಯುನ್ನತ ಶಿಖರ – K2
17. ಮೌಂಟ್ ಎವರೆಸ್ಟ್
18. ಅರಾವಳಿ ಪರ್ವತ ಶ್ರೇಣಿ
19. ವಿಂಧ್ಯ ಪರ್ವತ ಶ್ರೇಣಿ
20. ಸಾತ್ಪುರ ಪರ್ವತ ಶ್ರೇಣಿ
21. ಪೂರ್ವ ಘಟ್ಟ
22. ಪಶ್ಚಿಮ ಘಟ್ಟ
23. ಗುರುಶಿಖರ ಅಥವಾ ಅರಾವಳಿ ಶ್ರೇಣಿಯ ಅತ್ಯುನ್ನತ ಶಿಖರ
24. ಅಣ್ಣೈಮುಡಿ ಅಥವಾ ದಕ್ಷಿಣ ಭಾರತದ ಅತ್ಯುನ್ನತ ಶಿಖರ
25. ಆರ್ಮಕೊಂಡ ಅಥವಾ ಪೂರ್ವ ಘಟ್ಟದ ಅತ್ಯುನ್ನತ ಶಿಖರ
26. ನೀಲಗಿರಿ ಬೆಟ್ಟ – ಪೂರ್ವ ಮತ್ತು ಪಶ್ಚಿಮ ಘಟ್ಟಗಳು ಸಂಧಿಸುವ ಸ್ಥಳ
27. ಉದಕ ಮಂಡಲ ಅಥವಾ ಊಟಿ – ನೀಲಗಿರಿ ಬೆಟ್ಟದ ಮೇಲಿರುವ ಗಿರಿಧಾಮ
28. ಕೊಂಕಣ ತೀರ
29. ಮಲಬಾರ್ ತೀರ

30. ಕೋರಮಂಡಲ ತೀರ

31. ಉತ್ತರ ಸರಕಾರ್ ತೀರ

32. ಕರ್ನಾಟಕ ತೀರ

33. ಗಂಗಾನದಿ

34. ನರ್ಮದಾ ನದಿ ಅಥವಾ ಭಾರತದ ಉದ್ದವಾದ ನದಿ

35. ಮಹಾನದಿ

36. ಗೋದಾವರಿ ನದಿ ಅಥವಾ ದಕ್ಷಿಣ ಭಾರತದ ಉದ್ದವಾದ ನದಿ

37. ಕೃಷ್ಣಾ ನದಿ ಅಥವಾ ಮಹಾಬಲೇಶ್ವರದ ಬಳಿ ಉದಯಿಸುವ ನದಿ

38. ಕಾವೇರಿ ನದಿ ಅಥವಾ ತಲಕಾವೇರಿಯಲ್ಲಿ ಉಗಮಿಸುವ ನದಿ

40. ತಾಪಿ ನದಿ

41. ದಾಮೋದರ ನದಿ ಕಣಿವೆ ಯೋಜನೆ ಅಥವಾ ಭಾರತದ ಮೊಟ್ಟಮೊದಲ ವಿವಿಧೋದ್ದೇಶ ನದಿ ಕಣಿವೆ ಯೋಜನೆ

42. ಗೋವಿಂದ ಸಾಗರ ಜಲಾಶಯ ಅಥವಾ ಭಾರತದ ನೇರವಾದ ಗುರುತ್ವವುಳ್ಳ ಅಣೆಕಟ್ಟು – ಭಾಕ್ರಾನಂಗಲ್

43. ಭಾರತದ ಉದ್ದವಾದ ಅಣೆಕಟ್ಟು – ಹಿರಾಕುಡ್

44. ಪಂಪ ಸಾಗರ ಜಲಾಶಯ – ತುಂಗಭದ್ರಾ

45. ಕೃಷ್ಣ ಮೇಲ್ದಂಡೆ ಯೋಜನೆ

46. ಗೋವಿಂದ ವಲ್ಲಭ ಪಂತ್ ಸಾಗರ – ರಿಹಾಂದ ಯೋಜನೆ

47. ಕೋಸಿ ಅಥವಾ ಭಾರತದ ಅಂತರಾಷ್ಟ್ರೀಯ ವಿವಿಧೋದ್ದೇಶ ಯೋಜನೆ

48. ನಾಗಾರ್ಜುನ ಸಾಗರ

49. ಕಾಂಡ್ಲಾ ಅಥವಾ ಕಛ್ ಖಾರಿಯ ಶಿರೋಭಾಗದಲ್ಲಿರುವ ಬಂದರು

50. ಮುಂಬೈ ಅಥವಾ ಭಾರತದ ಹೆಬ್ಬಾಗಿಲು ಬಂದರು

51. ಎಲಿಫೆಂಟಾ ಗುಹೆಗಳಿಗೆ ಸಮೀಪದಲ್ಲಿರುವ ಬಂದರು ಅಥವಾ ಜವಹರಲಾಲ್ ನೆಹರು

52. ಜುವಾರಿ ನದಿಯ ಅಳಿವೆಯ ಅಂಚಿನಲ್ಲಿರುವ ಬಂದರು ಅಥವಾ ಮರ್ಮಗೋವಾ

53. ಕರ್ನಾಟಕದ ಹೆಬ್ಬಾಗಿಲು ಅಥವಾ ನವಮಂಗಳೂರು

54. ಅರಬ್ಬೀ ಸಮುದ್ರದ ರಾಣಿ ಅಥವಾ ಕೊಚ್ಚಿ

55. ತೂತುಕುಡಿ

56. ಚೆನ್ನೈ ಅಥವಾ ಭಾರತದ ಹಳೆಯ ಬಂದರು

57. ಎನ್ನೋರ್

58. ಭೂಭಾಗದಿಂದ ಸುತ್ತುವರೆದ ಆಳವಾದ ಬಂದರು ಅಥವಾ ವಿಶಾಖಪಟ್ಟಣಂ

59. ಪಾರಾದೀಪ್

60. ಹಾಲ್ಡಿಯಾ – ಹೂಗ್ಲಿ ಮತ್ತು ಹಾಲ್ಡಿ ನದಿಗಳ ಸಂಗಮ ಸ್ಥಳ

61. ಎರಡನೇ ಅತಿ ದೊಡ್ಡ ಬಂದರು ಅಥವಾ ಕೋಲ್ಕತ್ತಾ

62. ಆಗ್ನೇಯ ಏಷ್ಯಾದ ದೊಡ್ಡ ಬಂದರು ಅಥವಾ ಕೋಲ್ಕತ್ತಾ

63. ಭಾರತದ ಚಹಾದ ಬಂದರು ಅಥವಾ ಕೋಲ್ಕತ್ತಾ

64. ಪೋರ್ಟ್‌ಬ್ಲೇರ್

65. ಇಂದಿರಾಗಾಂಧಿ ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಅಥವಾ ದೆಹಲಿ

66. ಛತ್ರಪತಿ ಶಿವಾಜಿ ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಅಥವಾ ಮುಂಬೈ

67. ನೇತಾಜಿ ಸುಭಾಷ್‌ಚಂದ್ರ ಬೋಸ್ ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಅಥವಾ ಕೋಲ್ಕತ್ತಾ

68. ಅಣ್ಣಾ ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಅಥವಾ ಚೆನ್ನೈ

69. ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಅಥವಾ ಬೆಂಗಳೂರು

70. ರಾಜೀವ ಗಾಂಧಿ ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಅಥವಾ ಹೈದರಾಬಾದ್

71. ಶ್ರೀ ಗುರು ರಾಮದಾಸಜೀ ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಅಥವಾ ಅಮೃತಸರ

72. ಲೋಕಪ್ರಿಯ ಗೋಪಿನಾಥ್ ಬೋರ್ಡೋಲೋಯಿ ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಅಥವಾ ಗುವಾಹಟಿ

73. ಬಿಜು ಪಾಟ್ನಾಯಕ್ ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಅಥವಾ ಭುವನೇಶ್ವರ

74. ಸರ್ದಾರ್ ವಲ್ಲಭ ಭಾಯ್ ಪಟೇಲ್ ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಅಥವಾ ಅಹಮದಾಬಾದ್


75. ವೀರ ಸಾವರ್ಕರ್ ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಅಥವಾ ಪೋರ್ಟ್‌ಬ್ಲೇರ್

76. ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಅಥವಾ ನಾಗ್ಪುರ


77. ಚಾರುಕಿ ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಅಥವಾ ಶಿಲ್ಲಾಂಗ್


78. ಲಾಲ್ ಬಹಾದ್ದೂರ್ ಶಾಸ್ತ್ರಿ ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಅಥವಾ ವಾರಾಣಸಿ

(1). ಪ್ರಶ್ನೆಪತ್ರಿಕೆಯಲ್ಲಿರುವ ಒಂದರಿಂದ - ಹದಿನಾರು ಅಂಶಗಳು





Scanned with CamScanner


17-23
26
18
23
17
19
20
22
21
26
Scanned with
CamScanner





Scanned with CamScanner


33-40
33
34
40
35
36
37
38
Scanned with CamScanner

41 - 48


[illegible]




Scanned with CamScanner

49 - 64

ಬಂದರುಗಳು





Scanned with CamScanner

(6)

65 - 78

ಅಂತರಾಷ್ಟ್ರೀಯ ವಿಮಾನ ನಿಲ್ದಾಣ




Scanned with CamScanner